ಮೇ ದಿನ ವಿಶೇಷಾಂಕ-1989

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ ೧೯-೨೨ ಮೇ ೧೮-೧೯೮೯ ರೂ. ೨-೫೦



ಮಾಸ್ಕೋದಲ್ಲಿ ಮೇ ದಿನದಂದು ಹಬ್ಬದ ಸಡಗರ

ಕರ್ನಾಟಕ ರಾಜ್ಯ ಸಮಿತಿ ಕರೆ

ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ

ಕಾಂಗ್ರೆಸ್ [ಐ] ಸೋಲಿಸಿ

1989 ಮೇ 4 ಮತ್ತು 5ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಕರ್ನಾಟಕ ರಾಜ್ಯ ಸಮಿತಿಯು ಕೇಂದ್ರ ಕಾಂಗ್ರೆಸ್ (ಐ) ಸರ್ಕಾರವೂ ಪ್ರಜಾಪ್ರಭುತ್ವದ ವಿರುದ್ಧವಾಗಿ, ವಿಧಾನ ಸಭಾಪತಿಗಳ ಸಮ್ಮೇಳನದ ಸರ್ವಾನುಮತದ ಅಭಿಪ್ರಾಯ, ಸರ್ಕಾರಿಯೂ ಆಯೋಗದ ಶಿಫಾರಸುಗಳ ವಿರುದ್ಧವಾಗಿ ಕರ್ನಾಟಕದಲ್ಲಿ ಜನತಾ ದಳ ಮಂತ್ರಿ ಮಂಡಳವನ್ನು ವಜಾ ಮಾಡಿ, ವಿಧಾನ ಸಭೆಯನ್ನು ವಿಸರ್ಜಿಸಿ, ರಾಷ್ಟ್ರಪತಿ ಆಡಳಿತವನ್ನು ಹೇರಿರುವುದನ್ನು ಪ್ರತಿಭಟಿಸಲು 1989 ಏಪ್ರಿಲ್ 27 ರಂದು ನಡೆದ 'ಕರ್ನಾಟಕ ಬಂದ್' ನಲ್ಲಿ ಭಾಗವಹಿಸಿದ ಕರ್ನಾಟಕದ ಜನತೆಯನ್ನು ಅಭಿನಂದಿಸಿದೆ. ಈ ಸಂದರ್ಭದಲ್ಲಿ ನೀಡಿದ ಪತ್ರಿಕಾ ಹೇಳಿಕೆಯ ಇತರ ಅಂಶ ಮುಂದೆಕೊಡಲಾಗಿದೆ.

ಅಧಿಕಾರ ಶಾಹೀ ದಾರಿ

ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ಸರ್ಕಾರವು ಅನುಸರಿಸುತ್ತಾ ಬಂದ ಜನವಿರೋಧಿ ಆರ್ಥಿಕ ನೀತಿಯಿಂದಾಗಿ ವಿಪರೀತ ಬೆಲೆ ಏರಿಕೆ, ನಿರುದ್ಯೋಗದ ಬೆಳವಣಿಗೆ, 1,70,000 ಕ್ಕಿಂತಲೂ ಹೆಚ್ಚು ಕೈಗಾರಿಕಾ ಘಟಕಗಳು ರೋಗಗ್ರಸ್ತವಾಗಿ ಮುಚ್ಚಿ ಹೋಗಿರುವುದು, ವಿದೇಶಗಳಿಗೆ ಮರುಪಾವತಿ ಮಾಡಬೇಕಾದ ಸಾಲ ಒಂದು ಲಕ್ಷ ಕೋಟಿ ರೂಪಾಯಿಯನ್ನು ಮುಟ್ಟಿ, ಉತ್ಪಾದನೆ, ಉದ್ಯೋಗ ಸ್ಥಿತಿಗಳು ಸಾಲದ ಮರು ಪಾವತಿಯನ್ನೇ ಅವಲಂಬಿಸಬೇಕಾಗಿರುವುದು ಮತ್ತು ಇತರ ದಿವಾಳಿಕೋರ ನೀತಿಗಳಿಂದಾಗಿ ಸರ್ವತೋಮುಖವಾದ ಬಿಕ್ಕಟ್ಟು ಬೆಳೆಯುತ್ತಿದ್ದು ಜನತೆಯು ನಡೆಸುತ್ತಾ ಬಂದಿರುವ ಹೋರಾಟಗಳಲ್ಲಿ, ನಡೆದ ಎಲ್ಲಾ ಚುನಾವಣೆಗಳಲ್ಲಿ ಬಹುತೇಕ ಕಾಂಗ್ರೆಸ್ (ಐ) ಪಕ್ಷವು ಸೋಲುತ್ತಾ ಬಂದಿರುವುದರಲ್ಲಿ ತೋರುತ್ತದೆ.

ಈ ಪರಿಸ್ಥಿತಿಯಲ್ಲಿ ಕೇಂದ್ರ ಕಾಂಗ್ರೆಸ್ (ಐ) ಸರ್ಕಾರವು ಅಧಿಕಾರಶಾಹಿ ದಾರಿಯಲ್ಲಿ ಮುನ್ನಡೆಯುತ್ತಿದ್ದು ಕಾಂಗ್ರೆಸ್ಸೇತರ ಪಕ್ಷಗಳ ಆಡಳಿತದಲ್ಲಿರುವ ಸರ್ಕಾರಗಳನ್ನು ಒಂದಾದ ಮೇಲೆ ಒಂದನ್ನು ಉರುಳಿಸುತ್ತಾ ಬಂದಿದೆ. 1987ರಲ್ಲಿ ಹರಿಯಾಣ ಚುನಾವಣೆಯಲ್ಲಿ ಗೆಲ್ಲಬೇಕೆಂಬ ಸಂಕುಚಿತ ಸ್ವಾರ್ಥ ಉದ್ದೇಶದಿಂದ, ಪಂಜಾಬಿನಲ್ಲಿದ್ದ ಅಕಾಲಿ ದಳ (ಎಲ್) ಸರ್ಕಾರವನ್ನು ವಜಾ ಮಾಡಿತು.

1988 ರ ಫೆಬ್ರವರಿಯಲ್ಲಿ ತ್ರಿಪುರ ವಿಧಾನ ಸಭೆಗೆ ಚುನಾವಣೆ ನಡೆಸುವ ಮೂರು ದಿನಗಳ ಮುನ್ನ ಇಡೀ ತ್ರಿಪುರಾವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿ, ಸೈನ್ಯವನ್ನು ನುಗ್ಗಿಸಿ, ಹೊರಗಿನಿಂದ ಸಹಸ್ರಾರು ಗೂಂಡಾಗಳನ್ನು ಕಳಿಸಿ ಚುನಾವಣೆಯಲ್ಲಿ ಮೋಸ ಮಾಡಿ, ಎಡರಂಗದ ಅಧಿಕಾರವನ್ನು ಕಾಂಗ್ರೆಸ್ (ಐ) ಟಿ. ಯು. ಜೆ. ಎಸ್. ಮೈತ್ರಿ ಕಸಿದು ಕೊಂಡಿತು. ಈ ಮೈತ್ರಿಯ ಆಡಳಿತದಲ್ಲಿ 160 ಕ್ಕಿಂತಲೂ ಹೆಚ್ಚು ಎಡರಂಗದ ಕಾರ‍್ಯ ಕರ್ತರ ಕೊಲೆಯಾಗಿದೆ. ತಲೆಗಂದಾಯವನ್ನು ಬಲತ್ಕಾರದಿಂದ ವಸೂಲು ಮಾಡಲಾಗುತ್ತಿದೆ. ಗಿರಿಜನ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ, ಪ್ರಜಾಸತ್ತಾತ್ಮಕ ಚುನಾಯಿತ ಸಂಸ್ಥೆಗಳ ವಿಸರ್ಜನೆ ನಡೆಯುತ್ತಿವೆ.

★ಪುಟ 16

ತ್ರಿಪುರಾದಲ್ಲಿ ಪಕ್ಷದ ಕಚೇರಿಗಳು, ಸದಸ್ಯರ ಮೇಲೆ ಕಾಂಗ್ರೆ ಹಲ್ಲೆ

ಮೇ 5 ರಂದು ಅಗರ್ತಲಾದಲ್ಲಿ ಕಾಂಗ್ರೆಸ್ (ಐ) ನೇತೃತ್ವದಲ್ಲಿ ಗೂಂಡಾಗಳು ತ್ರಿಪುರಾ ರಾಜ್ಯ ಸಮಿತಿಯ ಕಛೇರಿಯ ಮೇಲೆ ಹಲ್ಲೆ ನಡೆಸಿ ಪಕ್ಷದ ಕಾರ್ಯಕರ್ತರು, ಹಿತೈಷಿಗಳನ್ನು ಮನಬಂದಂತೆ ಥಳಿಸಿದರು. ಈ ಹಲ್ಲೆ ನಡೆದಾಗ ಪಾಲಿಟ್‌ಬ್ಯೂರೋ ಸದಸ್ಯ ನೃಪೇನ್ ಚಕ್ರವರ್ತಿ, ರಾಜ್ಯ ಕಾರ್ಯದರ್ಶಿ ದಶರಥ್ ದೇಬ್, ಮತ್ತಿತರ ಪ್ರಮುಖ ಮುಖಂಡರೂ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಕಛೇರಿಯನ್ನು ಗುಂಡಾಗಳು ಲೂಟಿ ಮಾಡಿದರು. ಕಛೇರಿಯೆದುರು ನಿಂತಿದ್ದ ಕಾರುಗಳಿಗೆ, ಸ್ಕೂಟರುಗಳಿಗೆ ಬೆಂಕಿ ಹಚ್ಚಿದರು. ನಂತರ ನಗರದಲ್ಲಿ ಹಲವೆಡೆ ಅವರು ಲೂಟಿ ನಡೆಸಿದರು. ಮಧ್ಯರಾತ್ರಿಯವರೆಗೂ ಅವರ ಹಿಂಸಾಚಾರ ಮುಂದುವರೆಯಿತು. ಈ ಹಿಂಸಾಚಾರಗಳಲ್ಲಿ ಮೂವರು ಪ್ರಮುಖ ಮಹಿಳಾ ಮುಖಂಡರು ಸೇರಿದಂತೆ ಪಕ್ಷದ ಹಲವಾರು ಕಾರ್ಯಕರ್ತರು ಗಾಯಗೊಂಡರು.

★ಪುಟ 16

ಒಳಪುಟಗಳಲ್ಲಿ

ಚೀನಾದ ಬೆಳವಣಿಗೆಗಳ ಕುರಿತು ಸಿಪಿಐ (ಎಂ) ಕಳವಳ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಚೀನಾದ ...ಚಿಗಿನ ಬೆಳವಣಿಗೆಗಳ ಕುರಿತು ತನ್ನ ಕಳವಳ ಮತ್ತು ಆತಂಕವನ್ನು ವ್ಯಕ್ತಪಡಿಸಿತು. ...ಪ್ರಯೋಗಕ್ಕೂ ಜೀವ ಹಾನಿ ಮತ್ತು ನೋವಿಗೂ ಎಡೆ ಮಾಡಿ ಕೊಟ್ಟ ಘಟನೆಗಳ ...ವಿನಿಂದ ಪೊಲಿಟ್‌ಬ್ಯೂರೋ ತೀವ್ರ ಚಿಂತೆಗೊಳಗಾಗಿದೆ.

ನ್ಯೂದಿಲ್ಲಿಯಲ್ಲಿ ಜೂನ್ 5ರಂದು ಹೊರಡಿಸಿದ ಒಂದು ಪತ್ರಿಕಾ ಹೇಳಿಕೆಯಲ್ಲಿ ...ಷ್ಟ ಬೇಡಿಕೆಗಳಿಲ್ಲದ ಟಿಯಾನ್‌ಮನ್ ಚೌಕವನ್ನು ಆಕ್ರಮಿಸಿಕೊಂಡ ...ರ್ಯಾಚರಣೆಯು ವಿದ್ಯಾರ್ಥಿ ಸಮುದಾಯವನ್ನು ತಪ್ಪು ದಾರಿಯಲ್ಲಿ ಒಂದು ...ವಿದ್ರೃಕಾರಿ ವಿಭಾಗದ ಕಾರಣವಾಗಿ ಚೀಣಾದಲ್ಲಿ ಸಮಾಜವಾದಿ ಪದ್ಧತಿ ಮತ್ತು ಆಳುವ ...ಮ್ಯೂನಿಸ್ಟ್ ಪಕ್ಷಕ್ಕೆ ಸವಾಲಾಗಿತ್ತು ಎಂಬುದರಲ್ಲಿ ಏನೂ ಸಂಶಯವಿಲ.

"ಇನ್ನಷ್ಟು ಪ್ರಜಾಪ್ರಭುತ್ವ" ಎಂಬ ಸಾರ್ವತ್ರಿಕ ಘೋಷಣೆಯ ಹೊರತಾಗಿ ...ಯಾನ್‌ಮನ್ ಚೌಕ್‌ವನ್ನು ಆಕ್ರಮಿಸಿದ ವಿದ್ಯಾರ್ಥಿಗಳು ನಿರ್ದಿಷ್ಟವಾದ ಸ್ಪಷ್ಟ ...ಡಿಕೆಗಳನ್ನು ಮುಂದಿಡಲೂ ಇಲ್ಲ, ಮಾತ್ರವಲ್ಲ ಯಾಕೆ ಯಾವ ಬೇಡಿಕೆಗಳಿಗಾಗಿ ...ಪ್ರಕ್ಷೋಭೆಯನ್ನು ತಾವು ಮುಂದುವರಿಸುತ್ತಿದ್ದೇವೆ? ಎಂಬುದು ಸ್ಪಷ್ಟವಾಗಿಲ್ಲ. ಈ ...ಘ ಕಾಲದಲ್ಲಿ ಯಾಕೆ ಸಂಧಾನದ ಮೂಲಕ ಒಂದು ಒಪ್ಪಂದಕ್ಕೆ ...ಲಾಗಲಿಲ್ಲವೆಂಬುದನ್ನು ಅರ್ಥಮಾಡಲು ಸಾಧ್ಯವಾಗುತ್ತಿಲ್ಲ-ಎಂದು ಪೊಲಿಟ್ ...ಬ್ಯೂರೋ ತಿಳಿಸಿದೆ.

"ಒಂದು ವಿಚ್ಛಿದ್ರಕಾರಿ ಗುಂಪಿನ" ನೇತೃತ್ವದಲ್ಲಿ ಈ ಕಾರ್ಯಾಚರಣೆಯು ...ಮಾಜವಾದಿ ಪದ್ಧತಿ ಮತ್ತು ಚೀನಾದ ಕಮ್ಯೂನಿಸ್ಟ್ ಪಕ್ಷಗಳಿಗೆ ಸವಾಲಾಗಿತ್ತು ...ಬುದು ಮಿಖಾಯಿಲ್ ಗೋರ್ಬಚೆವ್‌ರವರ ಸಂದರ್ಶನ ವೇಳೆ ಹುತಾತ್ಮರಿಗೆ ...ಸಮರ್ಪಣೆ ಮಾಡಲು ಬಿಡದಿರುವುದರಿಂದ ಸ್ಪಷ್ಟವಾಗಿದೆ.

"ಸಾಮ್ರಾಜ್ಯಶಾಹಿಗಳು ಮತ್ತು ಪಾಶ್ಚಿಮಾತ್ಯ ಪ್ರೆಸ್ ಈ ಪರಿಸ್ಥಿತಿಯ ಪೂರ್ಣ ...ಯೋಜನವನ್ನು ಪಡೆದು ಚೀನಾದ ಸರಕಾರವನ್ನು ಖಂಡಿಸುತ್ತಿವೆ. ಪಾಶ್ಚಿಮಾತ್ಯ ಪ್ರೆಸ್ ...ನಡೆಸುತ್ತಿರುವ ಅಪಾರ ಪ್ರಮಾಣದ ಪ್ರಚಾರ, ಭಾರತದ ಗುತ್ತೇದಾರಿಗಳ ಮಾಧ್ಯಮ ...ಚಾರ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರತಿಕ್ರಿಯೆ-ಇವೆಲ್ಲವೂ ಸಮಾಜವಾದವನ್ನು ...ಕುವ ಉದ್ದೇಶವುಳ್ಳದ್ದಾಗಿದೆ. ಅಲ್ಲದೆ, ಇದರ ಉದ್ದೇಶವೂ ಚಾರಿತ್ರಿಕ ಚೀನಾ-ಸೋವಿ...ಟ್ ಶೃಂಗ ಸಭೆಯ ಫಲಿತಾಂಶಗಳಿಂದ -ಜಾಗತಿಕ ಶಾಂತಿ, ಪ್ರಜಾಸತ್ತಾತ್ಮಕ ಮತ್ತು ...ಮಾಜವಾದಿ ಶಕ್ತಿಗಳನ್ನು ಇನ್ನಷ್ಟು ಬಲ ಗೊಳಿಸುವ ಶೃಂಗಸಭೆಯ ಫಲಿತಾಂಶಗಳಿಂದ- ...ರಕ್ಕೆ ಒಯ್ಯುವ ಉದ್ದೇಶವುಳ್ಳದ್ದಾಗಿದೆ" ಎಂದು ಪೊಲಿಟ್ ಬ್ಯೂರೊ ಸ್ಪಷ್ಟಪಡಿಸಿತು.

"ಚೀನಾದ ಕಮ್ಯೂನಿಸ್ಟ್ ಪಕ್ಷ, ಜನತಾ ಪ್ರಜಾಪ್ರಭುತ್ವ ಸರಕಾರ ಮತ್ತು ಚೀನಾದ ...ಜೆ ತಮ್ಮ ಅಮೋಘ ಕ್ರಾಂತಿಕಾರಿ ಪರಂಪರೆಯ ಸಹಾಯದಿಂದ ತಮ್ಮ ...ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವುದು ಮತ್ತು ಯಾವುದೇ ಪ್ರಾಣ ಹಾನಿಯಿಲ್ಲದೆ ...ಮಾನ್ಯ ಸ್ಥಿತಿಯನ್ನು ಸ್ಥಾಪಿಸಲು ಶಕ್ತವಾಗುವುದು" ಎಂಬ ವಿಶ್ವಾಸವನ್ನು ಪೊಲಿಟ್ ...ಬ್ಯೂರೊ ವ್ಯಕ್ತಪಡಿಸಿತು.

ಈ ಪ್ರಯತ್ನಗಳಿಗೆ ಚೀನೀ ವಿದ್ಯಾರ್ಥಿಗಳ ಸಮುದಾಯ ಮತ್ತು ಅವರ ...ಮುಖಂಡರುಗಳು ಸಕಾರಾತ್ಮಕವಾಗಿ ಪ್ರತಿಕ್ರಿಯೆ ವ್ಯಕ್ತ ಪಡಿಸುತ್ತಾರೆ ಎಂಬ ಆಶೆಯನ್ನು ...ವ್ಯಕ್ತಪಡಿಸಿತು



ಸಫ್ದರ್ ಹಶ್ಮಿ ಸಮಗ್ರತಾ ಉತ್ಸವ

ಈಚೆಗೆ ಹತ್ಯೆಯಾದ ಬೀದಿನಾಟಕಗಳ ಖ್ಯಾತ ಸಫ್ದರ್ ಹಷ್ಮಿ ನೆನಪಿಗೆಂದು ಬೆಂಗಳೂರಿನಲ್ಲಿ ಒಂದು ಬೀದಿನಾಟಕೋತ್ಸವ ನಡೆಯಿತು.

ದೇಶದ ಇತರೆಡೆಗೆ ಹೋಲಿಸಿದರೆ ಕರ್ನಾಟಕದ ರಂಗಭೂಮಿ ಒಂದಲ್ಲಾ ಒಂದು ರೀತಿಯಲ್ಲಿ ಸದಾ ಸುದ್ದಿ ಮಾಡುತ್ತಿರುತ್ತದೆ. ರಂಗನಾಟಕಗಳಲ್ಲಿ ಕರ್ನಾಟಕ ರಂಗಭೂಮಿ ಸಾಧಿಸಿರುವ ಪ್ರಭುತ್ವ ಅಪಾರವಾದದ್ದು. ಅಂತೆಯೇ ಬಹುಶಃ ದೆಹಲಿ ಬಿಟ್ಟರೆ ಬೀದಿನಾಟಕದಲ್ಲೂ ಕರ್ನಾಟಕವೇ ಸುದ್ದಿ ಮಾಡಿದೆ.

ಸಫ್ದರ್ ಹಷ್ಮಿ ದೆಹಲಿ ಹಾಗೂ ಆಸುಪಾಸಿನ ರಾಜ್ಯಗಳಲ್ಲಿ ಬೀದಿನಾಟಕದ ಹೊಸ ಚಳವಳಿಯನ್ನೇ ಹುಟ್ಟುಹಾಕಿದರು. ಬೀದಿನಾಟಕದ ರಾಜಕೀಯ ಸಂಘಟನೆಗಳ ಕರಪತ್ರ ಎಂಬ ಅಭಿಪ್ರಾಯವಿದ್ದಾಗ ಬೀದಿನಾಟಕಕ್ಕೆ ಶಿಸ್ತುಬದ್ಧವಾದ ಬಂಧ ಹಾಗೂ ಇನ್ನಿಲ್ಲದಷ್ಟು ಹೊಸ ವಸ್ತುವನ್ನು ನೀಡಿದರು. ಬೀದಿನಾಟಕದ ಪರಿಣಾಮ ರಂಗನಾಟಕಗಳಿಗಿಂತಲೂ ಒಡಲಲ್ಲಿರುವುದನ್ನೆಲ್ಲಾ ಪ್ರೇಕ್ಷಕರ ಮುಂದೆ ನೇರ ಬೀದಿ ನಾಟಕ ಸರಳವಾಗಿ ತನ್ನ ಬಿಚ್ಚಿಕೊಳ್ಳುವುದರಿಂದ ಉಂಟಾಗುವ ಪ್ರತಿಭಟನೆಯ ಕಾವು ತಡೆಯಲಾರದೆ ಜನವರಿ 1 ರಂದು ಸಫ್ದರ್ ಹಷ್ಮಿಯವರನ್ನು ಕೊಲೆ ಮಾಡಲಾಯಿತು.

'ಬೀದಿ ನಾಟಕ' ಎಂದರೆ ಮೂಗು ಮುರಿಯುತ್ತಿದ್ದ ದಿನಗಳಲ್ಲಿ ಅದಕ್ಕೊಂದು ಹೊಸ ಆಯಾಮ ಕೊಟ್ಟ ನೆನಪಿಗೆ ಸಫ್ದರ್ ಹಷ್ಮಿಯ ಜನ್ಮದಿನೋತ್ಸವವನ್ನು 'ಬೀದಿ ನಾಟಕ ದಿನ'ವನ್ನಾಗಿ ಆಚರಿಸಲು ಸಫ್ದರ್ ಹಷ್ಮಿ ಸ್ಮಾರಕ ಸಮಿತಿ (ಸಹಮತ್) ಕರೆ ನೀಡಿತು. ಅದರಂತೆ ಕರ್ನಾಟಕದಲ್ಲೂ 'ಸಮುದಾಯ' ಸಾಂಸ್ಕೃತಿಕ ತಂಡ ಸಂಸ ಬಯಲು ರಂಗಮಂದಿರದಲ್ಲಿ ಬೃಹತ್ ಬೀದಿನಾಟಕೋತ್ಸವವನ್ನು ಏರ್ಪಡಿಸಿತ್ತು.

ಕರ್ನಾಟಕದ ವಿವಿಧೆಡೆಗಳಿಂದ ಆಗಮಿಸಿದ್ದ 17 ಸಮುದಾಯ ಘಟಕಗಳು ಒಂದು ತಮಿಳು ನಾಟಕವನ್ನೂ ಸೇರಿದಂತೆ 17 ಬೀದಿನಾಟಕಗಳನ್ನು ಪ್ರದರ್ಶಿಸಿದವು.

ಈ ಮಧ್ಯೆ ಸಮುದಾಯದ ಬೀದಿನಾಟಕೋತ್ಸವದಲ್ಲಿ ಹರಿದ ಬೀದಿನಾಟಕಗಳ ಮಹಾಪೂರ 'ಬೀದಿ ನಾಟಕ' ಪಡೆಯಬಹುದಾದ ಸಾಧ್ಯತೆಗಳ ಸುಳ್ಳುಮಾಡಿ ತೋರಿಸಿದವು. ಬೀದಿನಾಟಕಕ್ಕೆ ಬೇಕಾದ ವಿಶೇಷವಸ್ತು ಬಂಧ ಹಾಗೂ ತಾಲೀಮಿನ ಅವಶ್ಯಕತೆಗಳನ್ನು ಈ ನಾಟಕಗಳು ಮೈಗೂಡಿಸಿಕೊಂಡಿದ್ದವು. ಪ್ರತಿಯೊಂದು ನಾಟಕವೂ ಹೊಸ ತಂತ್ರ ಬಳಸಿತ್ತು 'ಧರೆ ಹತ್ತಿ ಉರಿದರೆ' ನಾಟಕದಲ್ಲಿ ಬಳಸಿದ್ದ ದಾಸರ ಶೈಲಿಯ ಪದಗಳು, ಯಕ್ಷಗಾನ ಶೈಲಿ 'ತಮಾಷೆ' ನಾಟಕದಲ್ಲಿ ಬಳಸಲಾಗಿದ್ದ ದೊಂಬರಾಟ ಶೈಲಿಗೆ ಹೆಸರಾದರೆ 'ಹಲ್ಲಾ ಬೋಲ್' ಹಾಗೂ 'ಜನತೆ' ನಾಟಕಗಳು ಪ್ರಬುದ್ಧ ಅಭಿನಯ ಹಾಗೂ ಹಾಡುಗಾರರನ್ನು ಹೊಂದಿತ್ತು 'ಒಂದು ಬೀದಿಯ ಕಥೆ' ವಸ್ತುವನ್ನು ಬಗ್ಗೆ ಹಾಗೂ ನಡೆಯುಬೇಕಾದ ದಾರಿಯ ಬಗೆಗೆ ಸ್ಪಷ್ಟಕಲ್ಪನೆ ನೀಡಿತು.

ಈ ನಾಟಕೋತ್ಸವದಲ್ಲಿ ಪ್ರದರ್ಶಿತವಾದ ಬೆಂಗಳೂರು ಸಮುದಾಯದ ಹಲ್ಲಾಬೋಲ್ (ನಿ:ಸಿ.ಬಸವಲಿಂಗಯ್ಯ) ಕೆ.ಜಿ.ಎಫ್. ಸಮುದಾಯದ ಪಟಾಕಿಯವನು (ನಿ: ಅಚ್ಯುತ) ಕುಂದಾಪುರ ಸಮುದಾಯದ ಹೆಗ್ಗಡದೇವನಕೋಟೆ ದಾಸರಹಳ್ಳಿ ಸಮುದಾಯುದ ಧರೆ ಹತ್ತಿ ಉರಿದರೆ (ನಿ: ರಘುನಂದನ್) ಹುಬ್ಬಳ್ಳಿ ಧಾರವಾಡ ಸಮುದಾಯದ ಒಂದು ಬೀದಿಯ ಕಥೆ (ನಿ:ಜಿ.ಎಚ್.ರಾಘವೇಂದ್ರ) ಬಳ್ಳಾರಿ ಸಮುದಾಯದ ತಮಾಷೆ (ನಿ:ಬಸವರಾಜ ಕೊಡಿಗೆ) ಹೊಸಪೇಟೆ ಸಮುದಾಯದ ಕತ್ತಲೆರಾಜ್ಯ (ನಿ:ಫಣಿರಾಜ್, ಭರಮನ ಗೌಡ) ನಾಟಕಗಳಲ್ಲಿ ಬೀದಿನಾಟಕ ಹಾದಬಂದ ದಾರಿಯನ್ನು ಸುಲಭವಾಗಿ ಗುರುತಿಸಬಹುದಾಗಿತ್ತು.

ಬೀದಿನಾಟಕ ಎಂದರೆ ಅತ್ಯಂತ ಸುಲಭವಾಗಿ ಆಡಿಬಿಡಬಹುದಾದ ನಾಟಕ ಎಂಬುದನ್ನು ಮೇಲಿನ ನಾಟಕಗಳು ದೇಸಿ ಶೈಲಿಗೆ ಒಗ್ಗಿಸಿಕೊಳ್ಳಲು ಯಶಸ್ವಿಯಾಯಿತಲ್ಲದೆ 'ಮೈಮ್' ಅಂಶಗಳ ಹೊಸ ಸಾಧ್ಯತೆಗಳನ್ನು ತೋರಿಸಿತು. ಪಟಾಕಿಯವನು ಪುಟ್ಟ ಸಂಕೇತದ ಮೂಲಕ ವಿಶ್ವದ ರಾಜಕೀಯದ ಬಗ್ಗೆ ಮಾತನಾಡುವ ನಾಟಕ ಅತ್ಯಂತ ಸರಳವಾಗಿ ಗಂಭೀರ ವಿಷಯವನ್ನು ತೆರೆದಿಟ್ಟಿತು. ಈ ನಾಟಕದಲ್ಲಿ ದೂರದರ್ಶನದಲ್ಲಿ ಪ್ರಸಾರವಾಗುವ ಕ್ರಿಕೆಟ್ ಹಾಗೂ ಕ್ರಿಕೆಟ್‌ನ ಮುಖ್ಯಾಂಶಗಳ 'ರೀಪ್ಲೇ' ತಂತ್ರಗಳನ್ನು ಅಳವಡಿಸಿದ್ದು ನಾಟಕದ ಯಶಸ್ಸಿಗೆ ಕಾರಣವಾಯಿತು. ಹರಪನಹಳ್ಳಿ ಸಮುದಾಯ ಅಭಿನಯಿಸಿದ ಹಷ್ಮಿ ಅಮರ (ನಿ: ಎಸ್.ಎಸ್. ಹಿರೇಮಠ್)ದಲ್ಲಿ ಏಕತಾನ ಜಾನಪದ ಸಂಗೀತವನ್ನು ಅಳವಡಿಸಿಕೊಳ್ಳಲು ಮಾಡಿದ ಯತ್ನ ಯಶಸ್ವಿಯಾಯಿತು.

ಈ ನಾಟಕಗಳಲ್ಲದೆ ನಾಟಕೋತ್ಸವದಲ್ಲಿ ರಾಯಚೂರು ಸಮುದಾಯದ ಕಳ್ಳ ಕೊತ್ವಾಲನಾದರೆ (ನಿ: ನಾಗಪ್ಪ ಬಳಿ) ಕೊಪ್ಪಳ ಸಮುದಾಯದ ಎಲ್ಲಿ ಮಾರಾಟಕ್ಕಿವೆ (ನಿ:

ಪುಟ 12ಕ್ಕೆ

ವಿಚಾರ ಸಂಕಿರಣ

ವಿಚಾರಸಂಕಿರಣಗಳು ಸಮಗ್ರತಾ ಉತ್ಸವದ ಮತ್ತೊಂದು ಮಹತ್ವದ ಅಂಗ. ಕಲಾವಿದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಬರಹಗಾರ ಮತ್ತು ರಾಷ್ಟ್ರೀಯ ಸಮಗ್ರತೆ, ಕೋಮು ಸೌಹಾರ್ದತೆಯ ಬಗೆಗೆ ವಿಚಾರಸಂಕಿರಣ ಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಲಾವಿದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಕೆ.ವಿ.ನಾರಾಯಣ್ ರಾಜ್ಯದ ರಂಗಭೂಮಿ ಆಂದೋಳನಕ್ಕೆ ಸಮುದಾಯ ಕೊಟ್ಟ ಕಿರುವನ್ನು ಸ್ಮರಿಸಿದರು. ಸಮುದಾಯ ಬೀದಿನಾಟಕಗಳ ಪ್ರದರ್ಶನ ಮತ್ತು ಸಾಂಸ್ಕೃತಿಕ ಜಾತಾಗಳ ಮೂಲಕ ಕಲೆಯನ್ನು ಸಾಮಾಜಿಕ ಬದಲಾವಣೆಗೆ ಪ್ರಬಲ ಮಾಧ್ಯಮವಾಗಿ ಬಳಸಿರುವುದನ್ನು ಗುರುತಿಸಿದರು. ಈ ಸಂಕಿರಣದಲ್ಲಿ ಮಾತನಾಡಿದ ಡಿ.ವೈ.ಎಫ್.ಐ ಅಧ್ಯಕ್ಷ ಎಚ್.ಎನ್.ನಾಗಮೋಹನದಾಸ್ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ರಾಜ್ಯ ಪ್ರಭುತ್ವದ ಅಂಗಗಳು ಹೇಗೆ ಕೆಲಸಮಾಡುತ್ತವೆ ಎಂದು ವಿವರಿಸುತ್ತಾ ವಾಕ್ ಸ್ವಾತಂತ್ರ್ಯದ ಮೇಲಿನ ಇಂತಹ ನಿಬಂಧನೆಗಳನ್ನೂ ಮೀರಿ ಕಲಾವಿದರು ಮಾತ್ರ ತಮ್ಮ ವಿವಿಧ ಅಭಿವ್ಯಕ್ತಿ ಮಾಧ್ಯಮಗಳ ಮೂಲಕ ಜನರನ್ನು ಮುಟ್ಟಬಹುದು ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕಿ ಶ್ರೀಮತಿ ಹರಿಣಿಕಕ್ಕೇರಿಯವರು. ಅನಕ್ಷರಸ್ಥರೇ ಹೆಚ್ಚಾಗಿರುವ ದೇಶದಲ್ಲಿ ಇಂತಹ ದೃಶ್ಯ ಮಾಧ್ಯಮಗಳು ಜನರನ್ನು ಮುಟ್ಟಲು ಹೆಚ್ಚು ಸಹಾಯಕವಾಗುತ್ತದೆ ಎಂದರು.

ತುರ್ತು ಪರಿಸ್ಥಿತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆದ ದಾಳಿಯನ್ನು ನೆನಪಿಸಿಕೊಳುತ್ತಾ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಬಿ.ವಿ.ವೈಕುಂಠರಾಜು ಅವರು ಆ ಕಾಲದ ಸೆನ್ಸಾರ್ ನಿಯಮಗಳನ್ನು ವಿರೋಧಿಸಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಳಿಸಿಕೊಂಡ ಬಗೆಯನ್ನು ವಿವರಿಸಿದರು.

ಕೋಮು ಸೌಹಾರ್ದತೆ ವಿಚಾರ ಸಂಕಿರಣದಲ್ಲಿ ರಂಜಾನ್‌ದರ್ಗಾ, ಡಿ.ಆರ್.ನಾಗರಾಜ್, ಆರ್.ಕೆ.ಹುಡುಗಿ ಮಾತನಾಡಿದರು. ಜಿ.ಕೆ.ಗೋವಿಂದರಾವ್ ಅಧ್ಯಕ್ಷತೆ ವಹಿಸಿದ್ದರು.

ಕೋಮು ಸೌಹಾರ್ದತೆ ಪ್ರಾಮುಖ್ಯದ ಕುರಿತು ಇ.ಎಂ.ಎಸ್. ಅವರ ಇತ್ತೀಚಿನ ಹೇಳಿಕೆಯತ್ತ ಗಮನ ಸೆಳೆದ ದರ್ಗಾ ಕೋಮುದ್ವೇಷದ ಜ್ವಾಲೆಗಳು ಹೇಗೆ ಬಡಜನರನ್ನು, ಅಮಾಯಕರನ್ನೇ ಬಲಿ ತೆಗೆದುಕೊಳ್ಳುತ್ತದೆ ಎಂಬುದನ್ನು ತಮ್ಮ ಅನುಭವಗಳ ಮೂಲಕ ಬಿಚ್ಚುತ್ತಾ ಹೋದರು. ಆರ್.ಕೆ.ಹುಡಗಿ ಕೋಮು ವಾದದ ಹಿಂದಿನ ರಾಜಕೀಯ ಮತ್ತು ಆರ್ಥಿಕ ಕಾರಣಗಳನ್ನು ವಿವರಿಸಿದರು. ಡಿ. ಆರ್.ನಾಗಾರಾಜ್ ಧಾರ್ಮಿಕ ಮೂಲಭೂತವಾದದ ಬೇರುಗಳನ್ನು ಪರಿಚಯಿಸಿದರು.

ಇಡೀ ಸಂಕಿರಣದಲ್ಲಿ ಅತ್ಯಂತ ಪ್ರತಿಭಟನೆ ಎದುರಿಸಿದ್ದು ಅಧ್ಯಕ್ಷ ಜಿ.ಕೆ.ಗೋವಿಂದರಾವ್ ಭಾಷಣ. ಕೋಮು ಸೌಹಾರ್ದತೆಯನ್ನು ಕಾಪಾಡಲು ಎಡಪಕ್ಷಗಳೂ ಎಡವಿದೆ ಎಂಬ ಅವರ ಮಾತುಗಳು ಟೀಕೆಗೆ ಗುರಿಯಾದವು. ಚರ್ಚೆಯಲ್ಲಿ ಭಾಗವಹಿಸಿದ ಹಲವರು ಜಿ.ಕೆ.ಗೋವಿಂದರಾವ್ ನಂಬಿರುವ ಆದರ್ಶಗಳು ಹಾಗೂ ಪೊಳ್ಳುತನದ ನಂಬಿಕೆಗಳನ್ನು ಬಯಲುಮಾಡಿದರು.

ಬರಹಗಾರ ಮತ್ತು ರಾಷ್ಟ್ರೀಯ ಸಮಗ್ರತೆ ವಿಚಾರ ಸಂಕಿರಣದಲ್ಲಿ ಹಿರಿಯ ಕವಿ ಸು.ರಂ. ಎಕ್ಕುಂಡಿ ಮಾತನಾಡಿ ಮನಷ್ಯ ಮನುಷ್ಯನ ನಡುವೆ ಇರುವ ಅಂತರವನ್ನು ಹೋಗಲಾಡಿಸಿ ರಾಷ್ಟ್ರೀಯ ಐಕ್ಯತೆಗೆ ಶಕ್ತ್ಯಾನುಸಾರ ಕೊಡುಗೆ ನೀಡಲು ಬರಹಗಾರರಿಗೆ ಕರೆ ನೀಡಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ರೈತರು ಮತ್ತು ಕಾರ್ಮಿಕರು ದೇಶದ ಸಮಗ್ರತೆಯ ವಾರಸುದಾರರು. ಬರಹಗಾರರು ರಾಷ್ಟ್ರೀಯ, ಸಮಗ್ರತೆಯ ಮಹತ್ವ ಕುರಿತು ಪ್ರಜ್ಞೆ ಹೊಂದಿರಬೇಕು ಎಂದರು. ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಲಿಂಗದೇವರು ಹಳೆಮನೆ ಜಾತಿ,ಧರ್ಮ,ಭಾಷೆ ಮುಂತಾದ ವಿಷಯಗಳಿಂದ ಜನರಲ್ಲಿ ಉದ್ಭವಿಸುವ ದ್ವೇಷ ಅಸೂಯೆ ಹೋಗಲಾಡಿಸಲು ಬರಹಗಾರರಿಗೆ ಕರೆ ನೀಡಿದರು.

ಮರುಕಳಿಸಿದ ಘಟನೆ

ದೇಶದ ಎಲ್ಲೆಡೆಯಿಂದ ಅತ್ಯಂತ ಯಶಸ್ವಿಯಾಗಿ ಸಫ್ದರ್ ಹಷ್ಮಿ ನೆನಪಿಗಾಗಿ 'ಸಹಮತ್' ಕರೆಯಂತೆ ಬೀದಿನಾಟಕ ದಿನವನ್ನು ಆಚರಿಸಿದ ವರದಿಗಳು ಬರುತ್ತಿದ್ದಂತೆಯೇ ಆರ್.ಎಸ್.ಎಸ್. ಗೂಂಡಾಗಳ ಗುಂಪೊಂದು 'ಹಲ್ಲಾಬೋಲ್' ನಾಟಕವನ್ನು ಅಭಿನಯಿಸುತ್ತಿದ್ದ ತಂಡದ ಮೇಲೆ ಹಲ್ಲೆ ಮಾಡಿದ ಖಂಡನೀಯ ಘಟನೆ ನಡೆದಿದೆ.

ಏಪ್ರಿಲ್ 14 ರಂದು ಕಲ್ಲಿಕೋಟೆಯ ಕಲಾ ಸಾಹಿತ್ಯ ಸಂಘಂ ನಾಟಕ ಪ್ರಾರಂಭಿಸಿದಾಗ ಆರ್.ಎಸ್.ಎಸ್ ಗೂಂಡಾಗಳು ಮರಳನ್ನು ಎಸೆಯತೊಡಗಿದರು. ಪ್ರೇಕ್ಷಕರ ಸಹಕಾರದೊಂದಿಗೆ ನಟರು ಇದನ್ನು ತಡೆಯಲು ಯಶಸ್ವಿಯಾದರು. ತಕ್ಷಣ ಹಿಂದಿರುಗಿದ ಆರ್.ಎಸ್.ಎಸ್ ನವರು ಪುನಃ ದೊಡ್ಡ ದಂಡಿನವರೊಡನೆ ವಾಪಸಾದರು.

ಈ ದಿನ ಅತ್ಯಂತ ಮಹತ್ವದ ಹಬ್ಬದ ದಿನ. ಇಂತಹ ನಾಟಕಗಳನ್ನು ಪ್ರದರ್ಶಿಸಬೇಡಿ ಎಂದು ಹಲ್ಲೆ ಮಾಡಲು ಪ್ರಾರಂಭಿಸಿದರು. ತಕ್ಷಣ ಪ್ರೇಕ್ಷಕರು ನಟರಿಗೆ ಒಂದಿಷ್ಟು ಏಟಾಗದಂತೆ ರಕ್ಷಣೆ ನೀಡಿದರು.

ಈ ಹಲ್ಲೆಯ ಘಟನೆಯನ್ನು ವಿರೋಧಿಸಿ ಏಪ್ರಿಲ್ 16 ರಂದು ಸಾವಿರಾರು ಜನರು ಮೆರವಣಿಗೆ ನಡೆಸಿದರು. ಮೆರವಣಿಗೆಯ ನಂತರ ಹಲ್ಲಾಬೋಲ್ ಪ್ರದರ್ಶಿಸಲಾಯಿತು.

ಸಾಹಿಬಾಬಾದ್‌ನಲ್ಲಿ ನಡೆದ ಘಟನೆಯಂತೆಯೇ ಕಾಣುವ ಈ ಪ್ರಕರಣ ಆರ್.ಎಸ್.ಎಸ್ ಗೂಂಡಾಗಳು ಕಾಂಗ್ರೆ ಗೂಂಡಾಗಳು ಬೇರೆಯಲ್ಲ ಎಂಬುದನ್ನು ಎತ್ತಿತೋರಿಸುತ್ತವೆ. ಎಡಪಕ್ಷಗಳ ಅಭಿಪ್ರಾಯ ಮಂಡನೆ ಈ ಎರಡೂ ಮಂದಿಗೆ ಹೇಗೆ ಬಿಸಿತುಪ್ಪವಾಗಬಹುದು ಎಂಬುದರ ದ್ಯೋತಕ.



ಸಫ್ದರ್ ಹಾಶ್ಮಿ ಸ್ಮಾರಕ ಸಮಗ್ರತಾ ಉತ್ಸವದಲ್ಲಿ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಮಕ್ಕಳು



ದೆಹಲಿಯಲ್ಲಿ ಸಫ್ದರ್ ಹಾಶ್ಮಿ ಸಮಾರೋಹದಂದು ಗೃಹಮಂತ್ರಿ ಬೂಟಾಸಿಂಗ್ ನಿವಾಸದೆದುರು ಬುದ್ಧಿ ಜೀವಿಗಳು, ಕಲಾವಿದರ ಪ್ರದರ್ಶನ

ಓದುಗರ ಏಜೆನ್ಸಿದಾರರ ಗಮನಕ್ಕೆ

ಕೇಂದ್ರ ಸರ್ಕಾರ ಪತ್ರಿಕೆಗಳನ್ನು ಹತ್ತಿಕ್ಕುವ, ವಾಕ್ ಸ್ವಾತಂತ್ರವನ್ನು ಮೊಟಕುಗೊಳಿಸುವ ನೀತಿಗನುಗುಣವಾಗಿ ಎರಡು ಮೂರು ತಿಂಗಳಿಗೊಮ್ಮೆ ನ್ಯೂಸ್‌ಪ್ರಿಂಟ್ ಕಾಗದದ ಬೆಲೆ ಏರಿಸುತ್ತಿದೆ. (ಪಕ್ಕದಲ್ಲಿರುವ ಚಿತ್ರ ನೋಡಿ) ಅದಕ್ಕೆ ಅನುಗುಣವಾಗಿ ಇತರ ಮುದ್ರಣ ಪರಿಕರಗಳ ಬೆಲೆಯೂ ಏರಿ "ಐಕ್ಯರಂಗ" ದಂತಹ ಪತ್ರಿಕೆಗಳ ಹಣಕಾಸು ಪರಿಸ್ಥಿತಿ ದುರ್ಭರಗೊಂಡಿದೆ.

ನೀವೇ ಕಂಡಿರುವಂತೆ 'ಐಕ್ಯರಂಗ' ಕಳೆದ ಆರು ತಿಂಗಳಿಂದ ಮೊದಲಿನ ಎಂಟು ಪುಟಗಳಲ್ಲೇ ಹಿಂದಿನ ಸುಮಾರು 12 ಪುಟಗಳಷ್ಟು ಮಾಹಿತಿ ನಿಮಗೆ ಓದಲು ಒದಗಿಸುತ್ತಿದೆ. ಹೆಚ್ಚು ಆಕರ್ಷಕವಾಗಿ ಒದಗಿಸುತ್ತಿದೆ.


ಆದರೂ ಪತ್ರಿಕೆಯ ನಿಯಮಿತ ಪ್ರಕಟಣೆ ಖಾತ್ರಿಗೊಳಿಸುವುದು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಪತ್ರಿಕೆಯ ಪ್ರಸಾರ ಇದಕ್ಕೆ ಅನುಗುಣವಾಗಿ ಹೆಚ್ಚದಿದ್ದದ್ದು ಹಾಗೂ ಏಜೆನ್ಸಿದಾರರ ಹೆಚ್ಚುತ್ತಿರುವ ಬಾಕಿ. ಅಂದರೆ ಒಟ್ಟಿನಲ್ಲಿ ಹಣಕಾಸಿನ ತೊಂದರೆ.

ಆದ್ದರಿಂದ ನೀವು ಇಷ್ಟರಲ್ಲೇ ಊಹಿಸಿರಬಹುದಾದಂತೆ 'ಐಕ್ಯರಂಗ' ದ ಚಂದಾದರವನ್ನು ಕೆಲವು ವರ್ಷಗಳ ನಂತರ ಹೆಚ್ಚಿಸಬೇಕಾಗಿ ಬಂದಿದೆ. ಅದರ ಜೊತೆಗೇ ಈ ಕೆಲವು ಅಂಶಗಳನ್ನು ಗಮನಿಸಬೇಕೆಂದು ಕೋರುತ್ತೇವೆ.

(1) ಈ ಅವಧಿಯಲ್ಲಿ ಇತರ ಪತ್ರಿಕೆಗಳೆಲ್ಲಾ ಕನಿಷ್ಟ ಎರಡು ಬಾರಿ ಬೆಲೆಯೇರಿಸಿವೆ.

(2) 'ಐಕ್ಯರಂಗ'ದ ನಿರ್ವಹಣಾ ವೆಚ್ಚ ತಲಾ ಪ್ರತಿಗೆ ರೂ. 1.25 ಕ್ಕಿಂತಲೂ ಹೆಚ್ಚಾಗಿದ್ದು ಈ ಬೆಲೆಯೇರಿಕೆಯ ನಂತರವೂ ಪ್ರತಿಯೊಂದು ಪತ್ರಿಕೆಯ ಮೇಲೂ ಪಕ್ಷದ ರಾಜ್ಯ ಸಮಿತಿ ಮೂವತ್ತು ಪೈಸೆ ಹೆಚ್ಚು ಭರಿಸಬೇಕಾಗುತ್ತದೆ. ಆದರೂ ಓದುಗರ ಮೇಲೆ ಹೊರೆ ಹೆಚ್ಚಿಸಬಾರದೆಂದು ಏರಿಕೆಯನ್ನು ರೂ. 1.25 ಕ್ಕೆ ಮಿತಿಗೊಳಿಸಿದ್ದೇವೆ.

(3) 'ಐಕ್ಯರಂಗ' ದ ಪ್ರಸಾರ ಹೆಚ್ಚಿದಂತೆ ತಲಾ ನಿರ್ವಹಣಾ ವೆಚ್ಚ [illegible] ಕಡಿಮೆಯಾಗುತ್ತದೆ. ಉದಾ : ಪ್ರಸಾರ ಈಗಿನ ಒಂದೂವರೆ ಪಟ್ಟಾದರೆ ತಲಾ [illegible] ವೆಚ್ಚ 25 % ರಷ್ಟು ಕಡಿಮೆಯಾಗುತ್ತದೆ. ಪ್ರಸಾರ ದ್ವಿಗುಣ[illegible] ಪತ್ರಿಕೆಯನ್ನು ಇನ್ನಷ್ಟು ಆಕರ್ಷಕವಾಗಿ ಕ್ರಮಬದ್ಧವಾಗಿ ತರಲು ಸಾಧ್ಯ[illegible]. ಆದ್ದರಿಂದ 'ಐಕ್ಯರಂಗ' ದ ಪ್ರತಿಯೊಬ್ಬ ಓದುಗರೂ ಕನಿಷ್ಟ [illegible] ಹೊಸ ಓದುಗರನ್ನು 'ಐಕ್ಯರಂಗ' ಕೊಂಡುಕೊಳ್ಳುವಂತೆ ಸೂಚಿಸಬೇಕೆಂದು ಕೋರುತ್ತೇವೆ.



ಐಕ್ಯರಂಗದ ಹೊಸ ಚಂದಾ ದರ

ಬಿಡಿ ಪ್ರತಿಗೆ	ರೂ. 1.25
ಅರ್ಧವಾರ್ಷಿಕ ಚಂದಾ	ರೂ. 30.00
ವಾರ್ಷಿಕ ಚಂದಾ	ರೂ. 60.00

ಇದು ಈ ಸಂಚಿಕೆಯಿಂದಲೇ ಜಾರಿಗೆ ಬರುತ್ತದೆ. ಈಗಾಗಲೇ ಬಂದಿರುವ ಚಂದಾ ಹಣವನ್ನು ಸೂಕ್ತವಾಗಿ ಹೊಂದಿಸಲಾಗುವುದು.



ಮಾರ್ಕ್ಸ್‌ನ

ಮಲ್ಲಿಗೆ ಅರಳದ ದುಂಬಿ ಹಾರದ
ಈ ನಾಡಿನಲ್ಲಿ
ಢಮಾರ್.....ಢಮಾರ್.....ಶಬ್ದಗಳು
ಆಕಾಶ ನೀರವದ ನಡುವೆ
ತಾಯಿ ಬೇರು ಬಿಡುತ್ತವೆ.

ಚಿಕ್ಕಿಗಳು ಕಣ್ಣು ಕಳೆದುಕೊಂಡು
ಸೆರಗಿನ ಮರೆಯಿಂದ ಮುಸ ಮುಸ ಅಂತ ಅತ್ತು
ಉಕ್ಕಿದ್ದ ತೆರೆಗಳ ಎದೆಗೂಡಲ್ಲಿಟ್ಟು ಕೊಳ್ಳುತ್ತವೆ.
ಮರಳುಗಾಡ ನೆಕ್ಕುವ ಗುಡಿಸಿಲುಗಳು
ಉರಿವ ಸೂರ್ಯನೆದುರು ನಾಲಿಗೆಯ ನರಗಳಿಗೆ
ಮಂಜುಗಡ್ಡೆಯ ಸಂಬಂಧ ಬೆಳಸಿಕೊಳ್ಳುವಂತೆ
ತವಕಿಸುತ್ತವೆ.

ಕತ್ತಲಡರಿದ ಗಲ್ಲಿಗಳ ಕಲ್ಲು ಸಂದಿಗಳಲ್ಲಿ
ಶತಮಾನಗಳ ಸಂಕೇತ ಧ್ವನಿ
ಬದುಕಿನ ಪದರುಗಳ ಬಿಚ್ಚಿಕೊಳ್ಳುತ್ತಾ
ಎದೆಸೆತ್ತೆ ಹುಲ್ಲು ಗರಿಕೆಗಳ ಸಾಕ್ಷಿಯಾಗಿ ಬಿಟ್ಟು
ಶಾಂತ ಸಾಗರದ ಧಾಟಿಗೆ ತಲೆದೂಗುತ್ತವೆ.

ಆಗ ಹುಟ್ಟುವ ಗಡ್ಡದಾರಿ ಮಾರ್ಕ್ಸ್‌ನ
ಮುಖದ ತುಂಬಾ ಬಲೆಯೆಣೆದ ಅಂಬಾಳಿಬಳ್ಳಿಗಳು
ಕರುಳಿಲ್ಲದವರನ್ನು ನವಿರಾಗಿ ಬಿಗಿದು
ಪ್ರೀತಿಗಾಗಿ ತೆತ್ತ ಬೆಲೆಯ ಕೇಳುತ್ತವೆ.

ಯಂತ್ರದ ಸುತ್ತಾ ಏಳುವ ಬದುಕಿಲ್ಲದ
ನೋವುಗಳ ಶಬ್ದಕ್ಕೆ ಬಿಸಿಯುಸಿರಿಕ್ಕಿಸಿದ ಇವ
ಶಾಂತಿ ಸಮಾನತೆಗಳ ಮೂಲೆ ಮೂಲೆಗೂ ತುಂಬಿ
ಬದುಕಿನ ಅರ್ಥಕೋಶಗಳ
ಎಲ್ಲರ ಮುಂದೆಯೂ ಇಡುತ್ತಾನೆ.

ತಿಮ್ಮನಹಳ್ಳಿ ವೇಣುಗೋಪಾಲ್

ವಿಶ್ವಾದ್ಯಂತ ಮೇ ದಿನಾಚರಣೆ

ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದದಿನವನ್ನು ವಿಶ್ವಾದ್ಯಂತ ಕಾರ್ಮಿಕ ವರ್ಗ ತಮ್ಮ-ತಮ್ಮ ದೇಶದ ಪರಿಸ್ಥಿತಿಗನುಗುಣವಾಗಿ ಸಂಭ್ರಮ, ಉಲ್ಲಾಸದಿಂದ ಅಥವಾ ಹೋರಾಟಶೀಲತೆಯ ಅಭಿವ್ಯಕ್ತಿಯೊಂದಿಗೆ ಆಚರಿಸಿದೆ. ಸಮಾಜವಾದಿ ದೇಶಗಳಲ್ಲಿ ಅತ್ಯಂತ ಉಲ್ಲಾಸದ ಹಬ್ಬದ ವಾತಾವರಣದಲ್ಲಿ ಹಿಂದಿನ ಸಾಧನೆಗಳ, ವಿಫಲತೆಗಳ, ಸಮಾಜವಾದವನ್ನು ಇನ್ನಷ್ಟು ಆಳಗೊಳಿಸುವ ಮುಂದಿನ ಕರ್ತವ್ಯಗಳನ್ನು ನೆನಪಿಸಿಕೊಳ್ಳುವುದರೊಂದಿಗೆ ಮೇ ದಿನಾಚರಣೆ ನಡೆಯಿತು. ಕಾರ್ಮಿಕರ ವರ್ಗ ಇನ್ನೂ ಅಧಿಕಾರ ಪಡೆಯದ ದೇಶಗಳಲ್ಲಿ ಸಮರಧೀರ ಪ್ರದರ್ಶನಗಳ ಮೂಲಕ ಮೇ ದಿನಾಚರಣೆ ನಡೆಯಿತು.

ಸೋವಿಯತ್ ಒಕ್ಕೂಟದಲ್ಲಿ

ಮಾಸ್ಕೋದಲ್ಲಿ ಎಂದಿನಂತೆ ಕೆಂಪು ಚೌಕ ಕೆಂಬಾವುಟ, ವರ್ಣರಂಜಿತ ಕಾಗದದ ಹೂವುಗಳು ಹಾಗೂ ಬಲೂನುಗಳನ್ನು ಹಿಡಿದು ಉಲ್ಲಾಸದಿಂದ ಓಡಾಡುತ್ತಿದ್ದ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಮಾಸ್ಕೋ ವಾಸಿಗಳಿಂದ ತುಂಬಿಹೋಗಿತ್ತು. ಗೊರ್ಬಚೆವ್ ಮತ್ತಿತರ ಮುಖಂಡರು ಜನರನ್ನು ಅಭಿನಂದಿಸಿದರು. ಸಮಾಜವಾದಿ ಪ್ರಭುತ್ವವನ್ನು ಇನ್ನಷ್ಟು ಆಳಗೊಳಿಸುವ ಕ್ರಮಗಳನ್ನು ಬೆಂಬಲಿಸುವ, ಅಧಿಕಾರಶಾಹಿ ಪ್ರವೃತ್ತಿಯನ್ನು ಗೇಲಿಮಾಡುವ, ಜನಾಂಗ ಸಂಕುಚಿತತೆಯನ್ನು ಖಂಡಿಸುವ ಹಲವಾರು ಭಿತ್ತಿಚಿತ್ರಗಳು ಕಂಡು ಬಂದವು. ಸೋವಿಯತ್ ಒಕ್ಕೂಟದ ಇತರೆಲ್ಲಾ ಸ್ಥಳಗಳಲ್ಲೂ ಸಂಭ್ರಮದ ಮೇ ದಿನಾಚರಣೆಯ ವರದಿಗಳು ಬಂದಿವೆ.

ಚೀಣಾದಲ್ಲಿ

ಚೀಣಾದ ರಾಜಧಾನಿ ಬೈಜಿಂಗ್‌ನಲ್ಲಿ ದೇಶದ ಎಲ್ಲೆಡೆಯಿಂದ ಚೀಣಾದ ಕಾರ್ಮಿಕ ವರ್ಗದ ವಿವಿಧ ವಿಭಾಗಗಳನ್ನು ಪ್ರತಿನಿಧಿಸುವ ಎರಡು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಮಹಾನ್ ಜನತಾ ಸಭಾಂಗಣದಲ್ಲಿ ಸಭೆ ಸೇರಿ ಮೇ ದಿನವನ್ನು ಆಚರಿಸಿದರು. ಚೀಣಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸ್ಥಾಯೀ ಸಮಿತಿಯ ಸದಸ್ಯ ಹುಕ್ಲಿಲಿ, ಪ್ರಧಾನ ಮಂತ್ರಿ ಲಿಪೆಂಗ್ ಮತ್ತಿತರ ಪಕ್ಷದ ಹಾಗೂ ಸರಕಾರೀ ಮುಖಂಡರು ಈ ಪ್ರತಿನಿಧಿಗಳನ್ನುದ್ದೇಶಿಸಿ ಮಾತಾ ನಾಡಿದರು. ಸಾಮಾಜಿಕ ಸ್ಥಿರತೆ ಕಾಪಾಡುವಲ್ಲಿ ನೆರವಾಗಬೇಕೆಂದು ಸಮಾಜವಾದೀ ಪ್ರಜಾಪ್ರಭುತ್ವ ಪ್ರಶ್ನೆಯನ್ನು ಸರಕಾರ ಮುಂದುವರೆಸುವುದಾಗಿಯೂ ಕಾರ್ಮಿಕ ವರ್ಗಕ್ಕೆ ಭರವಸೆ ನೀಡಿದರು.ಉದ್ದಿಮೆಗಳ ಪ್ರಜಾಸತ್ತಾತ್ಮಕ ನಿರ್ವಹಣೆಯಲ್ಲಿ ಕಾರ್ಮಿಕರ, ನೌಕರರ ಪಾಲುಗೊಳ್ಳುವಿಕೆ ಸಮಾಜವಾದೀ ಪ್ರಜಾಪ್ರಭುತ್ವ ರಾಜಕಾರಣದ ಪ್ರಮುಖ ಅಂಗ ಎಂದು ಹುಕ್ಲಿಲಿಯವರು ಕಾರ್ಮಿಕರ ಪ್ರಜಾ ಸತ್ತಾತ್ಮಕ ಹಕ್ಕುಗಳನ್ನು, ಕಾರ್ಖಾನೆಗಳ ಉತ್ಪಾದನೆ, ನಿರ್ವಹಣೆ ಮತ್ತು ಗಾಮಾಚರಣೆ ಕುರಿತಾದ ನಿರ್ಣಯಗಳಲ್ಲಿ ಕಾರ್ಮಿಕರ ಪ್ರಾತಿನಿಧ್ಯ ಹಕ್ಕುಗಳನ್ನು, ತಮ್ಮ ಕಾರ್ಖಾನೆಯ ಮುಖಂಡರೊಂದಿಗೆ ಪ್ರಜಾಸತ್ತಾತ್ಮಕ ಸಂವಾದದ ಹಕ್ಕುಗಳನ್ನು ಗೌರವಿಸಬೇಕೆಂದು ಕರೆ ನೀಡಿದರು. ಅಖಿಲ ಚೀಣಾ ಕಾರ್ಮಿಕ ಸಂಘಗಳ ಒಕ್ಕೂಟದ ಅಧ್ಯಕ್ಷ ನೀ ಯಝು ಮಾತನಾಡುತ್ತಾ ದೇಶದಲ್ಲಿ ನಡೆಯುತ್ತಿರುವ ಸುಧಾರಣಾ ಕಾರ್ಯಕ್ರಮಗಳಲ್ಲಿ ಕಾರ್ಮಿಕರನ್ನು ಪ್ರತಿನಿದಿಸುವ ಜವಾಬ್ದಾರಿಯನ್ನು ಕಾರ್ಮಿಕ ಸಂಘಗಳು ವಹಿಸಬೇಕು, ಅವು ಕಾರ್ಮಿಕರ ಅಭಿಪ್ರಾಯಗಳನ್ನು ಸಮಗ್ರವಾಗಿ ಹಾಗೂ ಸೂಕ್ತ ಸಮಯದಲ್ಲಿ ಪ್ರತಿಫಲಿಸಬೇಕು ಎಂದು ಕರೆನೀಡಿದರು.

ದಕ್ಷಿಣ ಕೊರಿಯಾದಲ್ಲಿ 6600 ಬಂಧನ

ಮುಷ್ಕರಗಳು ವ್ಯಾಪಕವಾಗಿ ಹರಡಿರುವ ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್‌ನಲ್ಲಿ ಮೇ ದಿನಕ್ಕೆ ಸಿದ್ಧತೆ ನಡೆಸುತ್ತಿದ್ದ 1300 ಕಾರ್ಮಿಕರನ್ನು ಬಂಧಿಸಿ ಮೇ ದಿನದ ರ್‍ಯಾಲಿ ನಡೆಯದಂತೆ ಮಾಡಲು ಸರಕಾರ ಪ್ರಯತ್ನಿಸಿತು. ಇದನ್ನು ಪ್ರತಿಭಟಿಸಿ ಮೇ ದಿನದಂದು ಪ್ರತಿಭಟನೆಗಳು ನಡೆದವು. ಪೋಲೀಸರು 6600 ಕಾರ್ಮಿಕರನ್ನು ಬಂಧಿಸಿದರು. ಇದನ್ನು ಪ್ರತಿಭಟಿಸಿ ದೇಶದ ದಕ್ಷಿಣ ಭಾಗದಲ್ಲಿರುವ ಮಾಸಾನ್‌ನಲ್ಲಿ ದೊಡ್ಡ ರ್‍ಯಾಲಿ ನಡೆಸಲು ಅದುವರೆಗೆ ಪ್ರತಿದಿನ ಮಧ್ಯಾಹ್ನ ಕೆಲಸ ನಿಲ್ಲಿಸಿ ಪ್ರತಿಭಟಿಸಿ ರ್‍ಯಾಲಿ ನಡೆಸಬೇಕೆಂದು ಸುಮಾರು 800 ಉದ್ದಿಮೆಗಳು ಕಾರ್ಮಿಕರಿಗೆ ಕರೆ ನೀಡಲಾಯಿತು.

ಫಿಲಿಪ್ಪೈನ್ಸ್‌ನಲ್ಲಿ

ಕನಿಷ್ಠ ಕೂಲಿಯ ಏರಿಕೆಯ ಬೇಡಿಕೆಯೊಂದಿಗೆ ಫಿಲಿಪ್ಪೈನ್ಸ್‌ನಲ್ಲಿ ಎಲ್ಲೆಡೆ ಮೇ ದಿನ ರ್‍ಯಾಲಿಗಳು ನಡೆದವು. ಕಾರ್ಮಿಕರಿಗೆ ನೀಡಿದ್ದ ಆಶ್ವಾಸನೆ ನೆರವೇರಿಸದ ಅಕ್ವಿನೋ ಸರಕಾರ ಮೇ ದಿನ ರ್‍ಯಾಲಿಗಳಲ್ಲಿ ಕಾರ್ಮಿಕರು ಅಪಾರ ಸಂಖ್ಯೆಯಲ್ಲಿ ಪಾಲುಗೊಳ್ಳುವುದನ್ನು ನೋಡುತ್ತಿದ್ದಂತೆ ಭಯಭೀತಗೊಂಡ ಸೇನಾಪಡೆಗಳನ್ನು ಸನ್ನದ್ಧಗೊಳಿಸಲು ಆಜ್ಞಾಪಿಸಿತು. ಇಪ್ಪತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದ ಮನಿಲಾದ ರ್‍ಯಾಲಿ ಕನಿಷ್ಠ ಕೂಲಿಯನ್ನು ಹೆಚ್ಚಿಸದಿದ್ದರೆ ದೇಶವ್ಯಾಪ್ತಿ ಮುಷ್ಕರ ನಡೆಸುವ ಎಚ್ಚರಿಕೆ ನೀಡಿತು.

ಕೋಮುವಾದಿಗಳ ತಂತ್ರಗಳನ್ನು ಒಗ್ಗಟ್ಟಿನಿಂದ ವಿಫಲಗೊಳಿಸಬೇಕು

ಉತ್ತರ ಪ್ರದೇಶದ ಮಥುರಾದಲ್ಲಿ ಇತ್ತೀಚೆಗೆ ನಡೆದ ಕೋಮುದಂಗೆಯ ಬಗ್ಗೆ ಸಿ.ಪಿಐ.(ಎಂ) ಪಾಲಿಟ್‌ಬ್ಯೂರೋ ತನ್ನ ತೀವ್ರ ಆತಂಕವ್ಯಕ್ತಪಡಿಸಿದೆ. ಕೋಮು ದಂಗೆಗಳ ಹಿಒಬಲೆಯೇ ಇಲ್ಲದ ಈ ನಗರದಲ್ಲಿ ಹಿಂಸಾಚಾರ ನಡೆಯಲು ಹಿಂದೂ ಕೋಮುವಾದಿಗಳು ಹರಡುತ್ತಿರುವ ಭಾವೋದ್ರೇಕವೇ ಕಾರಣ. "ರಾಮಜನ್ಮಭೂಮಿ"ಯನ್ನು ವಿಮೋಚನೆ ಗೊಳಿಸಬೇಕೆನ್ನುವ, ಇದರಲ್ಲಿ ಮಥುರೆ ಮತ್ತು ವಾರಾಣಸಿಯನ್ನು ಎತ್ತಿ ತೋರಿಸುವ ವಿಶ್ವಹಿಂದೂ ಪರಿಷತ್, ಅದನ್ನು ಬೆಂಬಲಿಸುವ ಆರ್.ಎಸ್.ಎಸ್, ಬಿ.ಜೆ.ಪಿ., ಶಿವಸೇನೆಯ ಮುಖಂಡ ಬಾಳಠಾಕ್ರೆಯ ಮಥುರಾ ಬೇಟಿಯ ಪ್ರಚಾರ ಇವೆಲ್ಲಾ ಕೂಡಿ ಸೃಷ್ಟಿಸಿದ ವಾತಾವರಣದಲ್ಲಿ ಬಜರಂಗ್ ದಳದ ಕುಮ್ಮಕ್ಕಿನಿಂದಾಗಿ ಕೋಮುಗಲಭೆಗಳು ನಡೆದವು.

ಮಥುರಾ ಹಿಂಸಾಚಾರ ಉತ್ತರಪ್ರದೇಶ ಮತ್ತು ಬಿಹಾರದಲ್ಲಿ ಗಲಭೆಗಳನ್ನು ಸೃಷ್ಟಿಸುವ ಒಂದು ಪಿತೂರಿಯ ಬಗ್ಗೆ ಸಾಕ್ಷಿ ನೀಡುವ ಘಟನೆ ಎಂದು ಪಾಲಿಟ್‌ಬ್ಯೂರೋ ಹೇಳುತ್ತಾ ಎಂಟು ಜನರ ಬಲಿತೆಗೆದುಕೊಂಡ ಹಜಾರಿಬಾಗ್ ದಂಗೆ ಯಾವ ಮಟ್ಟದವರೆಗೆ ವಿಷ ಹರಡಿದೆ ಎಂಬುದನ್ನು ಸೂಚಿಸುತ್ತದೆ ಎಂದಿದೆ.

ಕೋಮು ಶಕ್ತಿಗಳ ಈ ದುಷ್ಟ ಯೋಚನೆಗಳ ವಿರುದ್ಧ ಎಲ್ಲಾ ಜಾತ್ಯತೀತ ಶಕ್ತಿಗಳು ಜಾಗೃತಗೊಳ್ಳಬೇಕು ಎಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ. ಅವುಗಳ ದೇಶ ವಿರೋಧಿ, ಪ್ರತಿಗಾಮಿ ಪಿತೂರಿ ಯನ್ನು ಬಯಲಿಗೆಳೆಯಬೇಕು.

ಇಂತಹ ಸನ್ನಿವೇಶದ ಚರ್ಚೆ ನಡೆಸಲು ತಕ್ಷಣ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆಯಬೇಕೆಂದು, ರಾಮಜನ್ಮಭೂಮಿ-ಬಾಬ್ರಿ ಮಸೀದಿಯ ಪ್ರಶ್ನೆಯನ್ನು ತ್ವರಿತ ಕಾನೂನು ತೀರ್ಪಿಗೆ ಒಪ್ಪಿಸಬೇಕೆಂದು ಪಾಲಿಟ್‌ಬ್ಯೂರೋ ಸರಕಾರಕ್ಕೆ ಕರೆನೀಡಿದೆ.

ನೆಹರೂ ಉದ್ಯೋಗ ಯೋಜನೆ

ರೈತರ, ಕೃಷಿ ಕಾರ್ಮಿಕರ ಪ್ರಕ್ಷೋಭೆ, ಹೋರಾಟ ಕಾಂಗ್ರೆಸ್ ಕುತಂತ್ರಗಳನ್ನು ವಿಫಲಗೊಳಿಸಬೇಕು

"ನೆಹರೂ ರೋಜಗಾರ್ ಯೋಜನಾ" ಕಾಂಗ್ರೆಸ್ ಚುನಾವಣಾ ಪ್ರಚಾರದ ಭಾಗ. ಆದರೆ ಹಾಗೆಂದು ಗೇಲಿ ಮಾಡಿದರಷ್ಟೇ ಸಾಲದು. ಕಿಸಾನ್ ಸಭಾ ಕೃಷಿ ಕಾರ್ಮಿಕ ಸಂಘಗಳ ಚಳುವಳಿಗಳು ಜನತೆಗೆ ತಿಳುವಳಿಕೆ ನೀಡಬೇಕು. ಈ ಯೋಜನೆಯ ಜಾರಿಗೆ ಹೋರಾಡಬೇಕು. ತುರ್ತುಪರಿಹಾರ ಗೆದ್ದು ಕೊಳ್ಳಬೇಕು. ದಟ್ಟದರಿದ್ರರ ದಯನೀಯ ಸ್ಥಿತಿಯ ದುರ್ಲಾಭ ಪಡೆಯುವ ಕಾಂಗ್ರೆಸ್ ಕುತಂತ್ರವನ್ನು ವಿಫಲಗೊಳಿಸಬೇಕು. ಜನತಾ ಆಂದೋಲನ ಪ್ರಬಲವಾದಷ್ಟು ಕಾಂಗ್ರೆಸ್‌ನ ಬಗ್ಗೆ ಹೆಚ್ಚೆಚ್ಚು ಬಯಲಾಗುತ್ತದೆ.

ಪ್ರಧಾನ ಮಂತ್ರಿಗಳು ಏಪ್ರಿಲ್ 29 ರಂದು ನೆಹರೂ ರೋಜಗಾರ್ ಯೋಜನಾ" ವನ್ನು ಉದ್ಘಾಟಿಸಿದರು. ಅದರ ಮುಖ್ಯ ಅಂಶಗಳು ಹೀಗಿವೆ:

★ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬದಲ್ಲೂ, ಕನಿಷ್ಠ ಒಬ್ಬರಿಗೆ ಉದ್ಯೋಗ

★ ಇತರ ಎಲ್ಲಾ ಗ್ರಾಮೀಣ ಪರಿಹಾರ ಮತ್ತು ಉದ್ಯೋಗ ಯೋಜನೆಗಳು ಈ ಯೋಜನೆಯಲ್ಲಿ ವಿಲೀನ

★ ಯೋಜನೆಯನ್ನು ಎಲ್ಲಾ ಪಂಚಾಯತುಗಳಿಗೆ ವಿಸ್ತರಿಸಲಾಗುವುದು ಮತ್ತು ಯೋನೆಯ ಜಾರಿ ಗ್ರಾಮ ಪಂಚಾಯತುಗಳ ಮೂಲಕ

★ ಪ್ರತಿಯೊಂದು ಗ್ರಾಮ ಪಂಚಾಯತ್‌ಗೂ 75 ಸಾವಿರದಿಂದ ಒಂದು ಲಕ್ಷ ರೂ.

★ ಈ ಯೋಜನೆಗಾಗಿ ಹಣ ಶೇಕಡಾ 80 ಕೇಂದ್ರದಿಂದ, ಶೇಕಡಾ 20 ರಾಜ್ಯಗಳಿಂದ

★ ಯೋಜನಾ ಹಣ ರಾಜ್ಯದ ಜನಸಂಖ್ಯೆ ಮತ್ತಿತರ ವಿಷಯಗಳ ಮೇಲೆ ಅವಲಂಬಿತ

★ ಮಹಿಳೆಯರಿಗೆ ಶೇಕಡಾ 30 ಉದ್ಯೋಗಗಳು ಮೀಸಲು

★ ಯೋಜನೆಯನ್ವಯ ಸಿಗುವ ಉದ್ಯೋಗ ವರ್ಷದಲ್ಲಿ ಕನಿಷ್ಠ 50 ರಿಂದ 100 ದಿನಗಳಷ್ಟು

ಭಾರಿ ಗ್ರಾಮೀಣ ಉದ್ಯೋಗ ಯೋಜನೆಯ ತುರ್ತು ಅಗತ್ಯ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಇದೆ ಎಂಬುದರ ಬಗ್ಗೆ ಯಾವುದೇ ಸಂಶಯವಿಲ್ಲ. ಬಂಡವಾಳಶಾಹಿ ಬೆಳವಣಿಗೆ ಕೃಷಿ ಪ್ರದೇಶಗಳಲ್ಲಿ ಕೋಟ್ಯಾಂತರ ಜನರು ತತ್ತರಿಸುವಂತೆ ಮಾಡಿದೆ. ಭೂಮಿ ಮತ್ತು ಇತರ ಸಣ್ಣ ಪ್ರಮಾಣದ ಉತ್ಪಾದನೆಯ ಸಾಧನೆಗಳನ್ನು ಉತ್ಪಾದಕನಿಂದ ನಿರ್ದಯವಾಗಿ ಕಸಿದುಕೊಳ್ಳುವ ಮೂಲಕ, ಕೋಟ್ಯಾಂತರ ಜನರು ವರ್ಷದ ಹೆಚ್ಚಿನ ಸಮಯ ನಿರುದ್ಯೋಗಿಗಳಾಗಿರುವ ಪರಿಸ್ಥಿತಿ ತಂದಿಟ್ಟಿದೆ. ಹಲವು ವರ್ಷಗಳ ಹಿಂದೆ ಗ್ರಾಮೀಣ ಕಾರ್ಮಿಕರಿಗೆ ಹೆಚ್ಚೆಂದರೆ ವರ್ಷದಲ್ಲಿ ನಾಲ್ಕು ತಿಂಗಳು ಉದ್ಯೋಗ ಸಿಗುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಈಗ ಆಧುನಿಕ ಕೃಷಿ ಮತ್ತು ಬಂಡವಾಳ ಶಾಹಿ ದಾರಿಯಲ್ಲಿ ಮುನ್ನಡೆಯಿಂದಾಗಿ ಉದ್ಯೋಗ ಸಿಗುವ ದಿನಗಳು ಇನ್ನಷ್ಟು ಕಡಿಮೆಯಾಗಿರಬೇಕು. ಗ್ರಾಮೀಣ ನಿರುದ್ಯೋಗಿಗಳ ಮತ್ತು ಬಡತನದ ರೇಖೆಯ ಕೆಳಗಿರುವ ಜನರ ಸಂಖ್ಯೆ ತ್ವರಿತವಾಗಿ ಏರಿದೆ. ಪ್ರತಿ ವರ್ಷ ಬಡತನದ ರೇಖೆಯ ಕೆಳಗಿರುವ ಜನರ ಸಂಖ್ಯೆ ಕಡಿಮೆಯಾಗಿದೆ ಎಂದು 'ಕಂಡು ಹಿಡಿಯುವ' ಅಧಿಕೃತ ಅಂಕೆ ಸಂಖ್ಯೆಯ ಪ್ರಕಾರವೇ, ಈ ಸಂಖ್ಯೆ 25 ಕೋಟಿಯನ್ನು ದಾಟಿದೆ.

ಇಂತಹ ಪರಿಸ್ಥಿತಿಯಲ್ಲಿ, ಗ್ರಾಮೀಣ ಜನತೆಯ ಕಷ್ಟ ಕಾರ್ಪಣ್ಯಗಳನ್ನು ಕಡಿಮೆ ಮಾಡುವ ನಿರುದ್ಯೋಗಿಗಳಿಗೆ ಪರಿಹಾರ ನೀಡುವ ಯಾವುದೇ ನೈಜ ಪ್ರಯತ್ನವನ್ನು ಸ್ವಾಗತಿಸಬೇಕಾದ್ದೇ. ಆದರೆ ರಾಜೀವ ಸರ್ಕಾರದ ಜವಾಹರ ನೆಹರೂ ಯೋಜನೆ ಇಂತಹ ಒಂದು ನಿಜವಾದ ಪ್ರಯತ್ನ ಎಂದು ಸ್ವಾಗತಿಸುವುದು ಅಗದ ಮಾತು. ಭಾರತದ ಜನತೆಯ ಮೇಲೆ ಈ ಕಷ್ಟಕಾರ್ಪಣ್ಯಗಳನ್ನು, ನಿರುದ್ಯೋಗವನ್ನು ಹೇರಿರುವುದು. ಇದೇ ಸರಕಾರ . ಇದೇ ಸರ್ಕಾರ ಹಿಂದೆ ಚುನಾವಣೆ ನಡೆಯುವ ವರ್ಷಗಳಲ್ಲಿ ಗ್ರಾಮೀಣ ಮತ ಸೆಳೆಯಲು ಇಂತಹುದೇ ಆಶ್ವಾಸನೆಗಳನ್ನು ನೀಡಿತ್ತು.

ವಿರೋಧ ಪಕ್ಷಗಳ ದೌರ್ಬಲ್ಯದ ಉಪಯೋಗ

ಪ್ರತಿಯೊಂದು ಕುಟುಂಬಕ್ಕೆ ಕನಿಷ್ಠ ಒಂದು ಉದ್ಯೋಗ ಕೊಡುವ ಯೋಜನೆ ಹೊಸದೇನಲ್ಲ. ಇಂದಿರಾ ಗಾಂಧಿ ಇಂತಹುದೇ ಆಶ್ವಾಸನೆ ನೀಡಿ, ಎಂದೂ ಅದನ್ನು ಪಾಲಿಸಲಿಲ್ಲ. ಬಹುಶಃ ಬೇರಾವುದೇ ಸಾಮಾಜಿಕ ಕಲ್ಯಾಣ ಮತ್ತು ಗ್ರಾಮೀಣ ಪರಿಹಾರದ ಯೋಜನೆ ಇಷ್ಟು ಮುಲಾಜಿಲ್ಲದ ಮುಕ್ತ ಭ್ರಷ್ಟಾಚಾರಕ್ಕೆ ಗುರಿಯಾದ್ದಿಲ್ಲ. ಪೊಳ್ಳು ಭರವಸೆಗಳನ್ನು ಕೊಟ್ಟದ್ದಿಲ್ಲ. ಬೇನಾಮಿ ಕಾರ್ಮಿಕರ ಕೂಲಿಯ ಹೆಸರಲ್ಲಿ ದೊಡ್ಡ ಪ್ರಮಾಣದಲ್ಲಿ ದುರ್ವ್ಯವಹಾರಕ್ಕೆ ಒಳಗಾದ್ದಿಲ್ಲ. ಶ್ರೀಮಂತರ ಮತ್ತು ಜಮೀನುದಾರರಿಗೆ ಪ್ರಯೋಜನವಾಗುವ ಅಗ್ಗದ ಕೂಲಿಗಾರರನ್ನು ಒದಗಿಸಿದ್ದಿಲ್ಲ.

ವರ್ಷಕ್ಕೆ ಪ್ರತಿ ಕುಟುಂಬಕ್ಕೆ 50 ರಿಂದ 100 ದಿನಗಳು ಉದ್ಯೋಗ ಒದಗಿಸುವ ಯೋಜನೆ, ಮತ್ತು ಈ ಯೋಜನೆಯನ್ನು ದೇಶದ ಎಲ್ಲಾ ಪಂಚಾಯತುಗಳಲ್ಲಿ ಅನ್ವಯಿಸುವ ಸರ್ಕಾರಿ ಆಶ್ವಾಸನೆ ಭಾಗಶಃ ಜಾರಿಯಾದರೂ ಬೇಸಾಯದಲ್ಲಿ ತೊಡಗಿರುವ ತತ್ತರಿಸಿರುವ ಗ್ರಾಮೀಣ ಜನತೆಗೆ ತೀರಾ ಅಗತ್ಯವಿರುವ ಪರಿಹಾರ ಒದಗಿಸೀತು. ಪರಿಹಾರದ ತುರ್ತು ಅಗತ್ಯದಿಂದಾಗಿ ಗ್ರಾಮೀಣ ಜನತೆ ಇಂತಹ ಯೋಜನೆಗಾಗಿ ಕೇಂದ್ರ ಸರ್ಕಾರ ಮತ್ತು ಅದರ ಸಂಸ್ಥೆಗಳತ್ತ ಆಶಾಭಾವದಿಂದ ನೋಡುತ್ತದೆ ಎಂಬುದಕ್ಕೆ ಸಂಶಯವಿಲ್ಲ. ಈ ಚುನಾವಣಾ ವರ್ಷದಲ್ಲಿ ರಾಜೀವ ಸರ್ಕಾರಕ್ಕೆ ಬೇಕಾಗಿರುವುದು ಅಷ್ಟೇ. ಇಂತಹ ಯೋಜನೆಗಳಿಂದ ಜನತೆಯ ಒಂದು ವಿಭಾಗಕ್ಕೆ ತಲುಪುವ ಚೂರುಪಾರು ಪರಿಹಾರ ಸಹ, ಭೂಹೀನ ಗ್ರಾಮೀಣ ಜನತೆ, ಆಶಾಗೋಪುರ ಕಟ್ಟುವಂತೆ ಮಾಡಬಲ್ಲುದು. ಸರ್ಕಾರದ ಸದುದ್ದೇಶಗಳಿಗೆ ಜಾಹೀರಾತು ಆಗಬಲ್ಲದು. <u>ಈ ಯೋಜನೆಯ ಘೋಷಣೆ ಅಂಕೆ ಸಂಖ್ಯೆಗಳನ್ನು ಎದುರಿಸುವುದು, ಮತ್ತು ಪಂಚಾಯತುಗಳ ಮೇಲೆ ಕಣ್ಣಿಟ್ಟ ಕೇಂದ್ರೀಕರಣ ಇವುಗಳ ರಾಜಕೀಯ ಪರಿಣಾಮಗಳನ್ನು ಕಡೆಗಣಿಸಬಾರದು. ಅಲ್ಲಿ, ಇಲ್ಲಿ, ಕೆಲವರು ಪರಿಹಾರ ಪಡೆದರೆ, ಅದರ ಸಾವಿರ ಪಾಲು ಜನರು ಈ ಯೋಜನೆ ಪರಿಣಾಮಕಾರಿಯಾಗಿ ರಬಹುದೇನೋ ಎಂದು ಯೋಚಿಸಲು ಅದು ಪ್ರೋತ್ಸಾಹ ನೀಡುತ್ತದೆ.</u>

ರಾಜೀವ ಸರ್ಕಾರ ವಿರೋಧ ಪಕ್ಷಗಳ ಸವಾಲಿನ ಅತಿ ದುರ್ಬಲ ಭಾಗದತ್ತ ಹೊಡೆಯಲು ಈ ಯೋಜನೆಯನ್ನು ಉಪಯೋಗಿಸಿಕೊಂಡಿದೆ. ಜಾತ್ಯತೀತ ವಿರೋಧ ಪಕ್ಷಗಳು ಗ್ರಾಮೀಣ ಜನತೆಯ ಅತ್ಯಂತ ದಿಟ್ಟ ದರಿದ್ರ ವಿಭಾಗಗಳ ಭೂಹೀನ ಕಾರ್ಮಿಕರ, ಹರಿಜನರ, ಆದಿವಾಸಿಗಳ ಮತ್ತು ಹೆಂಗಸರ ವಿಶ್ವಾಸ ಗಳಿಸಿಲ್ಲ. ಹೆಚ್ಚೆಂದರೆ ಕಾಂಗ್ರೆಸ್‌ನ ಕೆಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ಕೆಲವು ವಿರೋಧ ಪಕ್ಷಗಳು ಇಂತಹ ವಿಭಾಗಗಳಿಗೆ ಪಕ್ಷದ ಸ್ಥಾನಗಳು ಮತ್ತು ಪಾರ್ಲಿಮೆಂಟರಿ ವಿಧಾನಸಭಾ ಸ್ಥಾನಗಳ ಆಶ್ವಾಸನೆ ಕೊಡುತ್ತವೆಯಷ್ಟೆ. ಕೃಷಿ ಸುಧಾರಣೆಯ ಮೂಲಭೂತ ಘೋಷಣೆಗಳ ಭೂಮಿಯ ಮರು ಹಂಚಿಕೆಯ ಮತ್ತು ಕೃಷಿ ಕೂಲಿಗಾರರ ಕನಿಷ್ಠ ಮಜೂರಿಯ ಬೇಡಿಕೆಗಳಿಗಾಗಿ ಹೋರಾಟದ ಪರವಾದ ಪಾತ್ರ ಅವು ವಹಿಸುತ್ತಿಲ್ಲ. ವಿರೋಧ ಪಕ್ಷಗಳ ಈ ದೌರ್ಬಲ್ಯವನ್ನು ಆಳುವ ಪಕ್ಷ ಉಪಯೋಗಿಸಲು ಪ್ರಯತ್ನಿಸುತ್ತಿದೆ.

ನೆಹರೂ ಉದ್ಯೋಗ ಯೋಜನೆ ಕಾಂಗ್ರೆಸ್ ಚುನಾವಣಾ ಹೋರಾಟದ ಅವಿಭಾಜ್ಯ ಅಂಗ. ಈ ಯೋಜನೆಯನ್ನು ಘೋಷಿಸಿದ ರೀತಿ, ಅದನ್ನು ಜಾರಿಗೊಳಿಸಬೇಕೆಂದಿರುವ ರೀತಿ, ಅದರ ಪ್ರಯೋಜನ ಪಡೆಯುವವರನ್ನು ಆಯ್ಕೆ ಮಾಡುವ ರೀತಿ ನೋಡಿದರೆ ಕೇಂದ್ರ ಸರ್ಕಾರ ಚುನಾವಣಾ ಹೋರಾಟಕ್ಕೆ ಸಾರ್ವಜನಿಕ ಹಣವನ್ನು ಈ ರೂಪದಲ್ಲಿ ಸಂಪೂರ್ಣವಾಗಿ ತಾನೇ ಸ್ವಸ್ವ ಉಪಯೋಗ ಬಯಸುತ್ತದೆ ಎಂಬುದು ಸ್ಪಷ್ಟ.

ರಾಜ್ಯಗಳ ಅಧಿಕಾರ ಮೊಟಕು

ಮೊದಲನೆಯದಾಗಿ, ಈ ಕಾರ್ಯಕ್ರಮಕ್ಕೆ ಹಿಂದೆಂದೂ ಇಲ್ಲದ ಭಾರೀ ಹಣ ಒದಗಿಸಲಾಗಿದೆ ಎಂಬ ಭಾವನೆ ಹರಡಲಾಗುತ್ತಿದೆ. ಆದರೆ ನಿಜವಾಗಿ ಮೊದಲೇ ನಿರ್ಧರಿಸಿರುವ ಹಣಕ್ಕಿಂತ ಹೆಚ್ಚಿನದೇನೂ ಒದಗಿಸಿಲ್ಲ. ಎರಡನೆಯದಾಗಿ, 2100 ಕೋಟಿ ರೂ.ಗಳನ್ನು ಒಂದೇ ವರ್ಷದಲ್ಲಿ ಈ ಯೋಜನೆಗೆ ಖರ್ಚು ಮಾಡುವುದರಿಂದ ಭಾರೀ ಬದಲಾವಣೆ ತರಬಹುದು ಎಂಬ ಭರವಸೆ ಹುಟ್ಟಿಸುವ ಪ್ರಯತ್ನವೂ ನಡೆದಿದೆ. <u>ಆದರೆ ಈ ಯೋಜನೆಯ ಮುಖ್ಯ ಸಾರವೆಂದರೆ ಯೋಜನೆಯ ಜಾರಿಯಲ್ಲಿ ಕಾಂಗ್ರೆಸ್ ಮತ್ತು ಕೇಂದ್ರ ಸರ್ಕಾರದತ್ತ ಜನರ ಗಮನ ಕೇಂದ್ರೀಕೃತವಾಗಬೇಕು. ಜನತೆಗೆ ಹಣದ ಚೀಲ ಯಾರ ಕೈಲಿದೆ ಮತ್ತು ಈ 'ಪರಿಹಾರ'ವನ್ನು ನೀಡುತ್ತಿರುವ 'ದಾನ ಶೂರರು' ಯಾರು ಎಂಬುದು ಯಾವಾಗಲೂ ಗೊತ್ತಾಗಬೇಕು ಎಂಬುದೂ ಸಹ ಪ್ರಮುಖ ಭಾಗ.</u>

ಗ್ರಾಮೀಣ ಜನತೆಯ ಕಷ್ಟ, ಕಾರ್ಪಣ್ಯಗಳಿಗೆ ಪರಿಹಾರ ನೀಡುವ ಯಾವುದೇ ನೈಜ ಪ್ರಯತ್ನ ಸ್ವಾಗತಾರ್ಹ. ಆದರೆ ಜವಾಹರ್ ಉದ್ಯೋಗ ಯೋಜನೆ ಇಂತಹ ನೈಜಪ್ರಯತ್ನವಲ್ಲ. ಯಾಕೆಂದರೆ ಗ್ರಾಮೀಣ ಜನತೆಯ ಮೇಲೆ ಈ ಕಷ್ಟ, ಕಾರ್ಪಣ್ಯ ಹೇರಿರುವುದು ಇದೇ ಸರಕಾರ!

ಆದ್ದರಿಂದಲೇ ಈ ಯೋಜನೆಯ ಜಾರಿಯಲ್ಲಿ ರಾಜ್ಯ ಸರ್ಕಾರಗಳಿಗೆ, ಅದರಲ್ಲೂ ಕಾಂಗ್ರೆಯೇತರ ರಾಜ್ಯ ಸರ್ಕಾರಗಳಿಗೆ ಯಾವುದೇ ಪಾತ್ರವಿಲ್ಲ. ಇದಕ್ಕಾಗಿ ಯೋಜನೆ ಕೇಂದ್ರ ಸರ್ಕಾರ ಮತ್ತು ಪಂಚಾಯತುಗಳ ನಿಯಂತ್ರಣ ದಲ್ಲಿರಬೇಕು. ಪಂಚಾಯತುಗಳು ಪ್ರಜಾಸತ್ತೆಯ ತಳಹದಿಯೆಂದು ರಾಜೀವ್ ಗಾಂಧಿಯವರಿಗೆ ಇದ್ದಕ್ಕಿದ್ದ ಹಾಗೆ ಆಗಿರುವ 'ಜ್ಞಾನೋದಯ'ದ ಮೂಲಸೆಲೆ ಇರುವುದು ಇಲ್ಲೇ.

75 ಸಾವಿರದಿಂದ ಒಂದು ಲಕ್ಷ ರೂ.ಗಳನ್ನು ಪಡೆಯಲಿರುವ ಪಂಚಾಯತುಗಳು ಚುನಾವಣಾ ದಿನಗಳಲ್ಲಿ ಸರ್ಕಾರದ ಅಗತ್ಯಗಳಿಗೆ ಅನುಕೂಲಕರ ಎಂಬುದು ಸರ್ಕಾರದ ಅಂದಾಜು ಅಧಿಕೃತವಾಗಿ ಅವು ಈ ಹಣವನ್ನು ರಸ್ತೆ ನಿರ್ಮಿಸಲು ಮತ್ತಿತರ ನಿರ್ಮಾಣ ಯೋಜನೆಗಳಲ್ಲಿ ತೊಡಗಲು ಖರ್ಚು ಮಾಡಬೇಕು. ಇದಕ್ಕಾಗಿ ತಮ್ಮದೇ ಆದ ಯೋಜನೆ ಹಾಕಿಕೊಳ್ಳಬೇಕು. ಅವು ತಾವು ಹಾಕಿಕೊಂಡ ಯೋಜನೆಗಳಿಗಾಗಿ ಈ ಹಣ ವಿನಿಯೋಗಿಸಲು ಸಂಪೂರ್ಣ ಸ್ವತಂತ್ರವಾಗಿರುತ್ತವೆ. ಅಷ್ಟೇ ಅಲ್ಲ, ಪಂಚಾಯತು ಸಂಸ್ಥೆಗಳ ಮೇಲೆ ಕೇಂದ್ರ ಸರ್ಕಾರ ನೇರ ನಿಯಂತ್ರಣ ಪಡೆಯಲು ಅಗತ್ಯವಾದ ಸಂವಿಧಾನ ತಿದ್ದುಪಡಿ ತರುವುದಾಗಿ ರಾಜೀವ್ ಗಾಂಧಿ ಘೋಷಿಸಿದ್ದಾರೆ (ಅನಂತರ ಇಂತಹ ತಿದ್ದುಪಡಿ ಮಸೂದೆಯನ್ನು ಈಗಾಗಲೇ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ.)

ಮಾತ್ರವಲ್ಲ, ರಾಜೀವ್ ಗಾಂಧಿ ತಾನು ಕಾಂಗ್ರೆಯೇತರ ರಾಜ್ಯ ಸರ್ಕಾರಗಳಿಂದ ಪಂಚಾಯತು ಸಂಸ್ಥೆಗಳನ್ನು ಕಾಪಾಡುವ ಏಕೈಕ ರಕ್ಷಕ ಎಂದು ಪೋಸು ಹೊಡೆಯುತ್ತಾ ಸ್ಥಳೀಯ ಸಂಸ್ಥೆಗಳನ್ನು ನಿರ್ಬಂಧಿಸುವುದು ಅತಿಯಾಗಿದೆ, ಇಲ್ಲಿ ಹರಿಜನ, ಗಿರಿಜನ ಮತ್ತು ಮಹಿಳೆಯರ ಪ್ರಾತಿನಿಧ್ಯ ಏನೇನೂ ಸಾಲದು ಸಂಸ್ಥೆಗಳಿಗೆ ಕೊಟ್ಟಿರುವ ಅಧಿಕಾರ ಸಾಲದು ಎನ್ನುತ್ತಿದ್ದಾರೆ 'ಕೆಲವು ರಾಜ್ಯಗಳಲ್ಲಿ ಪಂಚಾಯತು ಸಂಸ್ಥೆಗಳಲ್ಲಿ ನೇಮಿತ ಸದಸ್ಯರು ಹೆಚ್ಚಾಗಿದ್ದಾರೆ. ಇದರಿಂದಾಗಿ ಅದರ ಪ್ರಾಮುಖ್ಯತೆ ಕಡಿಮೆಯಾಗಿದೆ' ಎಂದಿದ್ದಾರೆ. ಆದರೆ ರಾಜೀವ್ ಗಾಂಧಿಗೆ ಪಂಚಾಯತು ಸಂಸ್ಥೆಗಳ ಬಗ್ಗೆ ಕಾಂಗ್ರೆಸ್ಸಿನ ಧೋರಣೆಯ ದಾಖಲೆ ಏನು ಎಂದು ಹೇಳುವುದಕ್ಕೆ ಧೈರ್ಯ ಸಾಲದು ಕಾರಣವಿಷ್ಟೆ ಈ ದಾಖಲೆ ಒಂದು ಭ್ರಷ್ಟಾಚಾರ ಮತ್ತು ಪಾಲಾಯಿತ್ನ ತನದಿಂದ ತುಂಬಿದೆ.

ರಾಜ್ಯ ಸರ್ಕಾರಗಳ ಅಧಿಕಾರ ಕಿತ್ತು ಪಂಚಾಯತು ಸಂಸ್ಥೆಗಳನ್ನು ಬಲಪಡಿಸಬೇಕಂತೆ. ಇದು ರಾಜ್ಯ ಸರ್ಕಾರಗಳನ್ನು ನಿರ್ವೀರ್ಯಗೊಳಿಸಿ, ಕೇಂದ್ರದಲ್ಲಿ ಎಲ್ಲಾ ಅಧಿಕಾರ ಕೇಂದ್ರೀಕರಿಸುವ ಹಳೆಯ ರಾಗದ ಹೊಸ ರೂಪ. ಈಗ ಕೇಂದ್ರಕ್ಕೆ ಗ್ರಾಮ ಪಂಚಾಯತುಗಳ ಮೇಲೆ ನೇರ ನಿಯಂತ್ರಣ ಬೇಕಂತೆ. ಅದೂ ಹರಿಜನರು ಆದಿವಾಸಿಗಳು ಮತ್ತು ಮಹಿಳೆಯರ ಹಿತಾಸಕ್ತಿಗಳನ್ನು ಕಾಪಾಡಲಿಕ್ಕೆ ಈ ಎಲ್ಲಾ ಬದಲಾವಣೆಗಳು ಅಗತ್ಯವೆಂಬ ಭಾವನೆ ಹರಡಲಾಗುತ್ತಿದೆ.

ಗ್ರಾಮೀಣ ಜನತೆಗೆ ಪರಿಹಾರ ತಲುಪಿಸಿ

ಬೂರ್ಜ್ವಾ ವಿರೋಧ ಪಕ್ಷಗಳ ಮೇಲೆ ರಾಜೀವ್ ಗಾಂಧಿಯ ತೀಕ್ಷ್ಣ ಆಕ್ರಮಣ ಮತ್ತು ಪ್ರಜಾಸತ್ತೆಯ ತಳಹದಿಯಾಗಿ ಪಂಚಾಯತುಗಳ ಮೇಲೆ ಹೊಸದಾಗಿ ಹುಟ್ಟಿರುವ 'ಪ್ರೇಮ' ನೋಡಿದರೆ ಜನತೆಯ ನಿಷ್ಪಕ್ಷಪಾತ ದೃಷ್ಟಿ ಮತ್ತು ಪ್ರಜಾಸತ್ತೆಯ ಮೇಲೆ ಆಸಕ್ತಿಯನ್ನು ಬಳಸಿಕೊಂಡು ಆಕರ್ಷಕ ಘೋಷಣೆಗಳ ಮೂಲಕ ವಿರೋಧ ಪಕ್ಷಗಳ ವಿರುದ್ಧ ಆಳುವ ಪಕ್ಷ ತೀವ್ರ ಹಲ್ಲೆ ಆರಂಭಿಸಿರುವುದು ಕಂಡು ಬರುತ್ತದೆ. ಆದರೆ ತನ್ನ ಪಕ್ಷದೊಳಗೇ ಪ್ರಜಾಸತ್ತೆಯ ಸೋಂಕನ್ನೂ ಸಹಿಸದ ರಾಜೀವ್‌ಗೆ ಪಂಚಾಯತು ಪ್ರಜಾಸತ್ತೆ ಬಗ್ಗೆ ನಿಜವಾದ ಕಾಳಜಿ ಇದೆ ನಂಬುವುದು ಕಷ್ಟ. ಬಹುಶ ಆರೆಸ್ಸೆಸ್ ಬಿಟ್ಟರೆ, ಯಾವುದೇ ಪಕ್ಷ ಕಾಂಗ್ರೆಯಷ್ಟು ಸರ್ವಾಧಿಕಾರಿ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಪಕ್ಷದ ಅಧ್ಯಕ್ಷ ಮತ್ತು ಪ್ರಧಾನ ಮಂತ್ರಿ ಎಂಬ ಎರಡೂ ಕುರ್ಚಿಗಳ ಮೇಲೆ ಕುಳಿತಿರುವ ಒಬ್ಬನ ಮೇಲೆ ಈ ಪಕ್ಷದಲ್ಲಿ ಎಲ್ಲವೂ ಅವಲಂಬಿಸಿರುತ್ತವೆ.

ಗ್ರಾಮೀಣ ದಟ್ಟದರಿದ್ರರ ವಿಶ್ವಾಸ ಗಳಿಸಲು, <u>ನೆಹರೂ ರೋಜಗಾರ್ ಯೋಜನಾ ಕಾಂಗ್ರೆಯ ಚುನಾವಣಾ ಪ್ರಚಾರದ ಭಾಗ. ಇದಕ್ಕೆ ಸವಾಲು ಹಾಕುವುದು ಬರಿಯ ಕಾಂಗ್ರೆಸ್‌ನ ದುರುದ್ದೇಶಗಳನ್ನು ಜಾಹೀರು ಮಾಡುವುದರಿಂದಾಗಲಿ ಯೋಜನೆಯನ್ನು ಗೇಲಿ ಮಾಡುವುದರಿಂದಾಗಲಿ ಸಾಧ್ಯವಿಲ್ಲ. ತುರ್ತು ಪರಿಹಾರದ ಅಗತ್ಯ ಮತ್ತು ಯೋಜನೆ ಜನತೆಯಲ್ಲಿ ಹುಟ್ಟಿಸಬಹುದಾದ ಆಶಾಭಾವನೆಯನ್ನು ಎಡ ಮತ್ತು ಇತರ ವಿರೋಧ ಪಕ್ಷಗಳು ಮನಗಾಣಲಿರುವುದು ಅಗತ್ಯ. ಆದ್ದರಿಂದ ಜನತೆಯ ಮಧ್ಯೆ ಕೆಲಸ ಮಾಡಿ, ಈ ಯೋಜನೆಗೆ ಒದಗಿಸಿರುವ ಹಣ ನಿಜವಾಗಿ ಅವಶ್ಯಕತೆ ಇರುವ ದಟ್ಟದರಿದ್ರರಿಗೆ ತಲುಪುವಂತೆ, ಪಂಚಾಯತು ಮತ್ತು ಕಾಂಗ್ರೆಸಿಗರು ಇದನ್ನು ದುರುಪಯೋಗ ಗೊಳಿಸದಂತೆ ನಿಗಾ ವಹಿಸಬೇಕು. ಇದಕ್ಕಾಗಿ ಜನತಾ ಚಳುವಳಿ ಪ್ರಬಲವಾದಷ್ಟು ಕಾಂಗ್ರೆಸ್‌ನ ಬಣ್ಣ ಹೆಚ್ಚೆಚ್ಚು ಬಯಲಾಗುತ್ತದೆ. ಗ್ರಾಮೀಣ ಜನತೆಯನ್ನು ಮೋಸಗೊಳಿಸುವ ಕಾಂಗ್ರೆಸ್ ಕುತಂತ್ರ ಹೆಚ್ಚೆಚ್ಚು ವಿಫಲವಾಗುತ್ತದೆ.</u>

ಈ ಸಂದರ್ಭದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘಕ್ಕೆ ವಿಶೇಷ ಜವಾಬ್ದಾರಿ ಇದೆ. ಇವುಗಳ ಜಂಟಿ ಚಳುವಳಿ ಗ್ರಾಮೀಣ ಜನತೆಗೆ ತಿಳುವಳಿಕೆ ಕೊಡಬೇಕು. ಈ ಯೋಜನೆಯ ಜಾರಿಗೆ ಹೋರಾಡಬೇಕು. ತುರ್ತು ಪರಿಹಾರವನ್ನು ಗೆದ್ದುಕೊಳ್ಳಬೇಕು. ದಟ್ಟದರಿದ್ರರ ದಯನೀಯ ಸ್ಥಿತಿಯ ದುರ್ಲಾಭ ಪಡೆಯುವ ಕಾಂಗ್ರೆಸ್ ಕುತಂತ್ರವನ್ನು ವಿಫಲಗೊಳಿಸಬೇಕು.

ರಾಜ್ಯಾದ್ಯಾಂತ ಮೇ ದಿನಾಚರಣೆ

ಬೆಂಗಳೂರು

ನಗರದ ವಿವಿಧೆಡೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಶಿಸ್ತಿನಿಂದ ಮೆರವಣಿಗೆಯಲ್ಲಿ ಬಂದ ಕಾರ್ಮಿಕರು ಸಿಲ್ವರ್ ಜ್ಯೂಬಿಲಿ ಪಾರ್ಕನಲ್ಲಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಮೇ ದಿನಾಚರಣೆಯನ್ನು ಯಶಸ್ವಿಗೊಳಿಸಿದರು. ಸಿ.ಐ.ಟಿ.ಯು. ಮತ್ತು ಎ.ಐ.ಟಿ.ಯು.ಸಿ. ಹಾಗೂ ಬ್ಯಾಂಕ್, ಎಲ್.ಐ.ಸಿ. ಮೈಕೋ ಮುಂತಾದ ವಿವಿಧ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ನಡೆಸಿದ ಮೇ ದಿನಾಚರಣೆ ಸಮಾರಂಭದ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾ॥ ವಿ.ಜೆ.ಕೆ. ನಾಯರ್ ರವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷ ಕಾ॥ ಎಸ್. ಸೂರ್ಯ ನಾರಾಯಣರಾವ್ ರವರು ಮಾತನಾಡಿ ರಾಜೀವ್ ಗಾಂಧಿ ಜನವಿರೋಧಿ ನೀತಿಗಳ ವಿರುದ್ಧ ಜನತೆಯನ್ನು ಸಂಘಟಿಸಿ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ದೇಶದ ಸಮಗ್ರತೆ ಏಕತೆಯನ್ನು ಗಾಳಿಗೆ ತೂರಿ ಸಮಯ ಸಾಧಕ ನೀತಿ ಅನುಸರಿಸುತ್ತಾ ದೇಶವನ್ನು ಛಿದ್ರಗೊಳಿಸುವ ಪ್ರತ್ಯೇಕತಾವಾದಿ ಶಕ್ತಿಗಳೊಂದಿಗೆ ಕೈ ಜೋಡಿಸುತ್ತಿರುವ ಕಾಂಗ್ರೆಯನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸುವ ಪ್ರತಿಜ್ಞೆ ಕೈಗೊಳ್ಳಬೇಕೆಂದು ಹಾಗೂ ಎಡಪ್ರಜಾಸತ್ತಾತ್ಮಕ ಪಕ್ಷಗಳನ್ನು ಬಲಪಡಿಸಬೇಕೆಂದು ಅವರು ಕರೆ ನೀಡಿದರು.

ಎ.ಐ.ಟಿ.ಯು.ಸಿ. ಜಿಲ್ಲಾ ಉಪಾಧ್ಯಕ್ಷ ಕಾ॥ ದೀಪಕ್ ರವರು ಸಭೆಯಲ್ಲಿ ಮಾತನಾಡಿದರು. ಸಿ.ಐ.ಟಿ.ಯು. ಜಿಲ್ಲಾ ಪ್ರ. ಕಾರ್ಯದರ್ಶಿ ಕಾ॥ ಕೆ.ಎಸ್. ಸುಬ್ರಮಣ್ಯಂ ವಂದಿಸಿದರು. ಸಮುದಾಯ ನಾಟಕ ತಂಡದವರಿಂದ 'ಅಲ್ಲಾ ಬೋಲ್' ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಹೊಸೂರು ರಸ್ತೆಯ ಜಿಗಣಿ ಕೈಗಾರಿಕಾ ಪ್ರದೇಶದ ವಿವಿಧ ಸಿ.ಐ.ಟಿ.ಯು. ಸಂಘಗಳು ಜಂಟಿಯಾಗಿ ಮೇ ದಿನವನ್ನು ಆಚರಿಸಿದವು.

ಹುಬ್ಬಳ್ಳಿ ಧಾರವಾಡ

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಗೆ ಸಂಯೋಜಿಸಲ್ಪಟ್ಟ ವಿವಿಧ ಕಾರ್ಮಿಕ ಸಂಘಟನೆಗಳು ಹಾಗೂ ಬ್ಯಾಂಕ್, ಎಲ್.ಐ.ಸಿ. ವಿದ್ಯಾರ್ಥಿ ಯುವ ಜನ ಸಂಘಟನೆಗಳ ಸಾವಿರಾರು ಜನರು ಜಂಟಿಯಾಗಿ ಅತ್ಯಂತ ಸಂಭ್ರಮದ ಬೃಹತ್ ರ್‍ಯಾಲಿ ಬಹಿರಂಗ ಸಭೆ ನಡೆಸಿದರು.

ಸಭೆಯನ್ನುದ್ದೇಶಿಸಿ ಕಾರ್ಮಿಕ ನಾಯಕರಾದ ಕಾ॥ ವಿ.ಎನ್. ಹಳಕಟ್ಟಿ, ವಿ.ಎಂ. ಪೂಜಾರ್, ಗುರಪ್ಪ, ಎಂ. ರಾಮರಾವ್, ಎಂ. ಎಚ್. ಮುಲ್ಲಾ ಸಿ.ಆರ್. ಭಟ್ಟಿ, ಮುಂತಾದವರು ಮಾತನಾಡಿ ಮೇ ದಿನದ ಚಾರಿತ್ರಿಕ ಹಿನ್ನಲೆ ಇಂದಿನ ಕಾರ್ಮಿಕ ವರ್ಗ ನೆರವೇರಿಸ ಬೇಕಾಗಿರುವ ಜವಾಬ್ದಾರಿಯನ್ನು ಕುರಿತು ವಿವರಿಸಿದರು. ಅತ್ಯಂತ ಯಶಸ್ವಿಯಾಗಿ ಹಾಗೂ ಆಕರ್ಷಕ ರೀತಿಯಲ್ಲಿ ಜನತೆಯ ಮನ ಗೆದ್ದ ರ್‍ಯಾಲಿ ಧಾರವಾಡದ ಜನತೆಯಲ್ಲಿ ಉತ್ಸಾಹ ತಂದಿತು.

ಸಮುದಾಯ ಕಲಾವಿದರು ಕಾ॥ ಶಫ್ದರ್ ಹಾಶ್ಮಿಯವರ "ಒಂದು ಬೀದಿಯ ಕಥೆ" ನಾಟಕವನ್ನು ಪ್ರದರ್ಶಿಸಿದರು.

ದ. ಕ. ಜಿಲ್ಲೆ

ಕುಂದಾಪುರ

ತಾಲೋಕಿನ ಹಂಚು, ಬೀಡಿ, ರಿಕ್ಷಾಚಾಲಕರು ಮತ್ತು ವಿದ್ಯಾರ್ಥಿ ಯುವಜನರನ್ನೊಳಗೊಂಡ ಸಾವಿರಾರು ಜನರು ಪಾಲ್ಗೊಂಡು ಬೃಹತ್ ಮೆರವಣಿಗೆ ನಡೆಸಿ ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ರೈತ ಕಾರ್ಮಿಕ ಮುಖಂಡ ಕಾ॥ ಯು. ದಾಸ್ ಬಂಡಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿ.ಐ.ಟಿ.ಯು. ನಾಯಕರಾದ ಕಾ॥ ಸಿ. ನಾರಾಯಣ, ಕೆ. ಶಂಕರ್, ಡಿ.ವೈ.ಎಫ್.ಐ. ರಾಜ್ಯ ಸಹಕಾರ್ಯದರ್ಶಿ ಕಾ॥ ಆರ್. ಜಯಕುಮಾರ್ ರವರು ಮಾತನಾಡಿ ತಾಲೋಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಪೆಟ್ಟರು[illegible] ಭೂಮೂಲಕ ಪೋಲೀಸ್ [illegible]ಗಳು ನಿಲ್ಲದಿದ್ದರೆ ಕಾರ್ಮಿಕ ವರ್ಗ ತೀವ್ರ ಹೋರಾಟ ನಡೆಸಬೇಕಾದೀತೆಂದು ಎಚ್ಚರಿಸಿದರು. ವಿದ್ಯಾರ್ಥಿಗಳು ಯುವಜನ ಮಹಿಳಾ ಸಂಘಟನೆಯ ಸಂಗಾತಿಗಳು ಮೆರವಣಿಗೆಯನ್ನು ಪುಷ್ಪವೃಷ್ಟಿ ಮಾಡಿ ಸ್ವಾಗತಿಸಿದರು. ಮೊದಲಿಗೆ ವೆಂಕಟೇಶ ಕೋಣಿ ಸ್ವಾಗತಿಸಿ ಕೊನೆಯಲ್ಲಿ ಕಾ॥ ಕೆ. ವಿಶ್ವನಾಥ್ ವಂದಿಸಿದರು. ಸಮುದಾಯ ನಾಟಕ ತಂಡದಿಂದ 'ಮೇ ದಿನ ನಾಟಕವನ್ನು ಪ್ರದರ್ಶಿಸಲಾಯಿತು.

ಬಂಟ್ವಾಳ

ದ.ಕ. ಜಿಲ್ಲೆಯ ಬಂಟ್ವಾಳದಲ್ಲಿ ರೈತ - ಕಾರ್ಮಿಕರು ಜಂಟಿಯಾಗಿ ಬೃಹತ್ ಮೆರವಣಿಗೆ ನಡೆಸಿ ಸಂತೆ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಿದರು. ಅಂದೇ ವಿಟ್ಲದ ಮೇಗಿನ ಪೇಟೆಯಲ್ಲಿ ಸಹ ಕಾರ್ಮಿಕರು ಮೆರವಣಿಗೆ ಸಾರ್ವಜನಿಕ ಸಭೆ ನಡೆಸಿದರು. ಈ ಸಭೆಗಳಲ್ಲಿ ದ.ಕ. ಜಿಲ್ಲಾ ಸಿ.ಪಿ.ಐ.(ಎಂ) ಕಾರ್ಯದರ್ಶಿ ಕಾ॥ ಕೆ.ಆರ್. ಶ್ರೀಯಾನ್ ರವರು ಮಾತನಾಡಿದರು. ಕಾರ್ಮಿಕ ಮುಖಂಡರಾದ ಕಾ॥ ಬಿ. ವಾಸುಗಟ್ಟಿ, ಬಿ. ಹೂವಯ್ಯ ಬಂಗೇರ, ರುಕ್ಕಯ್ಯ ಪೂಜಾರಿ, ಎ. ರಾಮಣ್ಣ ಮುಂತಾದವರು ಮಾತನಾಡಿದರು.

ಶಿವಮೊಗ್ಗ

ನಗರದ ಹಮಾಲಿ ಕಾರ್ಮಿಕರ ಸಂಘ, ಬೀಡಿ ಕಾರ್ಮಿಕರ ಸಂಘ, ಜಟಕಾ ಗಾಡಿ ಕಾರ್ಮಿಕರ ಸಂಘ, ಆಟೋ ಚಾಲಕರು, ಪೇಪರ್ ಮಿಲ್ಸ್, ಮೋಟಾರ್ ಟ್ರಾನ್ಸ್ ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್, ಬ್ಯಾಂಕ್, ಕೆ.ಇ.ಬಿ. ನೌಕರರ ಸಂಘದ ನೂರಾರು ಜನ ಕಾರ್ಮಿಕರು ಹಾಗೂ ಮಹಿಳೆಯರನ್ನೊಳಗೊಂಡ ಮೆರವಣಿಗೆ ಸೈನ್ಸ್ ಮೈದಾನದಿಂದ ಹೊರಟು ಗೋಪಿ ಸರ್ಕಲ್‌ನಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು. ಮೆರವಣಿಗೆ ಮುಂಭಾಗದಲ್ಲಿ ಪುಟಾಣಿ ಮಕ್ಕಳು ಕೆಂಬಾವುಟ ಹಿಡಿದು ದುಡಿಯುವ ಜನತೆಯವರಿಗೆ ಜೊತೆ ಗೂಡಿದ್ದು ಮೇ ದಿನದ ವಿಶೇಷವಾಗಿತ್ತು.

ಕಾಂಗ್ರೆಸ್ಸೇತರ ಸರ್ಕಾರಗಳನ್ನು ವಜಾಗೊಳಿಸುತ್ತಿರುವ ಪ್ರಜಾಪ್ರಭುತ್ವ ನಾಶ ಮಾಡುತ್ತಿರುವ ರಾಜೀವ್ ಗಾಂಧಿ ಸರ್ಕಾರದ ನೀತಿಯನ್ನು ಖಂಡಿಸಿ ಕಾರ್ಮಿಕರಾದ ದುಡಿಯುವ ಜನತೆಯ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವ ಕಾಂಗ್ರೆಯನ್ನು ಅಧಿಕಾರದಿಂದ ಕೆಳಗಿಸಲು ಹೋರಾಡಬೇಕೆಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಕಾರ್ಮಿಕ ನಾಯಕರಾದ ಕಾ। ರಂಗೇಗೌಡ, ಬಿ.ಎಸ್. ದಾಸ್, ಶೇಷಗಿರಿಯವರುಗಳು ಕರೆ ನೀಡಿದರು. ಕಾ॥ ಎಸ್.ಬಿ. ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕಾ॥ ಆರೀಫ್ ಸ್ವಾಗತಿಸಿ ಕಾ॥ ವಾಸುದೇವ್ ವಂದಿಸಿದರು.

ಕೈಗಾದಲ್ಲಿ ಮೇ ದಿನ

ಕಾರವಾರದ ಕೈಗಾ ಅಣುಸ್ಥಾವರ ಪ್ರೊಜೆಕ್ಟ್ ಪ್ರದೇಶದಲ್ಲಿ ಮೇ ದಿನಾಚರಣೆ ಯಶಸ್ವಿಯಾಗಿ ಜರುಗಿತು. ಕೈಗಾ ಅಣುಸ್ಥಾವರದ ನೂರು ಕಾರ್ಮಿಕರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಈ ಸಭೆಯನ್ನುದ್ದೇಶಿಸಿ ಕಾರ್ಮಿಕ ನಾಯಕರಾದ ಕಾ॥ ಟಿ.ಎಸ್. ನಾಯಕ್, ಹರೀಶ್ ನಾಯ್ಕ, ಬಾಸ್ಕರ ನಾಯ್ಕ, ವಿನಾಯಕ ಕಂಬಾಳೆ, ಮುಂತಾದವರು ಮಾತನಾಡಿ ಮೇ ದಿನದ ಮಹತ್ವ, ಸಂಘಟಿತ ಹೋರಾಟಕ್ಕೆ ಕರೆನೀಡಲಾಯಿತು. ಕಾ॥ ಜೋಸ್‌ರವರು ಈ ಸಭೆಯ ನೇತೃತ್ವ ವಹಿಸಿದ್ದರು.

> ಕಾರ್ಮಿಕ ವರ್ಗ
> ಜೀವನಮಟ್ಟ
> ರಕ್ಷಿಸಿಕೊಳ್ಳಬೇಕಾದರೆ
> ನಿರಂತರ ಹೋರಾಟಕ್ಕೆ
> ಸಿದ್ಧವಾಗಬೇಕು. ಇದಕ್ಕೇನೂ
> ಬಲವಾದ ಐಕ್ಯತೆ.
> ಬಲವಾದ ಕಾರ್ಮಿಕ
> ಆಂದೋಲನದ ಅಗತ್ಯವಿದೆ.

ಕಾಸರಗೋಡು ಡಿ.ವೈ.ಎಫ್.ಐ. ಸಮ್ಮೇಳನ ಸಾಬೀತಾದ ಸಂಘಟನಾ ಸಾಮರ್ಥ್ಯ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಸ್.ಐ) ಕಾಸರಗೋಡು ಜಿಲ್ಲಾ 2 ನೇ ಸಮ್ಮೇಳನವು ಇತ್ತೀಚೆಗೆ ಜಿಲ್ಲಾ ಕೇಂದ್ರವಾದ ಕಾಸರಗೋಡಿ ಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಕೇರಳ ರಾಜ್ಯದಲ್ಲಿ ಎಡ-ಪ್ರಜಾಸತ್ತಾತ್ಮಕ ಚಳುವಳಿಯ ಸ್ವಲ್ಪ ಕ್ಷೀಣವಾದ ಜಿಲ್ಲೆಯೆಂದು ಪರಿಗಣಿ ಸಲ್ಪಟ್ಟಿರುವ ಕಾಸರಗೋಡಿನಲ್ಲಿ ಪ್ರಬಲ ವಾದ ಯುವ ಚಳುವಳಿ ಬೆಳೆದು ಬರುತ್ತಿರುವುದನ್ನು ಸಮ್ಮೇಳನ ಸಾಬೀತು ಪಡಿಸಿತು.

ಮುಸ್ಲಿಂ ಲೀಗ್-ಬಿ.ಜೆ.ಪಿ.ಯ ಭದ್ರಕೋಟೆಯೆನಿಸಿಕೊಂಡಿರುವ ಕಾಸರ ಗೋಡು ನಗರದ ಜನತೆ ನಿಬ್ಬೆರಗಾಗುವಂತೆ ಹರಿದು ಬಂತು ಯುವ ಪ್ರವಾಹ. ಏಪ್ರಿಲ್ 9 ರಂದು ಜಿಲ್ಲಾ ಸಮ್ಮೇಳನದ ಸಮಾರೋಪವಾಗಿ ಜಿಲ್ಲೆಯ ವಿವಿಧ ಮೂಲೆಗಳಿಂದ ಶ್ವೇತ ವಸ್ತ್ರದಾರಿಗಳ 20 ಸಾವಿರ ಸಂಖ್ಯೆಯ ಮೆರವಣಿಗೆ ಈ ಹಿಂದೆಂದೂ ಜನ ಕಾಣದಿರುವ ದೃಶ್ಯ. 90 ಸಾವಿರ ಸದಸ್ಯತ್ವ ಬಲವನ್ನು ಜಿಲ್ಲೆಯಲ್ಲಿ ಹೊಂದಿರುವ ಡಿ.ವೈ.ಎಫ್.ಐ ಅತ್ಯಂತ ಬಲಿಷ್ಠವಾದ ಸಂಘಟನೆಯಾಗಿರುವುದನ್ನು ಸಮ್ಮೇಳನ ಸಾಬೀತು ಪಡಿಸಿತು.

ಕಾಂ. ನಾರಾಯಣನ್ ನಗರದಲ್ಲಿ ನಡೆದ ಸಮ್ಮೇಳನದಲ್ಲಿ ಆಯ್ದ 322 ಪ್ರತಿನಿಧಿಗಳು ಭಾಗವಹಿಸಿದ್ದರು. ಬಹಿರಂಗ ಸಭೆ ಕಾಸರಗೋಡಿನ ಅತ್ಯಂತ ದೊಡ್ಡ ತಾಳಿಪಡ್ಪು ಮೈದಾನದಲ್ಲಿ ನಡೆಯಿತು. ಕರುಣಾಕರನ್ ನೇತೃತ್ವದ ಕಾಂಗ್ರೆ ಆಡಳಿತದ ಕಾಲದಲ್ಲಿ ನಿರುದ್ಯೋಗ ಪರಿಹಾರ ಭತ್ಯೆ ಒತ್ತಾಯಿಸಿ ಡಿ.ವೈ.ಎಫ್.ಐ. ನಡೆಸಿದ ಧೀಮಂತ ಹೋರಾಟ ಸಂದರ್ಭದಲ್ಲಿ ಪೋಲೀಸರ ಗೋಲಿಬಾರ್‌ಗೆ ಬಲಿಯಾದ ಕಾಸರಗೋಡಿನ ಕಾಂಗ್ರೆ ಬಾಲಕೃಷ್ಣನ್ ರವರ ಹೆಸರನ್ನು ಮೈದಾನಕ್ಕೆ ಇರಿಸಲಾಗಿತ್ತು.

ಕೇರಳ ವಿತ್ತ ಸಚಿವ ವಿಶ್ವನಾಥ್ ಮೆನನ್ ಬಹಿರಂಗ ಸಭೆಯನ್ನು ಉದ್ಘಾಟಿಸಿದರು. ಎ.ಐ.ಡಿ.ಡಬ್ಲ್ಯು.ಎ. ಪ್ರಧಾನ ಕಾರ್ಯದರ್ಶಿ ಸುಶೀಲ ಗೋಪಾಲನ್, ದೇಶಾಭಿಮಾನಿ ತಿರುವನಂತ 'ಪುರ ಆವೃತ್ತಿಯ ಸಂಪಾದಕ ಕೆ. ಮೋಹನನ್. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಪಿ.ಕರುಣಾಕರನ್ ಹಾಗು ಕರ್ನಾಟಕ ರಾಜ್ಯ ಡಿ.ವೈ.ಎಫ್.ಐ. ಸಹ ಕಾರ್ಯದರ್ಶಿ ಆರ್.ಜಯಕುಮಾರ್, ತೇಜಸ್ವಿನಿ ಬಹಿರಂಗ ಸಭೆಯಲ್ಲಿ ಮಾತನಾಡಿದರು. ಜಿಲ್ಲಾ ಅಧ್ಯಕ್ಷ, ನ್ಯಾಯವಾದಿ ಸಿ.ಎಚ್.ಕುಂಞಂಬು ಅಧ್ಯಕ್ಷತೆ ವಹಿಸಿದ್ದರು.

ಡಿ.ವೈ.ಎಫ್.ಐ. ಮುಖಂಡನ ಮೇಲೆ ಕಾಂಗ್ರೆ ಗೂಂಡಾಗಳ ದಾಳಿ ಖಂಡನೆ.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಕುಂದಾಪುರ ತಾಲೂಕು ಸಮಿತಿ ಸದಸ್ಯ ಹಾಗು ಏಳ್ತೂರು ಶಾಖೆಯ ಕಾರ್ಯದರ್ಶಿ ಸುಧಾಕರ ಭಂಡಾರಿ ಯವರ ಮೇಲೆ 28-4-1989 ರಂದು ಕಾಂಗ್ರೆಸ್ (ಐ) ಗೂಂಡಾಗಳು ಏಳ್ತೂರು ಗ್ರಾಮದಲ್ಲಿ ಮಾರಕಾಯುಧಗಳೊಡನೆ ದಾಳಿ ಮಾಡಿ ತೀವ್ರ ಸ್ವರೂಪದ ಗಾಯಗೊಳಿಸಿದ್ದಾರೆ. ಮಂಡಲ ಸದಸ್ಯ ಸುರೇಂದ್ರ ಷೆ ನೇತೃತ್ವದ 8 ಜನ ಕಾಂಗ್ರೆಗೂಂಡಾಗಳು ರಾತ್ರಿ ವೃತ್ತಿ ಮುಗಿಸಿ ಮನೆಗೆ ಹಿಂತಿರುಗುತ್ತಿದ್ದ ಸುಧಾಕರ ಭಂಡಾರಿಯವರನ್ನು ತಡೆದು ಏಕಾ ಏಕಿ ದಾಳಿ ನಡೆಸಿದರು. ತೀವ್ರ ಸ್ವರೂಪದಲ್ಲಿ ಗಾಯಗೊಂಡ ಅವರು ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

29-4-1889 ರಂದು ಸಂಜೆ ಈ ಹಲ್ಲೆಯನ್ನು ಪ್ರತಿಭಟಿಸಿ ಏಳ್ತೂರಿನ ದೇವಸ್ಥಾನದ ಆವರಣದಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಸಲಾಯಿತು. ಸಭೆ ಯಲ್ಲಿ ಗೂಂಡಾ ದಾಳಿಯನ್ನು ಖಂಡಿಸಿ ಡಿ.ವೈ.ಎಫ್.ಐ. ರಾಜ್ಯ ಸಹ ಕಾರ್ಯದರ್ಶಿ ಆರ್. ಜಯಕುಮಾರ್, ಸಿ.ಪಿ.ಐ.(ಎಂ) ಮುಖಂಡರುಗಳಾದ ಕೆ.ಶಂಕರ್, ಸಿ.ನಾರಾಯಣ, ರೈತ ಸಂಘದ ಅಧ್ಯಕ್ಷ ಶಿವರಾಮಶೆಟ್ಟಿ, ವೆಂಕಟೇಶಕೋಣಿ ಮೊದಲಾ ದವರು ಮಾತನಾಡಿ ಕರ್ನಾಟಕ ಬಂದ್ ಯಶಸ್ವಿಗೊಂಡ ಹಿನ್ನೆಲೆಯಲ್ಲಿ ಕಾಂಗ್ರೆ ಹತಾಶಗೊಂಡು ಈ ಹೇಯ ಕೃತ್ಯವೆಸಗಿದೆ ಎಂದು ಸೂಕ್ತ ಕಾನೂನು ಕ್ರಮಕ್ಕೆ ಒತ್ತಾಯಿಸಿದರು.

ಭೂಪಾಲ' ಬಯಲಿಗೆ ಬಿದ್ದ ಸರ್ಕಾರದ ನೀತಿ

'ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದಕ್ಕೆ ಸುಣ್ಣ' ಆಡಳಿತ ಪಕ್ಷ ಸದಾ ಬೆಳೆಸಿ ಕೊಂಡು ಬಂದಿರುವ ಧೋರಣೆ. ಪುನ: ಭೂಪಾಲ ವಿಷಯಕ್ಕೆ ಸಂಬಂಧಿಸಿದಂತೆ ಈ ಪ್ರಕರಣ ಬಯಲಿಗೆ ಬಿದ್ದಿದೆ.

ಪ್ರಶಸ್ತಿ ವಿಜೇತ ಚಿತ್ರಗಳನ್ನು ದೂರ ದರ್ಶನದಲ್ಲಿ ಪ್ರದರ್ಶಿಸಬೇಕೆಂಬುದು ಕೇಂದ್ರ ವಾರ್ತಾಸಚಿವ ಎಚ್.ಕೆ.ಎಲ್.ಭಗತ್ ಆಜ್ಞೆ. ಪ್ರಶಸ್ತಿ ಪಡೆದ ಸಾಕ್ಷ್ಯ ಚಿತ್ರಗಳು ಚಿಂತನಮಂಥನಕ್ಕೆ ಹತ್ತಿರವಾಗುವ ಪ್ರಧಾನ ಶಿಕ್ಷಣ ಮಾಧ್ಯಮಗಳು. 15ದಿನಗಳಿಗೊಮ್ಮೆ ಅಂತಹ ಚಿತ್ರಗಳನ್ನು ಪ್ರಸಾರ ಮಾಡ ಬೇಕೆಂದೂ ಭಗತ್ ಪ್ರಶಸ್ತಿ ವಿತರಣಾ ಸಮಾರಂಭದಂದು ಆಜ್ಞೆ ಮಾಡಿದ್ದರು.

ಆದರೆ ಈ ಮಾತಿಗೆ ತಕ್ಕನಾಗಿ ನಡೆದು ಕೊಳ್ಳಲು ಭಗತ್‌ಗೇ ಸಾಧ್ಯವಾಗಲಿಲ್ಲ. ಭೂಪಾಲ್ ದುರಂತದ ಬಗ್ಗೆ ನಿರ್ದೇಶಕ ತಪನ್‌ಬೋಸ್ 'ಭೋಪಾಲ್: ಬಿಯಾಂಡ್ ಜೆನೊಸೈಡ್' ಎಂಬ ಚಿತ್ರ ತಯಾರಿಸಿದ್ದರು. ಈ ಚಿತ್ರ ಖ್ಯಾತ ರಾಷ್ಟ್ರಪ್ರಶಸ್ತಿ ಸ್ವರ್ಣ ಕಮಲವನ್ನು ತನ್ನ ಬುಟ್ಟಿಗೆ ಹಾಕಿ ಕೊಂಡಿತು. ಆದರೆ ಭೂಪಾಲ ಕುರಿತ ಈ ಸಿನಿಮಾಗೆ ದೂರದರ್ಶನದಲ್ಲಿ ಪ್ರಸಾರ ವಾಗುವ ಅವಕಾಶವೇ ಬರಲಿಲ್ಲ.

ಚಿತ್ರದ ವಸ್ತು ಮುಗಿದ ಅಧ್ಯಾಯ ವಾದ್ದರಿಂದ ಚಿತ್ರ ಪ್ರದರ್ಶಿಸಲು ನಾಲಾ ಯಕ್ ಎಂದು ದೂರದರ್ಶನದ ನಿರ್ದೇಶಕರು ಪತ್ರ ಬರೆದರು. ತಪನ್ ಬೋಸ್ ಸುಮ್ಮನೆ ಕೂರಲಿಲ್ಲ. ನ್ಯಾಯಾ ಲಯದ ಕಟ್ಟೆ ಹತ್ತಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯನ್ನು ನಾವು ಸಹಿಸುವುದಿಲ್ಲ ಎಂದಿದ್ದಾರೆ.

ಮನಕಲಕುವ ಈ ಭೂಪಾಲ ದುರಂತದ ನೈಜ ಘಟನೆಯ ಚಿತ್ರದ ಒಂದೆಡೆ ದುರಂತ ಅನುಭವಿಸಿದವನೊಬ್ಬ 'ದುರಂತ ಪ್ರದೇಶದ ಭೇಟಿಗೆಂದು ಬಂದ ಪ್ರಧಾನಿ ಮುಖ್ಯರಸ್ತೆಗಳಲ್ಲಿ ಮಾತ್ರ ಸಂಚರಿ ಸಿದರು. ದುರಂತದ ಜಾಗವನ್ನು ಒಳ ಪ್ರದೇಶದಲ್ಲಿರುವ ಕಾಲೋನಿಗೆ ಭೇಟಿ ನೀಡಲಿಲ್ಲ. ಪರಿಹಾರದ ವ್ಯವಸ್ಥೆಯೂ ಸರಿ ಯಾಗಿಲ್ಲ' ಎಂದು ನೀಡಿದ ಹೇಳಿಕೆ ಸೆನ್ಸಾರ್‌ನವರ ಕಣ್ಣು ಕೆಂಪಗಾಗಿಸಿದೆ. ಮುಂಬಯಿ ಉಚ್ಚನ್ಯಾಯಾಲಯ ಸೆನ್ಸಾರ್ ಮಂಡಳಿಯ ಆರೋಪ ತಳ್ಳಿಹಾಕಿ ಮಹತ್ವದ ತೀರ್ಪುಕೊಟ್ಟಿದೆ.

ಈ ತೀರ್ಪಿನ ಹಿನ್ನೆಲೆಯಲ್ಲಿ 'ಭೂಪಾಲ' ಚಿತ್ರ ಪ್ರದರ್ಶಿಸಲು ದೂರದರ್ಶನ ಕಾಲಾವಕಾಶದಿಂದ ಮುಂದಾಯಿತು. ವಿಳಂಬಕ್ಕೆ ಕಾರಣಗಳನ್ನು ಕೊಟ್ಟು ಕ್ಷಮೆ ಕೇಳಲೂ ಸರ್ಕಾರ ಮುಂದಾಯಿತು. ವಿಡಂಬನೆಯೆಂದರೆ ಕೋರ್ಟ್ ತೀರ್ಪು ಚಿತ್ರ ತಯಾರಕರ ಪರವಾಗಿ ಬಂದಿದ್ದರೂ ಈ ಚಿತ್ರ ದೂರ ದರ್ಶನದಲ್ಲಿ ಪ್ರದರ್ಶನ ಗೊಳ್ಳುತ್ತದೆ ಎಂಬುದಕ್ಕೆ ಯಾವುದೇ ಖಾತ್ರಿ ಇಲ್ಲ. ಎನ್ನುವುದು ನ್ಯಾಯಾಂಗ ಪೆನ್ನು ಧಿಕ್ಕರಿಸುವುದು ಪಾಟಿಗೆಟ್ಟ ಸರ್ಕಾರಕ್ಕೆ ಮಾತ್ರ ಎಂಬುದು ಈ ಪ್ರಕರಣದಿಂದ [illegible]

ಹೊಸ ಬೆಲೆ ಸೂಚ್ಯಾಂಕದ ವಿರುದ್ಧ ಕಾರ್ಮಿಕರ ಪ್ರತಿಭಟನೆ

ಹರಿಹರ

1960ರ 1982 ಆಧಾರಿತ ಹೊಸಗ್ರಾಹಕರ ಬದಲಿಗೆ ಬೆಲೆ ಸೂಚ್ಯಾಂಕ ಜಾರಿಗೊಳಿಸುವ ಮೂಲಕ ಕೇಂದ್ರ ಸರ್ಕಾರ ಕಾರ್ಮಿಕರಿಗೆ ಸಿಗಬೇಕಾದ ತುಟಿಭತ್ಯೆ ಯನ್ನು ಕಡಿತ ಗೊಳಿಸಿ ಕಾರ್ಖಾನೆಗಳ ಮಾಲೀಕರಿಗೆ ಕೋಟ್ಯಾಂತರ ರೂಪಾಯಿಗಳ ಲಾಭಗಳಿಸುವಂತೆ ಮಾಡಿದೆ. ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಯನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟಿಸ ಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ನೀಡಿದ ಕರೆಯಂತೆ ಏಪ್ರಿಲ್ 21 ರಂದು ಹರಿಹರದ ಕಾರ್ಮಿಕರು ಸ್ಥಳೀಯ ಅಂಚೆಕಛೇರಿ ಎದುರು ಮತಪ್ರದರ್ಶನ ನಡೆಸಿ ಕಛೇರಿ ಕಾರ್ಯ ಅರ್ಧಗಂಟೆಗಳ ಕಾಲ ಸ್ಥಗಿತಗೊಳಿಸಿದ್ದರು. ನಂತರ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕಾರ್ಮಿಕನಾಯಕ ಕಾ॥ ನಿತ್ಯಾನಂದಸ್ವಾಮಿ ಯವರು ಮಾತನಾಡಿದರು.

ಹುಬ್ಬಳ್ಳಿ

ಕೇಂದ್ರ ಕಾರ್ಮಿಕ ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿ 1982 ರ ಗ್ರಾಹಕರ ಬೆಲೆ ಸೂಚ್ಯಾಂಕವನ್ನು ಹಿಂತೆಗೆದು ಕೊಳ್ಳಬೇಕೆಂದು ಏಪ್ರಿಲ್ 22 ರಂದು ಹುಬ್ಬಳ್ಳಿಯ 500 ಕ್ಕೂ ಮೀರಿದ ಕಾರ್ಮಿಕರು ಮೆರವಣಿಗೆ ನಡೆಸಿ ಜಿಲ್ಲಾಧಿ ಕಾರಿಯವರ ಮೂಲಕ ಒತ್ತಾಯಿಸಿದರು. ಈ ಪ್ರದರ್ಶನದಲ್ಲಿ ಪ್ಲೈವುಡ್, ಜೆ.ಐ.ಪಿ. ಮೈಸೂರು ಕಿರ್ಲೋಸ್ಕರ್ ವಿಮಾನ್‌ಕರರು, ಸ್ಟೀವನ್, ಬೀಡಿ ಮುಂತಾದ ಕಾರ್ಖಾನೆಗಳ ಕಾರ್ಮಿಕರು ಪಾಲ್ಗೊಂಡಿದ್ದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾ॥ಎಂ.ಬಿ.ಕಟ್ಟಿ ದೇಶಪಾಂಡೆ, ವಿ.ಎಂ. ಪೂಜಾರ, ಜಿ.ಆರ್. ಶಿರಪೂರ, ಎನ್.ಆರ್.ಪರಪ್ಪ ಮಾತನಾಡಿದರು.

ಬೀಡಿಕಾರ್ಮಿಕರು ಯಶಸ್ವಿ ಮುಷ್ಕರ

ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಬೇಕೆಂದು ಒತ್ತಾಯಿಸಿ ಏಪ್ರಿಲ್ 18 ರಂದು ಹರಿಹರದಲ್ಲಿ ಒಂದು ದಿನದ ಮುಷ್ಕರ ಯಶಸ್ವಿಯಾಯಿತು.

ಭಾರತ ಬೀಡಿಯ 17 ಬ್ರಾಂಚುಗಳಲ್ಲಿ ಜೋತಿಹೋಂಇಂಡಸ್ಟ್ರೀಸ್‌ನ 5ಬ್ರಾಂಚ್ ಗಳಲ್ಲಿ ಫೈಜ್, ಸುಂದರ್, ಅಶೋಕ ಮತ್ತು ಬಿ.ಕೆ.ಬೀಡಿ ಫ್ಯಾಕ್ಟರಿಗಳಲ್ಲಿ ಮುಷ್ಕರ ಯಶಸ್ವಿಯಾಗಿ ನಡೆಯಿತು.

ರಾಣಿ ಬೆನ್ನೂರ್‌ನಲ್ಲಿ ಧರಣಿ

ಇಲ್ಲಿನ ಬೀಡಿ ಕಾರ್ಮಿಕರು ಕಂಟ್ರಾಕ್ಟ್ ಪದ್ಧತಿ ವಿರೋಧಿಸಿ ತಹಸೀಲ್ದಾರ್ ಕಛೇರಿ ಎದುರು ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಿ ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಬೇಡಿಕೆಗಳ ಮನವಿ ಸಲ್ಲಿಸಿದರು.

ಕುಣಿಗಲ್

ಏಪ್ರಿಲ್ 20 ರಂದು ಇಲ್ಲಿನ ಜ್ಯೋತಿ ಹೋಂ ಇಂಡಸ್ಟ್ರೀಸ್ (ಗಣೇಶ ಬೀಡಿ ಫ್ಯಾಕ್ಟರಿ) ಎದುರು ನೂರಾರು ಬೀಡಿ ಕಾರ್ಮಿಕರು ಕುಳಿತು ಮುಷ್ಕರ ನಡೆಸಿದರು. ಬೆಳಿಗ್ಗೆ 8 ಗಂಟೆಗೆ ಕುಣಿಗಲ್ ಕೋಟೆಯಿಂದ ಮೆರವಣಿಗೆ ಹೊರಡಿಸ ಲಾಗಿತ್ತು. ಕಂಟ್ರಾಕ್ಟ್‌ದಾರರು ಸತಪ್ರಯತ್ನ ಮಾಡಿದರು ಬೀಡಿ ಕಾರ್ಖಾನೆಯ ಒಳಗೆ ಹೋಗದಂತೆ ತಡೆ ಹಿಡಿಯಲಾಯಿತು. ಪೋಲೀಸ್ ಮಧ್ಯಪ್ರವೇಶ ನಂತರ ಸಂಜೆ 4 ಗಂಟೆಗೆ ತಡೆಹಿಂತೆಗೆದು ಕೊಳ್ಳಲಾಯಿತು. ನಂತರ ನಡೆದ ಬಹಿರಂಗ ಸಭೆಯ ನ್ನುದ್ದೇಶಿಸಿ ಕಾರ್ಮಿಕ ಮುಖಂಡ ರಾದ ಕಾ॥ ಬಡೇಸಾಬ್, ಅಂಜಪ್ಪ, ಯೂನಸ್‌ಖಾನ್‌ರವರುಗಳು ಮಾತನಾಡಿ ದರು. ಬೇಡಿಕೆಗಳ ಮನವಿ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು.



ಎ.ಐ.ಕೆ.ಎಸ್.ನ 26 ನೇ ಅಧಿವೇಶನದ ವೇದಿಕೆ, ಅಧ್ಯಕ್ಷ ಮಂಡಳಿ ಮತ್ತು ಪ್ರತಿನಿಧಿಗಳು

ಭೂಮಿಯ ಹಕ್ಕನ್ನು ಖಂಡಿತಾ ಸ್ಥಾಪಿಸುತ್ತೇವೆ

ಅಖಿಲ ಭಾರತ ಕಿಸಾನ್ ಸಭಾದ 26 ನೇ ಸಮ್ಮೇಳನ ಖಮ್ಮಂನ ಸ್ವಾಮಿ ಸಹಜಾನಂದ ನಗರದಲ್ಲಿ ಏಪ್ರಿಲ್ 30 ರಂದು ಹೋರಾಟದ ಕಹಳೆಯೊಂದಿಗೆ ಅಂತ್ಯಗೊಂಡಿತು. ಇತರ ರೈತ ಮತ್ತು ಕೃಷಿ ಕೂಲಿಗಾರ ಸಂಘಟನೆಗಳ ಜತೆಗೂಡಿ ಮತ್ತು ಎ.ಐ.ಕೆ.ಎಸ್. ಸ್ವತಂತ್ರವಾಗಿ ಕೂಡಾ ಬೃಹತ್ ರೈತ ಹೋರಾಟದ ಕಹಳೆಯದು.

ಪಾಟ್ನಾದ ಸ್ವರ್ಣ ಮಹೋತ್ಸವ ಸಮ್ಮೇಳನದ ಮೂರು ವರ್ಷಗಳ ನಂತರ ನಡೆದ ಸಮ್ಮೇಳನವಿದು. ಆ ಸಮ್ಮೇಳನ ರೈತ ಆಂದೋಲನಕ್ಕೆ ಸಾರ್ವತ್ರಿಕ ಮಾರ್ಗದರ್ಶನ ಒದಗಿಸುವ ನೀತಿ ನಿರೂಪಣೆಯ ಬಗ್ಗೆ ಒಂದು ಚರ್ಚೆ ಆರಂಭಿಸಿತ್ತು. ರೈತಾಪಿ ವರ್ಗದ ಎಲ್ಲಾ ವಿಭಾಗಗಳ ಆಶೋತ್ತರಗಳನ್ನು ಬಿಂಬಿಸುವ ಒಂದು ಸಮಗ್ರ ಬೇಡಿಕೆ ಪಟ್ಟಿಯನ್ನು ಅಂಗೀಕರಿಸಿತ್ತು. ರಾಜೀವಗಾಂಧಿ ಸರ್ಕಾರದ ರೈತ - ವಿರೋಧಿ ಧೋರಣೆಗಳ ವಿರುದ್ಧ ಬೃಹತ್ ದೇಶವ್ಯಾಪಿ ಹೋರಾಟದ ಕರೆ ನೀಡಿತು.

ಪಾಟ್ನಾ ಸ್ವರ್ಣ ಮಹೋತ್ಸವ ಸಮ್ಮೇಳನದ ನಂತರದ ಮೂರು ವರ್ಷಗಳು ರೈತರ ವ್ತತು ಕೃಷಿಕೂಲಿಗಾರರ ದೇಶವ್ಯಾಪಿ ಹೋರಾಟಗಳ ಅವಧಿ. ಈ ಅವಧಿಯಲ್ಲಿ ಲಕ್ಷಾಂತರ ರೈತರು ಮತ್ತು ಕೃಷಿಕೂಲಿಗಾರರು ಭಾಗವಹಿಸಿದರು. 1987 ಸೆಪ್ಟೆಂಬರ್ ಹೋರಾಟವನ್ನು ಎ.ಐ.ಕೆ.ಎಸ್. ಮತ್ತು ಎ.ಐ.ಎ. ಡಬ್ಲ್ಯು.ಯು. ಸಂಘಟಿಸಿದ್ದರೆ, 1988 ಸೆಪ್ಟೆಂಬರ್ ಹೋರಾಟ ಎಡ ಪಕ್ಷಗಳ ನೇತೃತ್ವದ ಇತರ ರೈತ ಮತ್ತು ಕೃಷಿಕೂಲಿಗಾರ ಸಂಘಟನೆಗಳ ಜತೆಗೂಡಿ ನಡೆಯಿತು.

ರೈತರು ಮತ್ತು ಕೃಷಿಕೂಲಿಗಾರರು ನವಂಬರ್ 1987ರ ದೇಶವ್ಯಾಪಿ ಪ್ರತಿಭಟನೆಯಲ್ಲಿ, ಡಿಸೆಂಬರ್ 9, 1987ರ ದೆಹಲಿ ರ್‍ಯಾಲಿಯಲ್ಲಿ ಮತ್ತು ಮಾರ್ಚ್ 15, 1988ರ ಭಾರತ ಬಂದ್‌ನಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದರು. ಈ ಹೋರಾಟಗಳು ರೈತರು ಮತ್ತು ಕೃಷಿಕೂಲಿಗಾರರ ದೊಡ್ಡ ವಿಭಾಗಗಳ ಒಗ್ಗಟ್ಟು ರೂಪಿಸುವಲ್ಲಿ, ಪರಸ್ಪರರ ಸಮಸ್ಯೆಗಳನ್ನು ಅರಿತು ಕೊಳ್ಳುವಲ್ಲಿ ಮತ್ತು ಇದುವರೆಗೆ ಸಂಘಟಿತರಾಗಿದ್ದ ಅಥವಾ ಬೂರ್ಜ್ವಾ - ಭೂಮಾಲಕ ಮುಖಂಡತ್ವದ ಪ್ರಭಾವಕ್ಕೆ ಒಳಗಾಗಿದ್ದ ಗ್ರಾಮೀಣ ಜನಸಮೂಹಗಳ ಜತೆ ಕೈಗೂಡಿಸಲು ಮುಂದೆ ಬರುವಂತಾಯಿತು. ಜಂಟಿ ಹೋರಾಟಗಳ ಮೂಲಕ ಕೋಮುವಾದಿ, ಜಾತಿವಾದಿ, ಪ್ರತ್ಯೇಕತಾವಾದಿ ಶಕ್ತಿಗಳು ಮತ್ತು ಸರಕಾರದ ರೈತ-ವಿರೋಧಿ ಧೋರಣೆಗಳನ್ನು ಸೋಲಿಸುವಲ್ಲಿ, ಛಿದ್ರಕಾರಿ ಶಕ್ತಿಗಳನ್ನು ದೂರತಳ್ಳುವಲ್ಲಿ ನೆರವಾಯಿತು.

26 ನೇ ಸಮ್ಮೇಳನದ ಸ್ವಲ್ಪ ಮುಂಚೆ, ಏಪ್ರಿಲ್ 18 ರಂದು ದೆಹಲಿಯಲ್ಲಿ ಎಡ ನೇತೃತ್ವದ ರೈತರು ಮತ್ತು ಕೃಷಿಕೂಲಿಗಾರರ ಸಮಾವೇಶವೊಂದು ನಡೆದು ಭೂ ಪ್ರಶ್ನೆಯ ಮೇಲೆ ಮೇ 25 ರಿಂದ ಒಂದು ದೇಶವ್ಯಾಪಿ ಸಾಮೂಹಿಕ ಹೋರಾಟ ಆರಂಭಿಸುವ ನಿರ್ಣಯ ಕೈಗೊಂಡಿತು. 26 ನೇ ಸಮ್ಮೇಳನ ದೆಹಲಿ ಸಮಾವೇಶದ ನಿರ್ಣಯಗಳನ್ನು ಅನುಮೋದಿಸಿ ಹೋರಾಟಗಳನ್ನು ಮುಂದೊಯ್ಯಲು ನಿರ್ಧರಿಸಿತು.

ಭೂಪ್ರಶ್ನೆಯ ಮೇಲೆ ಒಂದು ನಿರಂತರ ಮತ್ತು ದೃಢ ನಿರ್ಧಾರದ ಹೋರಾಟವನ್ನು ನಡೆಸಲು ತೆಲಂಗಾಣಾ ಹೋರಾಟದ ಭವ್ಯ ನೆಲದಲ್ಲಿ, ಎ.ಐ.ಕೆ.ಎಸ್. ನ ಸ್ಥಾಪಕ-ಅಧ್ಯಕ್ಷ ಸ್ವಾಮಿ ಸಹಜಾನಂದರ ಮತ್ತು ಕಿಸಾನ್ ಆಂದೋಲನ ಮಹಾನ್ ಮುಖಂಡ ಕಾಮ್ರೇಡ್ ಮುಜಫರ್ ಅಹ್ಮದ್‌ರವರ ಜನ್ಮಶತಾಬ್ದಿ ವರ್ಷದಲ್ಲಿ ನಿರ್ಧರಿಸಲಾಯಿತೆಂಬುದೇ ಮಹತ್ವದ ಸಂಗತಿ.

ಪ್ರಧಾನ ಕಾರ್ಯದರ್ಶಿಗಳ ವರದಿ ವ್ಯಾಪಕ ಅಸಂತೃಪ್ತಿಯ, ಕಳೆದ ಮೂರು ವರ್ಷಗಳ ಹೋರಾಟದ ಅನುಭವದಿಂದ ಕಲಿತ ಪಾಠಗಳನ್ನು ಮೂರ್ತ ರೂಪದಲ್ಲಿ ಸಮ್ಮೇಳನದ ಮುಂದಿಟ್ಟಿತು. ಈ ವರದಿಯ ಮೇಲೆ ಹಾಗೂ ರೈತಾಪಿ ವರ್ಗದ ಐದು ಜ್ವಲಂತ ಪ್ರಶ್ನೆಗಳ ಕುರಿತಂತೆ ರಚಿಸಿದ ಆಯೋಗಗಳ ವರದಿಗಳ ಮೇಲೆ ತೀವ್ರ ಚರ್ಚೆ ನಡೆಯಿತು. ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಘಟನೆಗಳ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿತು. ಒಂದೆಡೆ ರೈತರು ಮತ್ತು ಕೃಷಿಕೂಲಿಗಾರರ ನಡುವೆ ಹೆಚ್ಚುತ್ತಿರುವ ಐಕ್ಯತೆ, ಇನ್ನೊಂದೆಡೆ ಇವೆರಡೂ ವಿಭಾಗಗಳು ಮತ್ತು ಕಾರ್ಮಿಕ ವರ್ಗದೊಡನೆ ಹೆಚ್ಚುತ್ತಿರುವ ಐಕ್ಯತೆಯನ್ನು ತೃಪ್ತಿಯಿಂದ ಗಮನಿಸಿದ ಸಮ್ಮೇಳನ ಇದನ್ನು ಮತ್ತಷ್ಟು ಬಲಗೊಳಿಸಲು ದುಡಿಯಬೇಕೆಂದು ರೈತ ಕಾರ್ಯಕರ್ತರಿಗೆ ಮನವಿ ಮಾಡಿಕೊಂಡಿದೆ. ಯಾಕೆಂದರೆ ಒಂದು ಶಕ್ತಿಶಾಲೀ ಐಕ್ಯ ಸಾಮೂಹಿಕ ಆಂದೋಲನ ಕಟ್ಟದೆ ಬೂರ್ಜ್ವಾ - ಭೂಮಾಲಕ ಸರಕಾರದ ಹಲ್ಲೆಗಳನ್ನು ಎದುರಿಸಲೂ ಸಾಧ್ಯವಿಲ್ಲ, ವಿಜಯ ಸಾಧಿಸಲೂ ಸಾಧ್ಯವಿಲ್ಲ ಎಂದು ಸಮ್ಮೇಳನ ಅಭಿಪ್ರಾಯಪಟ್ಟಿತು.

ಈಗ 1.05 ಕೋಟಿ ಸದಸ್ಯತ್ವವಿರುವ ಎ.ಐ.ಕೆ.ಎಸ್. ದೇಶದ ಅತೀ ದೊಡ್ಡ ಸಾಮೂಹಿಕ ಸಂಘಟನೆ ನಿಜ. ಇದರಲ್ಲಿ ಮೂರನೇ ಎರಡರಷ್ಟು ಸದಸ್ಯತ್ವ ಪಶ್ಚಿಮಬಂಗಾಳದಿಂದಲೇ ಇದೆ. ಪಶ್ಚಿಮ ಬಂಗಾಳ ಮತ್ತು ಕೇರಳ ಎರಡೇ ರಾಜ್ಯಗಳಲ್ಲಿ ಒಟ್ಟು ಸದಸ್ಯತ್ವದ 80% ಇದೆ. ಆದರೂ ಈ ಎರಡು ರಾಜ್ಯಗಳಿಗೆ ಕೂಡಾ 20 ಲಕ್ಷದಷ್ಟು ಸದಸ್ಯರನ್ನು ಸೇರಿಸಲಾಗಿದೆ ಎಂಬುದು ಕೂಡಾ ಕಡಿಮೆ ಮಹತ್ವದ್ದೇನಲ್ಲ. ಈ ಸಂಗತಿಯ ಸಕಾರಾತ್ಮಕ ಮತ್ತು ನಕಾರಾತ್ಮಕ ಇವೆರಡೂ ಅಂಶಗಳನ್ನು ಪರಿಶೀಲಿಸಿದ ಸಮ್ಮೇಳನ ಸದಸ್ಯತ್ವ ವನ್ನು ಇನ್ನೂ ಗಮನಾರ್ಹವಾಗಿ ಹೆಚ್ಚಿಸಬೇಕು ಮತ್ತು ಎ.ಐ.ಕೆ.ಎಸ್. ನೊಳಗಿನ ಅಸಮಾನ ಬೆಳವಣಿಗೆಯ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಬೇಕೆಂದು ನಿರ್ಧರಿಸಿತು.

ರೈತರಿಗೆ ಭೂಮಿಗಾಗಿ ದೇಶವ್ಯಾಪಿ ಐಕ್ಯ ಹೋರಾಟಕ್ಕೆ, ಬೂರ್ಜ್ವಾ - ಭೂಮಾಲಕ ಸರಕಾರದ ಆಕ್ರಮಣಗಳ ವಿರುದ್ಧ ಹೋರಾಟಕ್ಕೆ ಮತ್ತು ಆಂದೋಲನಕ್ಕೆ ಇನ್ನಷ್ಟು ಶಕ್ತಿ ತುಂಬುವ ಹೊಸ ಮುನ್ನಡೆಯ ಹಾದಿ ರೂಪಿಸುವಲ್ಲಿ ಸ್ಫೂರ್ತಿ ನೀಡಿ, ಅವರಿಗೆ ನೇತೃತ್ವ ನೀಡಿರುವ ಒಂದು ಚಾರಿತ್ರಿಕ ಸಮ್ಮೇಳನ ಎಂದು ಎ.ಐ.ಕೆ.ಎಸ್. ನ 26 ನೇ ಸಮ್ಮೇಳವನ್ನು ನಾವು ಮುಂದೆ ನೆನಪಿಸಿಕೊಳ್ಳುತ್ತೇವೆ.

(ಪಿ.ಡಿ. ಸಂಪಾದಕೀಯ)

ರೈತರ ಮಹಾನ

ಖಮ್ಮಂ, ತೆಲಂಗಾಣ ಹೋರಾಟ ಭುಗಿಲೆದ್ದು ಇಡೀ ದೇಶವನ್ನು ಎಚ್ಚರಿಸಿದ ಕೇಂದ್ರ, ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟೋಡಲು ದಿನಗಳು ಹತ್ತಿರವಾದುವು ಎಂದು ತಾಕೀತು ಮಾಡಿದ ಚಳುವಳಿಗಳಲ್ಲಿ ಪ್ರಮುಖ. 1947ರಿಂದ ಭಾರತವನ್ನು ಆಳಲು ಆರಂಭಿಸಿದ ಬಂಡವಾಳಶಾಹಿ ಭೂಮಾಲಕ ವರ್ಗಗಳಲ್ಲಿ ಎದೆ ಡವಡವನೆ ಹೊಡೆದುಕೊಳ್ಳುವಂತೆ ಮಾಡಿದ ಕೇಂದ್ರ. ಅಮೇರಿಕನ್, ಬ್ರಿಟಿಷ್ ಸಾಮ್ರಾಜ್ಯಶಾಹಿಗಳೂ ಬೆದರುವಂತೆ ಮಾಡಿದ ಹೋರಾಟದ ಕೇಂದ್ರ.

ಭಾರತದ ರೈತ ಚಳುವಳಿಯ ಉತ್ತುಂಗವನ್ನು ಮುಟ್ಟಿದ ಈ ಸ್ಥಳದಲ್ಲಿ ಅಖಿಲಭಾರತ ಕಿಸಾನ್ ಸಭಾದ 26ನೇ ಮಹಾಧಿವೇಶನ. ಭಾರತದ ಮೂಲೆ ಮೂಲೆಗಳಿಂದ ಬಂದ ಪ್ರತಿನಿಧಿಗಳು ರೋಮಾಂಚನಗೊಂಡರು. ಇಲ್ಲಿ ಸುತ್ತಿ ಸುಳಿಯುತ್ತಿದ್ದ ಹೋರಾಟದ ಗಾಳಿಯನ್ನು ಸಾಧ್ಯವಾದಷ್ಟು ತಮ್ಮ ಎದೆಯಲ್ಲಿ ಹಿಡಿದಿಡುವ ತವಕದಲಿದ್ದರು.

ಕೇವಲ ಸಹಜಾನಂದ ಸರಸ್ವತಿ ನಗರದಲ್ಲಿ ಮಾತ್ರವೇ ಅಲ್ಲ ಇಡೀ ಖಮ್ಮಾ ಪಟ್ಟಣದಲ್ಲಿಯೋ ಸಮ್ಮೇಳನ ನಡೆಯುತ್ತಿದೆಯೋನೋ ಎಂದು ಎಲ್ಲರೂ ಭಾವಿಸುವಂತಿತ್ತು. ಪಟ್ಟಣದ ನೋಟ, ಖಮಂನ ಒಂದೆಡೇ ಸಮ್ಮೇಳನ ಮತ್ತೊಂದೆಡೆ ಸುಂದರಯ್ಯ ನಗರದಲ್ಲಿ ಬಹಿರಂಗಸಭೆ, ಇದು ಎಲ್ಲಾ ಸಮ್ಮೇಳನಗಳಲ್ಲಿಯೂ ಇರುವ ಸರ್ವಸಾಮಾನ್ಯ ದೃಶ್ಯವಾದರೆ ಖಮ್ಮಂನಲ್ಲಿ ಅನೇಕ ವಿಶೇಷಗಳು.

ಇಡೀ ಜಿಲ್ಲೆಯ, ನೆರೆಯ ಜಿಲ್ಲೆಯ ಜನರೂ ದಿನದಿನವೂ ಬಂದು ಜಾತ್ರೆಯೋಪಾದಿಯಲ್ಲಿ ನೆರೆಯುತ್ತಿದ್ದ ವಸ್ತು ಪ್ರದರ್ಶನಾಂಗಣ, ಅಲ್ಲಿಯೇ ಇದ್ದ ಸಫ್ದರ್‌ಹಾಶ್ಮಿ ಸಾಂಸ್ಕೃತಿಕ ಪ್ರದರ್ಶನಾಂಗಣ, ಇವೆಲ್ಲಕ್ಕಿಂತ ವಿಶೇಷವಾಗಿ ರೈತರ ನೆಚ್ಚಿನ ಜೀವವಾದ ಎತ್ತುಗಳ ಸ್ಪರ್ಧೆ ಹಾಗೂ ಪಶು ಪ್ರದರ್ಶನ. ಸಾಂಸ್ಕೃತಿಕ ಪ್ರದರ್ಶನದಲ್ಲಿ ಹರಿಕಥೆ ಜಾನಪದ ನೃತ್ಯ, ಮಕ್ಕಳ ನೃತ್ಯ ಹೀಗೆ ಎಲ್ಲಾ ವಿಭಾಗಗಳಿಂದ ಜನ ಸಮುದಾಯಕ್ಕೆ ತಲುಪುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿದಿನವೂ ಖಮ್ಮಂ ಜಿಲ್ಲೆಯ ಹಳ್ಳಿಗಳಿಂದ 3-4 ಸಾವಿರ ಜನರು ವಸ್ತು ಪ್ರದರ್ಶನ, ಪಶು ಪ್ರದರ್ಶನಗಳನ್ನು ನೋಡಿ ಮಧ್ಯ ರಾತ್ರಿಯವರೆಗೂ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು. ರೈತರ ಸಮ್ಮೇಳನವೆಂಬುದು ರೈತ-ಕೃಷಿಕಾರ್ಮಿಕರ ಕುಟುಂಬದ ಎಲ್ಲರಿಗೂ ಸೇರಿದ ಹಬ್ಬವೆಂಬಂತೆ ನಡೆಯಿತು.

ಎಡರಂಗ ಸರ್ಕಾರದ ಸಾಧನೆಗಳನ್ನು ಸಾರುವ ಪ.ಬಂಗಾಳ-12 ವರ್ಷಗಳು ಎಂಬ ಪ್ರದರ್ಶನವೇ ವಸ್ತು ಪ್ರದರ್ಶನದ ಕೇಂದ್ರವಾಗಿತ್ತು. ಜೊತೆಗೆ ಆಂಧ್ರದ ವಿವಿಧ ಸಾಮೂಹಿಕ ಸಂಘಟನೆಗಳು ರೈತ ಸಂಘದ 53 ವರ್ಷಗಳ ಅಮೋಘ ಚರಿತ್ರೆ, ಭಾರತದಲ್ಲಿ ರೈತರ ಪರಿಸ್ಥಿತಿ, ಶಿಕ್ಷಣದ ಪರಿಸ್ಥಿತಿ, ಜೀವವಿಕಾಸ, ಚೀನಾದ ಕಲೆ, ಹಾಗೂ ವಿಜ್ಞಾನ ಸಂಘಗಳ ಮಳಿಗೆಗಳಿದ್ದವು. ಆಂಧ್ರಪ್ರದೇಶ ಸರ್ಕಾರದ ಹಾಗೂ ಸಹಕಾರಿ ಸಂಸ್ಥೆಗಳೂ ಅಲ್ಲಿ ತಮ್ಮ ಮಳಿಗೆಗಳನ್ನು ತೆರೆದಿದ್ದುವು.

ಪಶು ಪ್ರದರ್ಶನದಲ್ಲಿ, ಆಂಧ್ರ ಪ್ರದೇಶದ ಹೆಮ್ಮೆಯ ತಳಿಯಾದ ಒಂಗೋಲ್ ಎತ್ತಿನ ಅನೇಕ ಜೊತೆಗಳು ಹೆಮ್ಮೆಯಿಂದ ತಲೆದೂಗುತ್ತಾ ನಿಂತಿದ್ದುವು. ಅತಿಹೆಚ್ಚು ಹಾಲು ನೀಡುವ ಸುಧಾರಿಸಿದ ತಳಿಗಳ ಹಸುಗಳೂ, ಇತರ ಪಶುಗಳು ಪ್ರದರ್ಶನಗೊಂಡಿದ್ದುವು.

ಇದು ಮಾತ್ರವೇ ಅಲ್ಲ ಖಮ್ಮಂ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಸಮ್ಮೇಳನದ ಸಂಭ್ರಮ ಆವರಿಸಿತು. ಪ್ರಜಾನಾಟ್ಯ ಮಂಡಲಿಯ ಕಲಾಕಾರರು ಪ್ರತಿಮಂಡಲ ಆದಿವಾಸಿಗಳ ವಾಸಸ್ಥಾನಗಳನ್ನು ಎರಡು ತಿಂಗಳುಗಳ ಸಂಚರಿಸಿ ಹಾಡುಗಳ ಮೂಲಕ ಸಮ್ಮೇಳನದ ಸುದ್ದಿಯನ್ನು ತಲುಪಿಸಿದ್ದಾರೆಂದರೆ ಈ ಮಹಾನ್ ಪ್ರಯತ್ನದ ಅರಿವಾದೀತು. ಪ್ರತಿ ಹಳ್ಳಿಯಲ್ಲಿಯೂ ತೋರಣ, ಗೋಡೆಬರಹ ಪ್ರಮುಖರಸ್ತೆಗಳಲ್ಲಿರುವ ಹಳ್ಳಿ ಪಟ್ಟಣಗಳಲೆಲ್ಲಾ ಸ್ವಾಗತ ಕಮಾನುಗಳು. ಹೋ! ಅದರ ಅಂದವನ್ನು ವರ್ಣಿಸಲು ಅಸಾಧ್ಯ- ಇತ್ತೀಚೆಗೆ ಕೇರಳದಲ್ಲಿ ನಡೆದ ಪಕ್ಷದ 13 ನೇ ಕಾಂಗ್ರೆಸ್‌ನ ಸಮಯದಲ್ಲಿ ಕಂಡ ವಾತಾವರಣದ ಪ್ರತಿಫಲನವನ್ನು ಇಲ್ಲಿ ಕಾಣಬಹುದಾಗಿತ್ತು.

ಬಹಿರಂಗ ಸಭೆ

ರ್‍ಯಾಲಿ, ಬಹಿರಂಗ ಸಭೆಗೆ ಐದು ಆರುದಿನಗಳ ಮೊದಲಿನಿಂದಲೇ ಈ ಸಂಭ್ರಮವೆಂದರೆ ಇನ್ನು ರ್‍ಯಾಲಿಯ ದಿನ ಹೇಗಿರಬೇಕು! ಸಮ್ಮೇಳನದ ಕೊನೆಯ ದಿನ ಏಪ್ರಿಲ್ ಮೂವತ್ತು. ಆದರೆ ಅದಕ್ಕೆ ಹಿಂದಿನ ದಿನದಿಂದಲೇ ದೂರದ ಊರುಗಳ

'ಚರಿತ್ರಾರ್ಹ ಸಮ್ಮೇಳನ'

ಸಮ್ಮೇಳನದ ಆರಂಭದ ದಿನವೂ ಒಂದು ಉತ್ಸಾಹ, ಉತ್ಸವ, ಸಂಭ್ರಮದ ವಾತಾವರಣ. ರಾಜ್ಯದ ಎಲ್ಲಾ ಭಾಗಗಳಿಂದ ಜಾಥಾ ಹೊರಟು ಹಳ್ಳಿ ಹಳ್ಳಿಗಳಿಗೆ ರೈತ ಸಮ್ಮೇಳನದ ಕರೆಯನ್ನು ಬಿತ್ತಿದ ತಂಡಗಳು ಕೆಂಪು ಧ್ವಜಗಳನ್ನು ಕಿಸಾನ್ ಸಭಾ ಪದಾಧಿಕಾರಿಗಳಿಗೆ ಅರ್ಪಿಸಿದ ಸನ್ನಿವೇಶ. ಕರ್ನೂಲಿನಿಂದ ಹೊರಟು 1600 ಕಿ.ಮೀ ದೂರವನ್ನು ಚಲಿಸಿ ಬಂದ ಜಾಥಾದ ವೀರ, ನಾಯಕಿ-ಮಲ್ಲು ಸ್ವರಾಜ್ಯಂ, ತೆಲಂಗಾಣ ಹೋರಾಟದ ಧೀರೆ. ವಾರಾಂಗಲ್‌ನ ಜಾಥಾ 1300 ಕಿ.ಮೀ ಯನ್ನು ಕ್ರಮಿಸಿದ್ದರೆ ನೆಲ್ಲೂರು, ಶ್ರೀಕಾಕುಳಂ ಜಾಥಾಗಳು 1200 ಕಿ.ಮೀ ಕ್ರಮಿಸಿದ್ದರು. ಇದರ ಜೊತೆಗೆ ಅನೇಕ ಉಪ ಜಾಥಾಗಳು.

ಖಮ್ಮಂನಲ್ಲಿ ಸಮ್ಮೇಳನವೆಂಬುದು ಇಡೀ ಆಂಧ್ರ ಪ್ರದೇಶದಲ್ಲಿ ಹಳ್ಳಿಹಳ್ಳಿಗಳಲ್ಲಿ ಮನೆ ಮಾತಾಗುವ ಅಭೂತಪೂರ್ವ ಪ್ರಯತ್ನ. ಆಂಧ್ರದ ರೈತಸಂಘಟನೆಯನ್ನು ರಾಜ್ಯವ್ಯಾಪ್ತಿಯಾಗಿಸುವ, ತೆಲಂಗಾಣದ ಉತ್ತುಂಗ ಶಿಖರವನ್ನು ಇಂದಿನ ಹೊಸ ಪರಿಸ್ಥಿತಿಯಲ್ಲಿ ಮತ್ತೊಮ್ಮೆ ಮುಟ್ಟುವ ಈ ಭಗೀರಥ ಪ್ರಯತ್ನ ದುಡಿಯುವ ವರ್ಗದ ಎಲ್ಲಾ ಸಂಘಟನೆಗಳಿಂದ ಪ್ರಶಂಸೆಗೆ ಪಾತ್ರವಾಗಬೇಕಾದ ಪ್ರಯತ್ನ.

ಹಬ್ಬವಾದ ಖಮ್ಮಂ ಸಮ್ಮೇಳನ

ಜನ ಬಂದು ಸೇರತೊಡಗಿದರು. ರ್‍ಯಾಲಿಯ ದಿನವಂತೂ ಒಂದು ಬಾವುಟವನ್ನು ಹಿಡಿದು ಅದರ ಹಿಂದೆಯೇ ಸುತ್ತಾಡುವ ಒಂದೊಂದು ಹಳ್ಳಿ ಘಟಕಗಳ ಒಂದೊಂದು ಗುಂಪುಗಳು ಪುಂಖಾನು ಪುಂಖವಾಗಿ ಬಂದು ಸೇರಲಾರಂಭಿಸಿದವು. ಪಟ್ಟಣದಲ್ಲಿ ಆ ದಿನ ಬೆಳಗಿನಿಂದಲೇ ವಾಹನಸಂಚಾರಕ್ಕೆ ಅಡೆ ತಡೆಯಾಯಿತು. ಮಧ್ಯಾಹ್ನದ ವೇಳೆಗೆ ಯಾವುದೇ ವಾಹನ ಸಂಚಾರ ದುಸ್ಸಾಧ್ಯವೆನ್ನುವ ಹಂತಕ್ಕೆ ಬಂದಿತು.

ಬೇಸಗೆಯ ಬಿರುಬಿಸಲಿನಲ್ಲಿ ಬಹಳದೂರದ ಜನ ಬರಲಾರರು ಹೆಚ್ಚೆಂದರೆ ಎರಡು ಲಕ್ಷ ಸೇರ ಬಹುದು ಎಂದು ನಿರೀಕ್ಷಿಸಿದರೆ ಎಲ್ಲಾ ಊಹೆ ಲೆಕ್ಕಾಚಾರಗಳನ್ನು ಮೀರಿ ಐದು ಲಕ್ಷಕ್ಕೂ ಹೆಚ್ಚು ಜನ ರೈತರು ಕೃಷಿ ಕಾರ್ಮಿಕರು ತಮ್ಮ ರಾಷ್ಟ್ರೀಯ ನಾಯಕರನ್ನಾಲಿಸಲು ಬಂದು ನೆರೆದರು. ಇದರಲ್ಲಿ ಮಹಿಳೆಯರ ಭಾಗವೂ ಗಣನೀಯವಾಗಿತ್ತು. ಸುಂದರ ವಾಗಿ ಅಲಂಕಾರ ಗೊಂಡಿದ್ದ ಸುಂದರಯ್ಯ ನಗರದಲ್ಲಿ ಮಧ್ಯಾಹ್ನ 3 ಗಂಟೆಗೇ ಜಮಾಯಿಸಲಾರಂಭಿಸಿದ್ದ ಈ ಜನರ ಸಂದಣಿಗೆ ತಕ್ಕ ಜಾಗ ಖಮ್ಮಂನಲ್ಲಿರಲಿಲ್ಲ. ಕೇವಲ $1^1/_2$ ಲಕ್ಷಜನಸಂಖ್ಯೆಯ ಈ ಪಟ್ಟಣದಲ್ಲಿ 5 ಲಕ್ಷಕ್ಕೂ ಮೀರಿ ಜನ ಸೇರಿದರೆ ಅದರ ಪಾಡೇನು.

ಎಲ್ಲಾ ಜನರಿಗೆ ಬಹಿರಂಗ ಸಭೆಯ ಕಲಾಪಗಳು ಕಾಣಿಸುವಂತಾಗಲು ದೂರದರ್ಶನದ ವ್ಯವಸ್ಥೆ ಮಾಡಲಾಗಿತ್ತು. ಈ ಎಲ್ಲಾ ಜನ ಮೆರವಣಿಗೆಯಲ್ಲಿ ಬರಲು ಸಾಧ್ಯವಿಲ್ಲವೆಂಬುದಕ್ಕಾಗಿ ಕೇವಲ ಸ್ವಯಂ ಸೇವಕರ ಮೆರವಣಿಗೆ ಏರ್ಪಡಿಸಿದರೂ 10,000 ಜನರ ಕೆಂಪುಸಾಗರವಾಯಿತು.

26ನೇ ಸಮ್ಮೇಳನದ ಕುರುಹಾಗಿ 26 ಕೆಂಬಾವುಟಗಳನ್ನು ಹೊತ್ತ ಈ ಮೆರವಣಿಗೆಯ ನೇತೃತ್ವವನ್ನು ಅಖಿಲಭಾರತ ಕಿಸಾನ್ ಸಭಾದ ನೂತನ ಪದಾಧಿಕಾರಿಗಳೇ ವಹಿಸಿದ್ದರು. ಆದಿವಾಸಿಗಳೇ ಹೆಚ್ಚಿರುವ ಖಮ್ಮಂ ಜಿಲ್ಲೆಯ ಆದಿವಾಸಿಗಳ ಸಂಸ್ಕೃತಿಯ ವೈವಿಧ್ಯಗಳನ್ನು ಪ್ರದರ್ಶಿಸುವ ಮತ್ತೊಂದು ಮೆರವಣಿಗೆಯೂ ಏರ್ಪಾಟಾಗಿತ್ತು. ಈ ಸಮ್ಮೇಳನದ ವ್ಯವಸ್ಥೆಯಲ್ಲಿ ಊಟ, ನೀರು, ಕಾಫಿ ಸರಬರಾಜುಗಳಲ್ಲಿ ಅಲ್ಲಿಯ ವಿವಿಧ ಸಾಮೂಹಿಕ ಸಂಘಟನೆಯ ಸದಸ್ಯರು ಮಾತ್ರವೇ ಅಲ್ಲ ಇಡೀ ಕುಟುಂಬಗಳೇ ಪಾಲ್ಗೊಂಡಿದ್ದವು.

★ ★ ★ ★ ★



26ನೇ ಅಧಿವೇಶನದಲ್ಲಿ ಆಯ್ಕೆಗೊಂಡ ಎ.ಐ.ಕೆ.ಎಸ್. ಅಧ್ಯಕ್ಷರು ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ರಾಮ್ ನಾರಾಯಣ್ ಗೋಸ್ವಾಮಿ

ಅಖಿಲ ಭಾರತ ಕಿಸಾನ್ ಸಭಾ ಹೊಸಪದಾಧಿಕಾರಿಗಳು

ಅಧ್ಯಕ್ಷರು: ಹರ್‌ಕಿಷನ್‌ಸಿಂಗ್ ಸುರ್‌ಜೀತ್

ಪ್ರಧಾನಕಾರ್ಯದರ್ಶಿ: ರಾಮ್ ನಾರಾಯಣ್ ಗೋಸ್ವಾಮಿ

ಕಾರ್ಯದರ್ಶಿ (ಹಣಕಾಸು): ಎಸ್ ರಾಮಚಂದ್ರನ್ ಪಿಳ್ಳೈ

ಉಪಾಧ್ಯಕ್ಷರುಗಳು:

1. ಗೋದಾವರಿ ಪರುಳೇಕರ್
2. ಬಿನೊಯ್ ಕೃಷ್ಣ ಚೌಧುರಿ
3. ಎನ್ ಶಂಕರಯ್ಯ
4. ಟಿ.ಕೆ. ರಾಮಕೃಷ್ಣನ್

ಜಂಟೀ ಕಾರ್ಯದರ್ಶಿಗಳು:

1. ಪಿ.ಕೆ. ಟಂಡನ್
2. ಕೆ. ಸತ್ಯನಾರಾಯಣ

125 ಜನರ ಅಖಿಲಭಾರತ ಕಿಸಾನ್ ಸಮಿತಿ 121ಜನರ ಆಯ್ಕೆ (ಉಳಿದ ನಾಲ್ಕು ಸ್ಥಾನಗಳು ಖಾಲಿ) 43 ಜನರ ಕೇಂದ್ರ ಕಿಸಾನ್ ಮಂಡಳಿ

ಕರ್ನಾಟಕದಿಂದ:

ಕೇಂದ್ರ ಮಂಡಳಿ ಸದಸ್ಯರು:

ಅಖಿಲಭಾರತ ಕಿಸಾನ್ ಮಂಡಳಿ ಸದಸ್ಯರು:

1. ಪಿ.ರಾಮಚಂದ್ರರಾವ್
2. ಚಂದ್ರಶೇಖರ ಬಾಳಿ
3. ಎಂ.ಎಸ್.ಉಗ್ರಪ್ಪ
4. ಅಬ್ರಹಾಂ ಕರ್ಕಡ.

ಅಖಿಲಭಾರತ ಕಿಸಾನ್ ಸಭಾದ 26ನೇ ಸಮ್ಮೇಳನ

ಸುಂದರಯ್ಯ ನಗರದ ವಿಶಾಲ ಬಯಲಿನಲ್ಲಿ ಕಿಕ್ಕಿರಿದು ನೆರೆದಿದ್ದ 5 ಲಕ್ಷಕ್ಕೂಮಿಕ್ಕಿದ ರೈತರನ್ನು ರೈತಮಹಿಳೆಯ ರನ್ನು ಉದ್ದೇಶಿಸಿ ಮಾತನಾಡಿದ ಕಿಸಾನ್ ಸಭಾದ ನೂತನ ಅಧ್ಯಕ್ಷ ಕಾಂ. ಸುರಜೀತ್ ರವರು, ಭೂಮಾಲಿಕರು, ಅವರನ್ನು ಪೋಷಿಸುವ ಆಳುವ ಪಕ್ಷ, ಪ್ರಭುತ್ವ ಯಂತ್ರದ ದಮನಕಾರಿ ಅಂಗಗಳು- ಇವರು ಯಾರೆ ಎದುರು ಬಂದರೂ ಸರಿ ಭೂಮಿಗಾಗಿ ಹೋರಾಡಲು ನಿರ್ಣಯಿ ಸಿರುವ ರೈತರನ್ನು ಕೃಷಿಕಾರ್ಮಿಕರನ್ನು ಬಗ್ಗಿ ಬಡಿಯಲಾರರು ಎಂದು ಘೋಷಿಸಿದರು. 26ನೇ ಸಮ್ಮೇಳನಕ್ಕೆ ಆಯ್ಕೆಯಾಗಿದ್ದ 918 ಪ್ರತಿನಿಧಿಗಳು, 13 ವೀಕ್ಷಕರ ಈ ಒಕ್ಕೊರಲ ತೀರ್ಮಾನ ಕಿಸಾನ್ ಸಭಾದ ಒಂದು ಕೋಟಿ 5 ಲಕ್ಷ ಸದಸ್ಯರ ಆಶೋತ್ತರಗಳ ಪ್ರತಿಬಿಂಬ ಮಾತ್ರವಲ್ಲ, ಇದರ ಅನೇಕ ಪಟ್ಟು ರೈತ ಸಮು ದಾಯದ ಆಶೋತ್ತರಗಳ ಪ್ರತಿಬಿಂಬ.

ಭೂಸುಧಾರಣೆಯ ಪ್ರಶ್ನೆ ಇರಲಿ, ಗ್ರಾಮೀಣ ಋಣಭಾರದ ಪ್ರಶ್ನೆ ಇರಲಿ, ಲಾಭದಾಯಕ ಪ್ರಶ್ನೆ ಇರಲಿ, ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯ ಪ್ರಶ್ನೆ ಇರಲಿ, ದೇಶದ ಐಕ್ಯತೆ ಸಮಗ್ರತೆಯನ್ನು ಛಿನ್ನ ವಿಚ್ಛಿನ್ನ ಮಾಡಲು ಹೊಂಚು ಹಾಕುತ್ತಿರುವ ವಿಭಜಕ ಶಕ್ತಿಗಳ ಪ್ರಶ್ನೆ ಇರಲಿ, ಹರಿಜನ, ಗಿರಿಜನರ ಮೇಲೆ ನಿರಂತರವಾಗಿ ನಡೆಯುತ್ತಿರುವ ಧಾಳಿಗಳ ಪ್ರಶ್ನೆ ಇರಲಿ ಕಾಂಗ್ರೆಸ್ ಸರ್ಕಾರಗಳು ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸೋತಿದೆ ಎಂದರು.

26ನೇ ಸಮ್ಮೇಳನ- ಮೊತ್ತಮೊದಲ ಬಾರಿಗೆ ರಾಷ್ಟ್ರ ವ್ಯಾಪಿಯಾಗಿ ನಡೆದ ಚಳುವಳಿಗಳ ಹಿನ್ನೆಲೆಯಲ್ಲಿ 1987ರ ಕಿಸಾನ್ ಸಭಾ ಹೋರಾಟ 1988ರ ಸೆಪ್ಟೆಂಬರ್‌ನ ಐಕ್ಯ ಹೋರಾಟ ಹಾಗೂ ಡಿಸೆಂಬರ್ 88ರ ಬೃಹತ್ ರ್‍ಯಾಲಿಗಳ ಹಿನ್ನೆಲೆ ಯಲ್ಲಿ, ರೈತ ಹೋರಾಟದ ಚಿಲುಮೆ ಯಾದ ಖಮ್ಮಂನ ನೆಲದಲ್ಲಿ, ಕಿಸಾನ್ ಸಭಾದ ಪ್ರಥಮ ಅಧ್ಯಕ್ಷ ಸ್ವಾಮಿ ಸಹಜಾ ನಂದ ಸರಸ್ವತಿಯವರ, ಮತ್ತೊಬ್ಬ ರೈತ ಹೋರಾಟದ ಜೀವವಾಗಿದ್ದ ಮುಜಾಫರ್ ಅಹಮದ್‌ರವರ ಜನ್ಮ ಶತಾಬ್ದಿಯ ಸಮಯದಲ್ಲಿ ಸೇರಿ, ಹಿಂದಿನ ಹೋರಾಟ ಗಳನ್ನು ಮುಂದುವರಿಸಲು ನೀಡಿದ ಕರೆ ಇದು ಎಂದು ಹೇಳಿದರು.

ಕರ್ನಾಟಕ ಸರ್ಕಾರದ ವಜಾ ಮಾಡಿದ ಕೇಂದ್ರದ ಸರ್ವಾಧಿಕಾರಿ ನೀತಿ, ಎಡ ಸರ್ಕಾರಗಳ ಮೇಲೆ ಸದಾ ಹಲ್ಲು ಮಸೆಯುತ್ತಿರುವ ಕುತ್ಸಿತ ಧೋರಣೆ ಯನ್ನು ತೀವ್ರವಾಗಿ ಖಂಡಿಸಿದರು.

ಭೂಸುಧಾರಣೆಯ ಹೆಸರು ಹೇಳುತ್ತಲೇ ಭೂಮಾಲೀಕರು ಭೂಮಿ ಯನ್ನು ಉಳಿಸಿಕೊಳ್ಳಲು, ಕೃಷಿ ಕಾರ್ಮಿಕ ರಿಂದ ಕಬಳಿಸಲು ಎಲ್ಲಾ ಅವಕಾಶ ನೀಡಿದ ಕಾಂಗ್ರೆಸ್ ಸರ್ಕಾರಗಳ ಗೂಸುಂಬೆ ತನವನ್ನು ಬಯಲುಮಾಡಿದರು. ಅದೇ ರೀತಿಯಲ್ಲಿ, ಭೂದಾನ ಗ್ರಾಮದಾನಗಳ ಹೆಸರಿನಲ್ಲಿ, ಜನರನ್ನು [illegible] [illegible] ತಂತ್ರವೂ ಬಯಲಿಗೆ ಬಂದಿದೆ ಎಂದರು.

ಬಹಿರಂಗ ಸಭೆಯಲ್ಲಿ ಮಾತನಾಡಿದ ಕೇರಳದ ಮುಖ್ಯ ಮಂತ್ರಿ ಇ.ಕೆ.ನಾಯನಾರ್‌ರವರು ಕೇರಳ ಸರ್ಕಾರದ ಉಸಿರುಗಟ್ಟಿಸಲು ಆರ್ಥಿಕ ಹಿಡಿತ ಹೇರಲು ನಡೆಸಿದ, ನಡೆಸುತ್ತಿರುವ ಪ್ರಯತ್ನಗಳನ್ನು ವಿವರಿಸಿದರು. ಕೇರಳದ ಗ್ರಾಮೀಣ ಆರ್ಥಿಕದ ಪುನರುಜ್ಜೀವನ ಮಾಡಲು ಅಲ್ಲಿನ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರ ನಡೆಸುತ್ತಿರುವ ಪ್ರಯತ್ನ ಗಳನ್ನು ವಿವರಿಸಿದರು. ಕೃಷಿ [illegible] [illegible] ಸಂಪೂರ್ಣವಾಗಿ ಪುನರುಜ್ಜೀ ಪ್ರತಿ ಮಂಡಲದ ಅಧೀನಕ್ಕೆ ಅಧಿ[illegible]ಗಳನ್ನು ನೀಡಿ ಗುಂಪುಸಾಗುವಳಿ ನಡೆಸಲು ಕಡೆ ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿ ರುವ ಪ್ರಸಂಗಗಳ ಕಡೆಗೆ ಗಮನ ಸೆಳೆದರು.

ಮಾಡಲಾಗುತ್ತಿರುವ ಪ್ರಯತ್ನಗಳ ವಿವರ ನೀಡಿದರು. ಅಖಿಲಭಾರತ ಕೃಷಿಕೂಲಿಕಾರ ಸಂಘಟನೆಯ ಅಧ್ಯಕ್ಷ ಕಾಂ. ಎಲ್. ಬಾಲಗಂಗಾಧರರಾವ್‌ರವರು ಆಂಧ್ರದಲ್ಲಿ ಒಂದು ಕಡೆ ಹತ್ತಿ ರೈತರು ಮತ್ತೊಂದು

ಕೊನೆಯಲ್ಲಿ ಕೇಂದ್ರ ಕಿಸಾನ್ ಮಂಡಳಿ ಸದಸ್ಯರೂ ತೆಲಂಗಾಣ ಹೋರಾಟದ ಹಿರಿಯ ನಾಯಕರೂ ಆದ ಕಾಂ. ಬಸವಪುನ್ನಯ್ಯ ನವರು ಇಂದಿನ ರಾಜಕೀಯ

ಪರಿಸ್ಥಿತಿಯ ಮಾರ್ಮಿಕ ವಿಶ್ಲೇಷಣೆ ಮಾಡಿದರು.

ಇದೇ ಬಹಿರಂಗ [illegible]ಯಲ್ಲಿ ಅಂತರರಾಷ್ಟ್ರೀಯ ಕೃಷಿ ಆರ್ಗ್ಗಾ. [illegible] ಕೂಲಿಕಾರ ಸಂಘದ ಪ್ರತಿನಿಧಿ [illegible] ಭಾರತದ ರೈತ [illegible]ಕರಿಗೆ ವಿಶ್ವದ [illegible] ಕೂಲಿಕಾರ ಸಮುದಾಯದ ಪರವಾಗಿ [illegible] ಕೋರಿದರು. ಪ. ಬಂಗಾಳದ ಭೂಸುಧಾರಣಾ ಹಾಗೂ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಾದ ಬಿನೊಯ್ ಚೌಧುರಿಯವರು ವಸ್ತುಪ್ರದರ್ಶನ [illegible] ಬಹುಮಾನ ವಿಜೇತ [illegible] ಒಡೆಯರಿಗೆ [illegible] ಮಾಡಿದರು.

"ಐತಿಹಾಸಿಕ ಹೋರಾಟಗಳ ವೀರರು"

ಕಿಸಾನ್‌ಸಭಾ ನೇತೃತ್ವದ ಐತಿಹಾಸಿಕ ಹೋರಾಟಗಳ ಧೀರ ಪರಂಪರೆಯ ಹರಿಕಾರರಾಗಿ, ಅನುಭವದ ಚಿಲುಮೆಯಾಗಿರುವ 48 ಜನ ನಾಯಕರು. 26ನೇ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ತೆಲಂಗಾಣ, ತೇಭಾಗ, ಪುನ್ನಪ್ರವಯಲಾರ್, ಕಯ್ಯೂರು ಬೆಟರ್‌ಮೆಂಟ್ ಲೆವಿ ವಿರುದ್ಧದ ಪಂಜಾಬ್ ಹೋರಾಟ ಹಾಗೂ ವೊರ್ಲಿ, ಬಕಸ್ತ್ ಹೋರಾಟಗಳ ಪ್ರತಿನಿಧಿಗಳು ಇಂದಿನ ಕಿಸಾನ್ ಸಭೆ ನಾಯಕತ್ವದ ಮಂಚೂಣಿಯಲ್ಲಿರುವವರೂ ಭಾಗವಹಿಸಿದ್ದರು.

ತೆಲಂಗಾಣ ಹೋರಾಟದ ವೀರರಾದ ಎಂ. ಬಸವಪುನ್ನಯ್ಯ, ಬಿ.ಎನ್. ರೆಡ್ಡಿ, ಮಲ್ಲುಸ್ವರಾಜ್ಯಂ, ವಿ.ನರಸಿಂಹಾರೆಡ್ಡಿ, ಲಕ್ಷ್ಮಿನರಸಯ್ಯ, ಎನ್. ಪ್ರಸಾದ್‌ರಾವ್, ಪರ್ಸಾಸತ್ಯಾನಾರಾಯಣ, ಎಲ್.ಬಿ. ಗಂಗಾಧರರಾವ್‌ರವರು ಈಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಫಿಲಿಪೈನ್ಸ್ ದೇಶದ ಕಿರುಗತೆ

ಮರಣಶಯ್ಯೆಯ ಮೇಲೆ....

ಇಂಗ್ಲಿಷ ಮೂಲ: ಸಿಯೋನಿಲ್ ಜೋಸ್
ಕನ್ನಡಕ್ಕೆ : 'ಉದಯ'

ಸಿಯೋನಿಲ್ ಜೋಸ್ ಫಿಲಿಫೈನ್ಸ್‌ನ ಪ್ರಗತಿಶೀಲ ಬರಹಗಾರ. ದೇಶದ ಸರ್ವಾಧಿಕಾರಿ ಮಾರ್ಕೊಸ್‌ನ ವಿರುದ್ಧ ಅಲ್ಲಿನ ಜನತೆ ಹೋರಾಟ ನಡೆಸುತ್ತಿದ್ದ ಕಾಲವದು. ಆ ಹೋರಾಟದಲ್ಲಿ ಗಾಯಗೊಂಡು ಸೆರೆ ಹಿಡಿಯಲ್ಪಟ್ಟರೂ ಕೂಡ ಮಿಲಿಟರಿ ಅಧಿಕಾರಿಗಳಿಗೆ ಯಾವುದೇ ಸುಳಿವನ್ನು ನೀಡಲು ನಿರಾಕರಿಸಿದ ತರುಣ ಹೋರಾಟಗಾರ ವಿಲ್ಲಿ. ವಿಲ್ಲಿಯ ಜೀವನದ ರೀತಿ ಹೋರಾಟಗಾರರಿಗೆ ಧೈರ್ಯವನ್ನೂ ಸ್ಫೂರ್ತಿಯನ್ನು ತುಂಬುವಂತಹುದು. ಹೋರಾಟಗಾರ ನೊಬ್ಬನ ಮನೋಬಲವನ್ನು ಈ ಕಥೆ ಪ್ರತಿ ಬಿಂಬಿಸುತ್ತದೆ.

ಹೆಲಿಕಾಪ್ಟರ್ ನೆಲವನ್ನು ಸೋಕುತ್ತಿದ್ದಂತೆಯೇ ಮೇಜರ್ ಆರೋಮಿನ್ ಅದರತ್ತ ನಡೆದರು. ಅದರೊಳಗಿಂದ ತಮ್ಮ ಹಿಂದಿನ ಅಧಿಕಾರಿಯೂ ಮಿಲಟರಿ ಆಸ್ಪತ್ರೆಯ ಮುಖ್ಯಾಧಿಕಾರಿಯೂ ಆದ ಸೀಸಾನ್ ಇಳಿದರು. ಇಬ್ಬರೂ ಕೈಕುಲುಕಿ ಆಸ್ಪತ್ರೆಯತ್ತ ನಡೆಯ ತೊಡಗಿದರು.

"ನಿನ್ನ ಏರ್ಪಾಟನಂತೆ ಪ್ರಯಾಣ ಚೆನ್ನಾಗಿತ್ತು ಆದರೆ ನೀನು ಈ ಸುದ್ದಿಯನ್ನು ಮೊದಲೇ ನನಗೆ ತಿಳಿಸಬೇಕಾಗಿತ್ತು." ಆರೋಮಿನ್ ನನ್ನು ಉದ್ದೇಶಿಸಿ ಸೀಸಾನ್ ನುಡಿದರು.

ಅವರೊಡನೆ ಹೆಜ್ಜೆ ಹಾಕುತ್ತಲೇ ಆರೋಮಿನ್ "ನಾನೇನು ಮಾಡಲಿ ಸರ್ ಇಂದು ಬೆಳಿಗ್ಗೆ ತಾನೇ ನನಗೆ ಗೊತ್ತಾಗಿದ್ದು. ಅದೂ ಅವನಿಗೆ ಆಪರೇಶನ್ ಮಾಡುವ ಸಮಯದಲ್ಲೇ ಅವನ ಬಗೆಗಿನ ವಿವರಗಳು ತಿಳಿದಿದ್ದು. ಇದು ನನಗೆ ತೀವ್ರ ಆಘಾತವುಂಟುಮಾಡಿತು ಸಾರ್"

"ಅದಿರಲಿ ಆಪರೇಶನ್ ಹೇಗೆ ನಡೆಯಿತು?"

"ಹೇಳುವುದಕ್ಕೇ ತುಂಬಾ ಕಷ್ಟವಾಗುತ್ತಿದೆ. ಅವನ ಬಲಗಾಲನ್ನು ಕತ್ತರಿಸಬೇಕಾಯ್ತು. ಅದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ಕಾಲಿನ ಗಾಯ ಒಣಗದೆ ಕೊಳೆಯಲು ಶುರುವಾಯ್ತು ನಾನು ನೋಡಿದಾಗ ಅವನ ಸ್ಥಿತಿ ಚಿಂತಾಜನಕವಾಗಿತ್ತು."

"ತುಂಬಾ ನೋವು ಅನುಭವಿಸಿರಬೇಕು ಅಲ್ಲವೇ?"

"ಹೌದು ಸರ್. ಅಷ್ಟಲ್ಲದೆ ಅವನಿಂದ ಮಾಹಿತಿ ಪಡೆಯಲು ಸೈನಿಕರು ತುಂಬಾ ಒರಟಾಗಿ... ನಾನು ಹೇಳುತ್ತಿರುವುದು ನಿಮಗೆ ಅರ್ಥವಾಗಿರಬಹುದು"

ಸೀಸಾನ್ ನಿಟ್ಟುಸಿರಿಟ್ಟರು. ದುಃಖದಿಂದ ಕಣ್ಣು ಮಂಜಾಯಿತು. ಅವನು ಮೊದಲೇ ಬಲಹೀನ ವ್ಯಕ್ತಿ ಈ ಆ ಮಣವನ್ನೆಲ್ಲಾ ಅದು ಹೇಗೆ ತಡೆದು ಕೊಂಡನೋ... ನಡುಗುವ ಸ್ವರದಲ್ಲಿ ಮೆಲ್ಲನೆ ಹೇಳಿಕೊಂಡರು.

"ಮೊದಲು ಅವನನ್ನು ಜನರಲ್ ವಾರ್ಡಿನಲ್ಲೇ ಸೇರಿಸಲಾಗಿತ್ತು. ಆದರೆ ಅವನು ಯಾರೆಂಬುದು ಗೊತ್ತಾದ ಮೇಲೆ ಅವನು ಅನಾಥನಾಗಿ ಸಾಯಲು ನಾನು ಇಚ್ಛಿಸಲಿಲ್ಲ ಅವನಿಗೆ ಪ್ರತ್ಯೇಕ ಕೋಣೆ ಒದಗಿಸಿದ್ದೇನೆ. ನೀವಾಗಲೀ ನಿಮ್ಮ ಕುಟುಂಬದವರಾಗಲಿ ಬಂದು ಮಾತುಕತೆಯಾಡಲು ಅನುಕೂಲವಾಗಲಿ ಎಂಬ ಉದ್ದೇಶದಿಂದ...

ನಿಮ್ಮ ಮನೆಯವರಿಗೆ ಈ ವಿಷಯ ತಿಳಿದಿದೆಯೇ?"

"ಇಲ್ಲ ಮನೆಯವರಿಗೆ ಈ ವಿಷಯ ತಿಳಿಸದಿರುವುದೇ ಒಳ್ಳೆಯದೆಂದುಕೊಂಡಿದ್ದೇನೆ"

ಇಬ್ಬರೂ ಸೈನಿಕರ ವಸತಿ ಪ್ರದೇಶವನ್ನು ದಾಟಿ ನಡೆದರು. ದಾರಿಯಲ್ಲಿ ಸೀಸಾನ್ ಅವರನ್ನು ಗುರುತಿಸಿದ ಕೆಲವರು ಸಲ್ಯೂಟ್ ಮಾಡಿದರು. ಅದನ್ನು ಸ್ವೀಕರಿಸುವವರಂತೆ ತಮ್ಮ ಕೈಯನ್ನು ಮೇಲೆತ್ತಿಕೊಂಡೇ ನಡೆದರು. ಬೇಸಿಗೆಯ ಕಾಲ ತುಂಬಾ ಸೆಕೆಯಾಗುತ್ತಿತ್ತು. ಸೀಸಾನರ ಮುಖದ ಮೇಲೆ ಬೆವರ ಹನಿಗಳು ಜಿನುಗತೊಡಗಿದ್ದವು.

ಆಸ್ಪತ್ರೆಯಲ್ಲಿ ಗಾಯಗೊಂಡು ಮಲಗಿರುವ ಅವರ ಮಗ 'ವಿಲ್ಲಿ'. 19ನೇ ವಯಸ್ಸಿನಲ್ಲೇ ಮನೆಯಿಂದ ಹೊರಬಿದ್ದು 'ವಿಮೋಚನಾ ಪಡೆಯಲ್ಲಿ' ಸೇರಿಕೊಂಡನು. ಅವನು ಆಗ ಶಾಲೆಯಲ್ಲಿ ಎಂಜಿನಿಯರಿಂಗ್ ಓದುತ್ತಿದ್ದ. ಯಾರೊಡನೆಯೂ ಹೆಚ್ಚು ಮಾತಾಡುತ್ತಿರಲಿಲ್ಲ. ಈಗ ಏಳು ವರ್ಷಗಳು ಗತಿಸಿವೆ. ಕಾಲ ಅವನನ್ನು ಹೇಗೆ ರೂಪಿಸಿರಬಹುದು....

ಆರೋಮಿನರೊಡನೆ ಸಹ ಮಾತನಾಡದೆ ತಮ್ಮದೇ ಆಲೋಚನೆಗಳಲ್ಲಿ ಮುಳುಗಿ, ಮಗನಿರುವ ಕೋಣೆಯತ್ತ ನಡೆಯುತ್ತಿದ್ದಾಗ ನರ್ಸ ಒಬ್ಬಳು ಕೋಣೆಯಿಂದ ಹೊರಬರುತ್ತಿರುವುದು ಕಂಡಿತು. ತನ್ನತ್ತ ಪ್ರಶ್ನಾರ್ಥಕವಾಗಿ ನೋಡಿದ ಡಾ॥ ಆರೋಮಿನರಿಗೆ 'ಆತ ಎಚ್ಚರವಾಗಿದ್ದಾನೆ. ಸರ್ ಎನ್ನುತ್ತಾ ಹೊರಟು ಹೋದಳು.

ಬಾಗಿಲನ್ನು ಅಗಲವಾಗಿ ತೆರೆದು ಸೀಸಾನ್ ಒಳಗೆ ಪ್ರವೇಶಿಸಿದರು. ಅವರ ಮಗ ಮಂಚದ ಮೇಲೆ ಮಲಗಿದ್ದ. ಈ ಏಳು ವರ್ಷಗಳ ಅವಧಿಯಲ್ಲಿ ಅವನಿಗೆ ಉಂಟಾಗಿದ್ದ ಅವಸ್ಥೆಯನ್ನು ಕಣ್ಣಾರೆ ಕಂಡ ಅವರಿಗೆ ಉಸಿರು ಸಿಕ್ಕಿ ಹಾಕಿ ಕೊಂಡಂತಾಯಿತು. ತನ್ನ ತಂದೆಯನ್ನು ಗುರುತಿಸಿದ ಅವನ ಕಣ್ಣುಗಳು ಪಳಪಳನೆ ಹೊಳೆದವು. ಏನನ್ನೋ ಪಡೆದುಕೊಂಡ ಭಾವನೆ ಮುಖದ ತುಂಬಾ ಹರಡಿಕೊಂಡಿತು. ಮೆಲ್ಲನೆಯ ಧ್ವನಿಯಲ್ಲಿ ಆತ ಕರೆದ.

'ಅಪ್ಪಾ....

ಸೀಸಾನ ನಸುಬಾಗಿ ಮಗನ ಕೈಗಳನ್ನು ಹಿಡಿದುಕೊಂಡರು. ಮಗನ ಕೈಗಳು ಒರಟಾಗಿರುವುದನ್ನು ಗಮನಿಸಿದರು. ವಿಲ್ಲಿ ದೈಹಿಕ ಶ್ರಮದ ಒರಟು ಕೆಲಸಗಳನ್ನು ಮಾಡುವಂಥವನಾಗಿರಲಿಲ್ಲ. ಅವನ ಶೂಗಳಿಗೆ ಪಾಲಿಶ್ ಹಾಕುವುದು, ಮನೆಯ ಕೈತೋಟದಲ್ಲಿ ಏನಾದರೂ ಕೊಂಚ ಕೆಲಸ ಮಾಡುವುದು ಕಾರು ತೊಳೆಯುವುದು..... ಆದರೆ ಈಗ ಕಠಿಣ ಕೆಲಸದಿಂದಾಗಿ ಅವನ ಕೈಗಳು ತುಂಬಾ ಒರಟಾಗಿವೆ.

ಸೀಸಾನರಿಗೆ ಭಾವೋದ್ವೇಗದಿಂದಾಗಿ ಎದೆ ಭಾರವಾದಂತೆನಿಸಿತು. 'ಸದ್ಯ ತಡಮಾಡದೆ ಬೇಗನೆ ಬಂದು ಸೇರಿದೆ' ಎಂಬುದೊಂದೇ ಅವರಿಗಾದ ಸಮಾಧಾನ.

"ಅಪ್ಪಾ ನಿಮ್ಮ ತಲೆಗೂದಲ್ಲೊ ನರೆತು ಬಿಟ್ಟದೆಯಲ್ಲಾ" ನಗುತ್ತಲೇ ವಿಲ್ಲಿ ಕೇಳಿದ. ಅವನು ನಕ್ಕಾಗ ಹಲ್ಲುಗಳ ಸಾಲಿನಲ್ಲಿ ಕೆಲವು ಅದೃಶ್ಯವಾಗಿರುವುದನ್ನು ಕಂಡರು. ವಿಚಾರಣೆಯ ಸಮಯದಲ್ಲಿ ಕೆಲವು ಹಲ್ಲುಗಳು ಒಡೆದಿರಬಹುದು.



ಸೀಸಾನ್ ನಗುತ್ತಲೇ ತಮ್ಮ ತಲೆಯನ್ನು ನೇವರಿಸಿಕೊಳ್ಳುತ್ತಾ "ಹೌದಪ್ಪ ಮಗು ವಯಸ್ಸಾಗುತ್ತಿರುವುದರ ಲಕ್ಷಣ" ಎಂದರು.

ತಂದೆಯನ್ನು ಭೇಟಿಯಾದ ಉತ್ಸಾಹದಲ್ಲಿ ವಿಲ್ಲಿ ಹೇಳಿದ "ಆದರೂ ಅಪ್ಪ ಕೂದಲು ಮಾತ್ರ ನರೆತಿದೆ ಅಷ್ಟೆ ಬೇರೇನೂ ಬದಲಾವಣೆಗಳಾಗಿಲ್ಲ".

ಮಗನನ್ನು ಸಮಾಧಾನ ಪಡಿಸುವ ಸಲುವಾಗಿ "ಇನ್ನು ನಿನಗೆ ಚಿಂತೆಯೇ ಬೇಡ" ಎಂದು ಹೇಳಲು ಬಾಯಿ ತೆರೆದರು ಆದರೆ ಮಾತುಗಳು ಒಳಗೇ ಉಳಿದುಬಿಟ್ಟವು.

"ಅಮ್ಮಾ ಹೇಗಿದ್ದಾರಪ್ಪ? ಜಾಮಿ, ಬೇತ್ ಚೆನ್ನಾಗಿದ್ದಾರಾ? ಪುಟಾಣಿ ಟಿಮ್ಮಿ ಈಗ ದೊಡ್ಡವನಾಗಿರ ಬೇಕಲ್ಲವಾ? ಅವರ ಯಾವ ಫೋಟೋಗಳೂ ನನ್ನ ಬಳಿ ಇಲ್ಲ ಆದರೆ ನನ್ನ ಮನಸ್ಸಿನ ಪರದೆಯ ಮೇಲೆ ಅವರೆಲ್ಲರನ್ನೂ ಯಾವಾಗ ಬೇಕಾದರೂ ಕರೆಸಿಕೊಳ್ಳಬಲ್ಲೆ ಎನ್ನುತ್ತಾ ತನ್ನ ಬಲಗೈಯನ್ನು ತಲೆಯ ಬಳಿ ತರಲು ಪ್ರಯತ್ನಿಸಿದ ವಿಲ್ಲಿ ಅದು ಸಾಧ್ಯವಾಗದೆ ಕೈಯನ್ನು ಧೊಪೆಂದು ಕೆಳಗೆ ಹಾಕಿದನು.

"ಅವರೆಲ್ಲಾ ಚೆನ್ನಾಗಿದ್ದಾರೆ? ಅವರನ್ನೆಲ್ಲಾ ಇಲ್ಲಿಗೆ ಕರೆತರಲು ಸಾಧ್ಯವಾಗದೇ ಹೋದುದಕ್ಕೆ ಬೇಸರವಾಗುತ್ತದೆ. ಇಲ್ಲಿಗೆ ಕರೆತರುವ ಮೊದಲು ಅವರನ್ನು ಚೆನ್ನಾಗಿ ತರಬೇತಿಗೊಳಿಸಬೇಕಾಗುತ್ತದೆ ಹೇಗಿದ್ದರೂ ನಾಳೆ...."

"ಅಪ್ಪಾ ನನಗೆ ನಾಳೆ ಎಂಬುದು ಇದೆಯೇ?"

ಸೀಸಾನ್ ದಿಗ್ಭ್ರಮೆಗೊಂಡರು. ವಿಲ್ಲಿಯಾದರೋ ಕಿಟಕಿಯಿಂದಾಚೆಗೆ ದೃಷ್ಟಿಯನ್ನು ನೆಟ್ಟಿದ್ದವನು ಮೂರು ಲಾರಿಗಳಿಂದ ಒಳಲಿದ ಸೈನಿಕರು ಕೆಳಗಿಳಿಯುವುದನ್ನು ನೋಡುತ್ತಿದ್ದ. ಗಾಯಗೊಂಡವರನ್ನು ಸಾಗಿಸಲು ಸ್ಟ್ರೆಚರುಗಳೂ ಇದ್ದವು.

ಕುಟುಂಬದ ಕುರಿತಾದ ಮಾತುಕತೆಗಳು ಅದರೊಡನೆ ಕಾಣೆಯಾಗಿದ್ದ ಮಗನನ್ನು ಕಂಡ ಕಾರಣವೋ ಏನೋ ಸೀಸಾನ್ ಉತ್ಸಾಹ ಭರಿತರಾಗಿದ್ದರು.

"ನಿನ್ನ ಅಮ್ಮ ಇದ್ದಾಳಲ್ಲ ಅವಳಂತೂ ಹಾಗೆಯೇ ಇದ್ದಾಳೆ. ಆದರೆ ಒಂದೊಂದು ಸಲ ಎದೆ ನೋವೆಂದು ಹೇಳುತ್ತಿರುತ್ತಾಳೆ ಅದರ ಜೊತೆ ನಿನ್ನ ಬಗ್ಗೆ ಚಿಂತೆ ಬೇರೆ ಯಾವಾಗಲೂ ನೀನು ಹೇಗಿದ್ದೀಯೋ? ಎಲ್ಲಿದ್ದೀಯೋ? ಎಂದು ಹಲುಬುತ್ತಿರುತ್ತಾಳೆ. ಪತ್ರಿಕೆಗಳಲ್ಲಿ ಆಕ್ರಮಣ, ಯುದ್ಧ, ಹಿಂಸಾಚಾರ ಎಂದು ವರದಿಯಾದಾಗೆಲ್ಲಾ ತುಂಬಾ ಚಡಪಡಿಸುತ್ತಾಳೆ. ಅಷ್ಟೇ ಅಲ್ಲ, ಯುದ್ಧ ಭೂಮಿಯಿಂದ ವಾಪಸ್ಸಾಗುವ ಮಿಲಿಟರಿ ಅಧಿಕಾರಿಗಳ ಪತ್ನಿಯರೆನ್ನೆಲ್ಲಾ ನಿನ್ನ ಬಗ್ಗೆ ವಿಚಾರಿಸುತ್ತಾಳೆ ನಿನ್ನ ಹಳೆಯ ಗೆಳೆಯರುಗಳನ್ನು ಕಂಡಾಗೆಲ್ಲಾ ನಿನ್ನ ಬಗ್ಗೆಯೇ ಮಾತಾಡುತ್ತಾಳೆ.

"ಅಮ್ಮನ ಬಗ್ಗೆ ಯೋಚಿಸುವಾಗೆಲ್ಲಾ ನನಗೆ ಒಂದು ರೀತಿಯ ಸಂಕಟವಾಗುತ್ತದೆ ಅಪ್ಪಾ. ಅಮ್ಮ ನನ್ನನ್ನು ಮರೆತು ಬಿಡಲಿ ಎಂಬ ಉದ್ದೇಶದಿಂದಲೇ ನಾನು ಮನೆ ಬಿಟ್ಟು ಹೊರಟು ಬರುವಾಗ ಇನ್ನು ನನ್ನನ್ನು ನಿರೀಕ್ಷಿಸಬೇಡಿ' ಎಂದು ಬರೆದಿರಿಸಿ ಬಂದಿದ್ದೆ"

"ಅದು ಹೇಗೆ ಸಾಧ್ಯ ಮಗನೇ? ಆಕೆಯೊಬ್ಬಳು ತಾಯಿ ನೀನು ಬರೆದಿಟ್ಟಿದ್ದ ಆ ಪತ್ರವನ್ನು ಅವಳು ಜೋಪಾನವಾಗಿ ತೆಗೆದಿಟ್ಟಿದ್ದಾಳೆ ಆಗಾಗ ಅದನ್ನು ಓದಿ ಕಣ್ಣೀರು ಮಿಡಿಯುತ್ತಾಳೆ"

"ಅಮ್ಮನ ಹೂದೋಟ ಹೇಗಿದೆ ಅಪ್ಪ?"

"ಹೋದವಾರ ಸಹ ಸಿಂಗಪೂರಿನಲ್ಲಿ ಒಂದು ಸಮ್ಮೇಳನಕ್ಕೆ ಹೋಗಿದ್ದವನು ಐದು ಬಗೆಯ ಹೂಗಿಡಗಳನ್ನು ತಂದಿದ್ದೆ. ವಿವಿಧ ಬಗೆಯ ಹೂಗಿಡಗಳನ್ನು ಬೆಳೆಸುವುದು ನಿನ್ನ ಅಮ್ಮನ ಅಭ್ಯಾಸವಾಗಿಬಿಟ್ಟಿದೆ. ಕಕ್ಕಸು ಮನೆಯಲ್ಲೂ ಸಹ ಒಂದು ಹೂವಿನ ಕುಂಡವನ್ನೂ ಇಟ್ಟಿದ್ದಾಳೆ. ಈಗಂತೂ ಎಲ್ಲಾ ಗಿಡಗಳೂಲ ಬಣ್ಣ ಬಣ್ಣದ ಹೂಗಳು ಸೊಂಪಾಗಿ ಅರಳಿವೆ"

"ಅಪ್ಪಾ ಮಳೆಗಾಲದಲ್ಲಿ ಅಡಿಗೆ ಮನೆಯ ಛಾವಣಿಯ ಮೇಲೆ ನಿಲ್ಲುವ ಮಳೆ ನೀರನ್ನೆಲ್ಲಾ ಈಗ ಯಾರು ಮೊಗೆದು ಚೆಲ್ಲುತ್ತಾರೆ?

"ಜಾಮಿ ಮಾಡ್ತಾನೆ"

"ಡಿಮ್ಮಿ?"

"ಅವನನ್ನ ನೋಡಿದರೆ ನಿನಗೇ ಗುರುತು ಸಿಗಲ್ಲ ಅವನಿಗೀಗ ಹತ್ತು ವರ್ಷ. ಓದುವುದರಲ್ಲಿ ತುಂಬಾ ಬುದ್ಧಿವಂತ. ಅವನ ವಯಸ್ಸಿನಲ್ಲಿ ನೀವ್ಯಾರೂ ಇಷ್ಟು ಚುರುಕಾಗಿರಲಿಲ್ಲ"

ವಿಲ್ಲಿಯ ತುಟಿಗಳ ಮೇಲೆ ಮುಗುಳ್ನಗೆಯೊಂದು ತೇಲಿ ಹೋಯಿತು.

"ತಂದೆ ತಾಯಿಯರಿಗೆ ಕೊನೆಯ ಮಗುವಿನ ಮೇಲೆ ಪ್ರೀತಿ ಸ್ವಲ್ಪ ಜಾಸ್ತಿಯಿರುತ್ತದೆ. ನಾನು ಹೊಟ್ಟೆಕಿಚ್ಚಿನಿಂದ ಈ ಮಾತನ್ನು ಹೇಳುತ್ತಿಲ್ಲ ಅಪ್ಪ ನಿಮಗೆ ನೆನಪಿದೆಯೇ? ಡಿಮ್ಮಿ ಹುಟ್ಟುವ ಸಮಯ 'ಅಮ್ಮಾ ನನಗೆ ಒಬ್ಬಳು ತಂಗಿ ಬಂದರೆ ನನ್ನ ಮೇಲೆ ಪ್ರೀತಿ ಹೋಗ್ಬಿಡುತ್ತಾ' ಅಂತ ಬೇತ್ ಅಮ್ಮನನ್ನ ಯಾವಾಗ್ಲೂ ಪೀಡಿಸ್ತಾ ಇದ್ದಿದ್ದು"

ತೀವ್ರವಾದ ಮಾನಸಿಕ ತುಮುಲದಲ್ಲೂ ಸಹ ಸೀಸಾನರಿಗೆ ಈ ಮಾತಿನಿಂದ ಕೊಂಚ ಹಿತವೆನಿಸಿತು.

"ಡಿಮ್ಮಿ ಇದ್ದಾನಲ್ಲಾ ಅವನಿಗೆ ಯವಾಗಲೂ ಯಾರ ಮೇಲಾದರೂ ಅಧಿಕಾರ ಚಲಾಯಿಸಬೇಕೆಂದರೆ ತುಂಬಾ ಇಷ್ಟ. ಆದರೆ ಅವನಿಗೆ ತಂಗಿಯೋ ತಮ್ಮನೋ ಇಲ್ಲದಿರುವುದು ಅವನಿಗೆ ತುಂಬಾ

ಚಿಂತೆಯಾಗಿದೆಯಂತೆ"

"ಅವನು ಯಾವ ಸಬ್ಜೆಕ್ಟ್‌ನಲ್ಲಿ ತುಂಬಾ ಚುರುಕಾಗಿದ್ದಾನೆ?"

"ಎಲ್ಲದರಲ್ಲೂ ವಿಜ್ಞಾನ, ಗಣಿತ, ಸಂಗೀತದಲ್ಲಿ ಹೆಚ್ಚು ಮಾರ್ಕ್ಸ್ ತೆಗೆಯುತ್ತಾನೆ ಅಷ್ಟೆ ಅಲ್ಲ, ಸಾಕುಪ್ರಾಣಿಗಳ ಮೇಲಂತೂ ಅವನಿಗೆ ಪಂಚ ಪ್ರಾಣ. ಈಗವನು ಐದು ಬೆಕ್ಕುಗಳನ್ನು ಸಾಕುತ್ತಿದ್ದಾನೆ ಅಂದ್ರೆ ನೀನೇ ತಿಳ್ಕೊ"

"ನಮ್ಮ ನಾಯಿ 'ಪೆಟ್' ಇನ್ನೂ ಇದೆಯಾಪ್ಪಾ?"

"ಇಲ್ಲ, ನಾಲ್ಕೈದು ವರ್ಷಗಳ ಹಿಂದೆ ಹೇಗೋ ಮನೆಯಿಂದ ತಪ್ಪಿಸಿಕೊಂಡಿತು. ನಂತರ ಏನಾಯಿತು ಅಂತ ತಿಳೀಲೇ ಇಲ್ಲ. ಯಾರಾದ್ರೂ ಹಿಡ್ಕೊಂಡು ಹೋಗಿರಬಹುದು. ಅದನ್ನ ಕಳಕೊಂಡಿದ್ದಕ್ಕೆ ಎಷ್ಟೋದಿನ ದುಃಖಿಸಿದೆವು. ಅದರ ಮೇಲೆ ಎಷ್ಟೊಂದು ಪ್ರೀತಿ ಇಟ್ಟಿದ್ದೆವು..."

"ಅಪ್ಪಾ... ಇದನ್ನು ಹೇಳಲು ನನಗೇನೂ ಸಂಕೋಚವಿಲ್ಲ, ನನಗೆ ಮಾಂಸದ ತಿನಿಸುಗಳೆಂದರೆ ತುಂಬಾ ಇಷ್ಟ. ಆದರೆ ನಮಗೆ ವಾರಗಟ್ಟಲೆ ಅದು ಸಿಕ್ಕುವುದೇ ಇಲ್ಲ. ನನಗೆ ಹಸಿವಾದಾಗ ಅಮ್ಮನನ್ನು ಜ್ಞಾಪಿಸಿಕೊಳ್ಳುತ್ತೇನೆ. ಅಮ್ಮ ಮಾಡಿ ಬಡಿಸುತ್ತಿದ್ದ ಬಗೆ ಬಗೆಯ ಮಾಂಸದ ಅಡಿಗೆಯನ್ನು ಅದರಲ್ಲೂ ಭಾನುವಾರ ಮಾಡುತ್ತಿದ್ದ ಕೋಳಿ ಮಾಂಸದ ರೋಸ್ಟ್...."

ಬಾಗಿಲು ತೆರೆಯಲ್ಪಟ್ಟು ಡಾ|| ಅರೋಮಿನ್ ಕೋಣೆಯೊಳಗೆ ಇಣುಕಿದರು. "ಏನಿಲ್ಲ ಸರ್ ನೀವು ಹೋಗುವ ಮೊದಲೇ ನಿಮ್ಮ ಮಗನ ಕುರಿತಾದ ಟಿಪ್ಪಣಿಗಳು ಸಿದ್ಧವಾಗಿರುತ್ತವೆ. ಇದನ್ನು ಹೇಳಲು ಬಂದೆ ಅಷ್ಟೆ"

ಡಾಕ್ಟರ್ ಬಾಗಿಲು ಮುಂದಕ್ಕೆ ಹಾಕಿಕೊಂಡು ಹೋದ ನಂತರ ತಂದೆ ಮಕ್ಕಳಿಬ್ಬರೇ ಉಳಿದರು.

"ನನ್ನ ಕುರಿತಾದ ಟಿಪ್ಪಣಿಗಳೇ? ಅದರಲ್ಲಿ ತಿಳಿದುಕೊಳ್ಳಬೇಕಾದದು ಯಾವುದೂ ಇರುವುದಿಲ್ಲ ಅಪ್ಪ. ಯಾಕೆಂದರೆ ನಾನು ಯಾವುದನ್ನೂ ಬಹಿರಂಗ ಪಡಿಸಿಲ್ಲ"

ಮಗನ ಕೈಗಳನ್ನು ಅಭಿಮಾನದಿಂದ ಒತ್ತಿ ಹಿಡಿದರು ಸೀಸಾನ್ "ನಾನು ಇನ್ನು ಸ್ವಲ್ಪ ಸಮಯದಲ್ಲೇ ಹೊರಡುವವನಿದ್ದೇನೆ..." ಸೀಸಾನ್ ವೇದನೆಯಿಂದ ಗೊಣಗಿದರು.

"ನಿನ್ನ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳುವುದಕ್ಕಾಗಲೀ ಅಥವಾ ನಿನ್ನನ್ನು ಖಂಡಿಸುವುದಕ್ಕಾಗಲೀ ನಾನಿಲ್ಲಿಗೆ ಬರಲಿಲ್ಲ ವಿಲ್ಲಿ.. ಆದರೆ ನೀನಿಲ್ಲದೆ ನಮಗೆಲ್ಲಾ ತುಂಬಾ..." ಮುಂದೆ ಅವರಿಂದ ಮಾತನಾಡಲಾಗಲಿಲ್ಲ.

"ನಾನು ಕೂಡ ನಿಮ್ಮೆಲ್ಲರನ್ನು ಆಗಾಗ ಸ್ಮರಿಸುತ್ತಿರುತ್ತೇನೆ ಅಪ್ಪ. ಎರಡು ವರ್ಷಗಳ ಹಿಂದೆ ನಾನು ಮನಿಲಾದಲ್ಲಿ ಇರಬೇಕಾಗಿ ಬಂದಾಗ ಅಮ್ಮನ ಹುಟ್ಟಿದ ದಿನ ನೆನಪಾಯಿತು. ನನ್ನನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನನಗೆ ವಿಧಿಸಲಾಗಿದ್ದ ಶಿಸ್ತನ್ನು ಮೀರಿ ನಾನು ಮನೆಗೆ ಬಂದೆ ಆಗ ರಾತ್ರಿ 8 ಗಂಟೆಯಿರಬಹುದು. ಯಾರನ್ನಾದರೂ ಕಾಣಬಹುದೆಂಬ ನಂಬಿಕೆಯಿಂದಲೇ ಬಂದಿದ್ದೆ. ಅಮ್ಮ ತಮ್ಮ ಹೂದೋಟದ ಕಡೆಗೆ ಬರಬಹುದೆಂದು ನಿರೀಕ್ಷಿಸಿದ್ದೆ. ಆದರೆ ಯಾರೂ ಮನೆಯಿಂದ ಹೊರಗೆ ಬರಲೇ ಇಲ್ಲ. ಮನೆಯೊಳಗಿಂದ ಕೇಳಿಸುತ್ತಿದ್ದ 'ಪೀಕಿಂಗ್' ಸಂಗೀತದಲ್ಲಿ ತಲ್ಲೀನನಾಗಿದ್ದೆ ಆದರೆ ಹೆಚ್ಚು ಕಾಲ ಹೊರಗೆ ಇರುವುದು ಅಪಾಯ ಅದರಿಂದಾಗಿ ಹಿಂತಿರುಗಿ ಬಂದು ಬಿಟ್ಟೆ."

"ಅಯ್ಯೋ ವಿಲ್ಲಿ ನೀನು ಒಳಗೆ ಬರಬಾರದಾಗಿತ್ತೇ? ನಾವೆಲ್ಲರೂ ಒಳಗೇ ಇದ್ದೆವಲ್ಲಾ..."

ವಿಲ್ಲಿಯ ಮುಖದಲ್ಲಿ ಅದೇ ನಸುನಗೆ "ಆದರೂ ನಿಮ್ಮೆಲ್ಲರ ಧ್ವನಿಯನ್ನು ಕೇಳಲು ಸಾಧ್ಯವಾಯಿತು. ಅದು ನನ್ನ ಸಂಕಟವನ್ನು ಬಹಳಷ್ಟು ಶಮನಗೊಳಿಸಿತು. ಆ ಮನೆಯಸುತ್ತಾ ನಾನು ಹೆಜ್ಜೆಯಿರಿಸದ ನೆಲವೇ ಇಲ್ಲ. ನಾನು ಮತ್ತೆ ಅದೇ ನೆಲದ ಮೇಲೆ ನಡೆದಾಡುವಾಗ ನನಗುಂಟಾದ ಭಾವನೆಗಳನ್ನು ಹೇಗೆ ವ್ಯಕ್ತ ಪಡಿಸುವುದು... ನೀವೆಲ್ಲಾ ಸಂತೋಷವಾಗಿರುವುದನ್ನು ಅರಿತು ಸಮಾಧಾನವಾಯಿತು."

ಸೀಸಾನ್ ಮಗನ ಮಾತು ಮುಗಿಯುವ ಮೊದಲೇ ತಕ್ಷಣ ಹೇಳಿದರು. "ಇಲ್ಲ, ನೀನು ತಿಳಿದುಕೊಂಡಿರುವ ಹಾಗೆ ನಾವು ಸಂತೋಷವಾಗಿಲ್ಲ. ನೀನಿಲ್ಲದಿರುವುದು ಎಲ್ಲರಿಗೂ...

"ಅಪ್ಪಾ, ನನ್ನನ್ನು ಸಂತೋಷ ಗೊಳಿಸಲು ಪ್ರಯತ್ನಿಸಬೇಡಿ. ನನ್ನ ಅಂತ್ಯ ಸಮೀಪಿಸಿಂದು ನನಗೆ ಖಚಿತವಾದ ನಂತರ ವಷ್ಟೇ ನಾನು ನಿಮ್ಮ ಮಗನೆಂಬುದನ್ನು ಇಲ್ಲಿನವರಿಗೆ ತಿಳಿಸಿದ್ದು ಇಲ್ಲದಿದ್ದಲ್ಲಿ ನಾನು ತಿಳಿಸುತ್ತಲೇ ಇರಲಿಲ್ಲ"

ಸೀಸಾನ್ ಮೌನವಾಗಿದ್ದರು. ವಿಲ್ಲಿಯ ಬಾಲ್ಯದ ಘಟನೆಗಳ ನೆನಪಿನಲ್ಲಿ ತಲ್ಲೀನರಾಗಿದ್ದರು. ವಿಲ್ಲಿ ಹುಟ್ಟಿದಾಗ ಅವನನ್ನು ಎದೆಗಪ್ಪಿಕೊಂಡು ಮುದ್ದಾಡಿದ್ದು ಮಗನ ಭವಿಷ್ಯದ ಬಗ್ಗೆ ಕನಸುಗಳನ್ನು ಕಟ್ಟಿದ್ದು ಅವನು ಬೆಳೆದು ದೊಡ್ಡವನಾದದ್ದು ಟ್ರಿಪ್ಸ್‌ನಲ್ಲಿ ಅವನು ತನ್ನನ್ನು ಸೋಲಿಸಿದ್ದು ಕಾಡು ಬಾತು ಬೇಟೆಗೆಂದು ಹೋದಾಗ ನನಗೇನೂ ಸಿಗದೆ ಅವನಿಗೆ ಮಾತ್ರ ಎರಡು ಪ್ರಾಣಿಗಳು ಸಿಕ್ಕಿದ್ದು.... ಆಹಾ! ಆ ದಿನಗಳು ಅದೆಷ್ಟು ಅಪ್ಯಾಯಮಾನವಾಗಿದ್ದವು ಅಪಾರ ಉತ್ಸಾಹವನ್ನು ಭಾವನೆಗಳ ಮಹಾಪೂರವನ್ನು ನೀಡಿದ ಆ ದಿನಗಳು ಇನ್ನೆಲ್ಲಿ ಮತ್ತೆ ಬರುತ್ತವೆ?"

ಮಗನ ದನಿಯಿಂದ ನೆನಪುಗಳ ಕೊಂಡಿ ಕಳಚಿಕೊಂಡಿತು"

"ಅಪ್ಪಾ"

"ಅಪ್ಪಾ, ನಾನು ಸಾಯಲು ಬಯಸುವುದಿಲ್ಲ, ದಯವಿಟ್ಟು ಇದನ್ನು ನಂಬಿ. ನಾನು ಮಾತ್ರವಲ್ಲ, ನನ್ನ ಸಂಗಾತಿಗಳು ಯಾರೂ ಸಾವನ್ನು ಇಷ್ಟಪಡುವುದಿಲ್ಲ. ಯಾಕೆಂದರೆ ಈ ದೇಶಕ್ಕಾಗಿ ನಾವು ಮಾಡಬೇಕಾಗಿರುವ ಕೆಲಸಗಳು ಬೇಕಾದಷ್ಟಿವೆ. ಆದರೆ ನಮಗೆ ಸಮಯವೇ ಸಾಕಾಗುತ್ತಿಲ್ಲ. ಎಷ್ಟೋ ವಿಷಯಗಳು ನಿಮಗೆ ತಿಳಿಯದಿರಬಹುದು. ದೇಶದಲ್ಲಿ ಏನೇನೋ ನಡೆಯುತ್ತಿರುತ್ತದೆ.

ಪತ್ರಿಕೆಗಳು ಸತ್ಯಗಳನ್ನು ಮರೆ ಮಾಚಿಬಿಡುತ್ತವೆ. ಬರೀ ಸುಳ್ಳುಗಳನ್ನೇ ಪ್ರಚಾರ ಮಾಡುತ್ತಿರುತ್ತವೆ."

ಮಗನ ಮುಖದತ್ತ ಬಾಗಿ ಸೀಸಾನ್ ಹೇಳಿದರು:

" ಈ ಮಾತನ್ನು ಸದ್ಯಕ್ಕೆ ನಿಲ್ಲಿಸೋ ನೀನು ಜೀವಂತವಾಗಿರುವದನ್ನೇ ನಾನು ಅಮ್ಮ ತಮ್ಮ ತಂಗಿಯರೆಲ್ಲಾ ತೀವ್ರವಾಗಿ ಬಯಸುತ್ತೇವೆ. ಡಿಮ್ಮಿ ಸಹಾ ನಿನ್ನ ಬಗ್ಗೆಯೇ ಕೇಳುತ್ತಿರುತ್ತಾನೆ. ನಾವು ಅವನಿಗೆ ನಿನ್ನ ಬಗ್ಗೆಯೇ ಏನೇನೋ ಸತ್ಯವನ್ನು ಮರೆ ಮಾಚಲು ಪ್ರಯತ್ನಿಸುತ್ತಿರುತ್ತೇವೆ. ಆದರೂ ಅವನು ಈ ಚಿಕ್ಕ ವಯಸ್ಸಿನಲ್ಲೇ ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದಾನೆ... (ಸೀಸಾನ್ ಧೀರ್ಘ ನಿಟ್ಟುಸಿರು ಬಿಟ್ಟರು) ಮಗನೇ ನನಗೊಂದು ಸಹಾಯ ಮಾಡುವೆಯಾ?"

"ನಾನು ಏನು ಮಾಡಲಿ ಅಪ್ಪ"

"ಜಾಮಿ ಮತ್ತು ಬೇತ್‌ರ ಕುರಿತು ಹೇಳುತ್ತಿದ್ದೇನೆ. ಜಾಮಿಗೆ ಇಪ್ಪತ್ತೊಂದು ವರ್ಷಗಳಾಗುತ್ತಿದೆ. ಬೇತ್‌ಗೆ ಹತ್ತೊಂಬತ್ತು ವರ್ಷ.... (ಸೀಸಾನ್‌ರ ದನಿ ನಡುಗುತ್ತದೆ) ಅವರುಗಳೂ ಸಹ ನಿನ್ನಂತೆಯೇ ನಮ್ಮನ್ನು ತೊರೆದು ಹೋಗಬಹುದೇನೋ ಎಂಬ ಭಯ ನಮ್ಮನ್ನು ಆವರಿಸಿಕೊಂಡಿದೆ."

ವಿಲ್ಲಿಯ ಮುಖದಲ್ಲಿ ಬೆಳಕೊಂದು ಮಿಂಚಿತು.

"ಅವರೂ ಸಹ? ನಿಮಗೆ ಹೇಗಪ್ಪಾ ಗೊತ್ತಾಯಿತು?"

ತಲೆಯಾಡಿಸುತ್ತ ಸೀಸಾನ್ ಹೇಳಿದರು:

"ಅವರು ನನಗೇನು ಹೇಳಲಿಲ್ಲ ಆದರೂ ನನ್ನ ಒಳ ಮನಸ್ಸು ಅದನ್ನು ಗ್ರಹಿಸಿದೆ. ನೀನು ಮನೆ ಬಿಟ್ಟು ಹೋಗುವಾಗ ಹೇಗೆ ವರ್ತಿಸಿದೆಯೋ ಅದೇ ರೀತಿಯಲ್ಲೆ ಅವರೂ... ಅಮ್ಮನೂ ನಾನೂ ಚಿಂತೆಯಿಂದ ಬೇಯುತ್ತಿದ್ದೇವೆ.

ವಿಲ್ಲಿಯ ಮುಖ ಪ್ರಕಾಶಮಾನವಾಯಿತು "ನಮ್ಮೆಲ್ಲರನ್ನೂ ನೀವು ಕಳೆದುಕೊಳ್ಳುತ್ತೀರಿ ಅಪ್ಪ. ಕಾಲದ ಪ್ರಕ್ರಿಯೆ. ಅದನ್ನು ಯಾರೂ ತಡೆಯಲಾಗುವುದಿಲ್ಲ ಕೊನೆಯಲ್ಲಿ ಉಳಿಯುವವರು ನೀವು ಮತ್ತು ಅಮ್ಮ ಇಬ್ಬರೇ ಆದರೆ ನನ್ನಂತಲ್ಲದೆ ಇತರ ಮಕ್ಕಳು ತುಳಿಯಲಿರುವ ಹಾದಿಯನ್ನು ನಿಮ್ಮಿಂದ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಧೈರ್ಯವಾಗಿರಿ ಅಪ್ಪ. ನಿಮಗೇ ಗೊತ್ತಿದೆಯಲ್ಲ ಅಮ್ಮನ ಶಾಲಾಗೆಳತಿಯೊಬ್ಬಳ ಮೂವರು ಮಕ್ಕಳೂ ಅಪ್ಪಟ ಸನ್ಯಾಸಿಗಳಾಗಿ ಬಿಟ್ಟಿದ್ದಾರೆ. ಹೊಸ ತಲೆಮಾರಿಗೆ ಬದುಕು ಸ್ವೀಕರಿಸಲಾಗದಷ್ಟು ಕಹಿಯಾಗಿ ಬಿಟ್ಟಿದೆ. ಅವರುಗಳು ವಿರಕ್ತಿಯಿಂದ ಸನ್ಯಾಸಿಗಳಾಗುತ್ತಿದ್ದಾರೆ ಆದರೆ ನಾವಾದರೋ ಬದುಕಿನಲ್ಲಿ ಅಪಾರ ಭರವಸೆಯಿಟ್ಟು ಮುನ್ನಡೆಯುತ್ತಿದ್ದೇವೆ"

"ನೀನು ಸಾಯಬಾರದು ಅದೇ ನನ್ನ ಆಸೆ ಆದರೆ ನಿನ್ನ

ಮಾತಿ ಈ ಜಗತ್ತಿನ ಬಗ್ಗೆ ತಿಳಿದುಕೊಳ್ಳುವಂತಹ ವಿದ್ಯಾಭ್ಯಾಸವನ್ನು ನನಗೆ ನೀಡಿದ್ದೀರಿ ಅದಕ್ಕಾಗಿ ನಾನು ನಿಮಗೆ ಕೃತಜ್ಞತೆ ಸಲ್ಲಿಸಬೇಕು. ವಿದ್ಯೆಯೇ ನನ್ನ ಕಣ್ಣುಗಳನ್ನು ತೆರೆಸಿ ಬೆಳಕನ್ನು ನೀಡಿತು. ನಾವು ಎಂತಹ ಅಸಹನೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಅರಿತು ಕೊಂಡೆ".

"ಮಗನೇ ಇನ್ನೂ ಧೀರ್ಘಾಯುಷ್ಯದೊಂದಿಗೆ ನೀನು ಬದುಕಬೇಕು"

"ಏಕಪ್ಪಾ ಈ ಘೋರ ನರಕವನ್ನು ಕಾಣುವುದಕ್ಕಾಗಿಯೇ? ದೇಶದಲ್ಲಿ ಎಲ್ಲವೂ ಚಿಂತಾಜನಕ ಸ್ಥಿತಿಯಲ್ಲಿದೆ ಮುಖಂಡರು ಗಳೆಂದು ಹೇಳಿಕೊಳ್ಳುವವರೆಲ್ಲಾ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ನನಗೆ ತುಂಬಾ ದುಃಖವಾಗುತ್ತಿದೆ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ನಾವಿಬ್ಬರೂ ಬೇರೆ ಬೇರೆ ದಿಕ್ಕುಗಳಲ್ಲಿದ್ದೇವೆ."

ತಮ್ಮ ಮಗ ಬದುಕ ಬೇಕೆಂಬುದನ್ನೇ ಮತ್ತೆ ಮತ್ತೆ ಸೀಸಾನ್ ಪುನರುಚ್ಚರಿಸಿದರು. ಏಕೆಂದರೆ ಇನ್ನೂ ಕೆಲವೇ ನಿಮಿಷಗಳಲ್ಲಿ ಅವರು ಮಗನಿಂದ ಅಗಲಿ ಹೋಗುಬೇಕಿತ್ತು.

"ನಾಳೆ ನಾವು ಬರುವಾಗ ನಿನಗೇನು ತರಬೇಕು ಎಂಬುದನ್ನು ತಿಳಿಸು ಮಗನೇ"

"ನೀವು ಬರುವುದನ್ನು ನಾನು ನಿರೀಕ್ಷಿಸುವುದಿಲ್ಲ ಅಪ್ಪಾ. ನಾನು ಸತ್ತ ನಂತರ ನಿಮಗೆ ಅವರು ಸುದ್ದಿಯನ್ನು ಕೊಡಬಹುದೆಂದುಕೊಂಡಿದ್ದೆನೆ. ನನ್ನ ನಾಡಿ ಮಿಡಿತ ಸ್ತಬ್ಧವಾಗುವ ಕೊಂಚ ಮೊದಲು ನಿಮ್ಮ ಬಗ್ಗೆ ತಿಳಿಸಬೇಕೆಂದುಕೊಂಡಿದ್ದೆ ಆದರೂ ನಿಮ್ಮನ್ನು ಅಮ್ಮ, ತಂಗಿ, ತಮ್ಮಂದಿರನ್ನು ನೋಡಬೇಕೆಂದು ಆಸೆಯಾಯ್ತು ಅದರಿಂದಲೇ ನಾನು ಮೊದಲೇ...."

"ಚಿಂತಿಸಬೇಡ ಮಗನೇ ಶೈನಿನಲ್ಲೋ ಹೆಲಿಕಾಪ್ಟರಿನಲ್ಲೋ ಅದೂ ಸಾಧ್ಯವಾಗದಿದ್ದರೆ ರಾತ್ರೋ ರಾತ್ರಿ ಕಾರಿನಲ್ಲಾಗಲೀ ಹೇಗಾದರೂ ನಾಳೆ ಮುಂಜಾನೆ ಇಲ್ಲಿ ತಲುಪುತ್ತೇವೆ."

"ಬೇಡಪ್ಪಾ" ನಿಟ್ಟುಸಿರಿನೊಂದಿಗೆ ವಿಲ್ಲಿ ಹೇಳಿದ "ದಯವಿಟ್ಟು ಅವರನ್ನು ಕರೆತರಬೇಡಿ ನನ್ನ ಈ ಸ್ಥಿತಿಯನ್ನು ಅವರು ನೋಡುವುದು ಬೇಡ. ಆದರೆ ನಿಮ್ಮದೇ ಬೇರೆ ನೀವು ಡಾಕ್ಟರ್ ಇಂಥದ್ದನ್ನೆಲ್ಲಾ ಬಹಳ ನೋಡಿದ್ದೀರಿ.

"ನಾನು ನಿನ್ನ ತಂದೆ. ಜಾಮಿ ಮತ್ತು ಬೇತ್‌ರನ್ನು ಕರೆದುಕೊಂಡೇ ಬರುತ್ತೇನೆ. ಆಗ ಮಾತ್ರ ಅವರು ತಮಗೆ ಒದಗಲಿರುವ ಆ ಕಷ್ಟವನ್ನು ಅರಿಯುವುದು ಸಾಧ್ಯ

"ನಿಮ್ಮ ತಿಳುವಳಿಕೆ ತಪ್ಪು ಅಪ್ಪಾ ಈ ಎಲ್ಲಾ ಅಪಾಯಗಳನ್ನೂ ಎದುರಿಸಲಿರುವ ಸ್ಥಿತಿಯನ್ನು ನಿರೀಕ್ಷಿಸಿಯೇ ಅವರು ಹೋರಾಟದಲ್ಲಿ ಧುಮುಕಿದ್ದಾರೆ. ನನ್ನನ್ನೇ ತೆಗೆದುಕೊಳ್ಳಿ ಆರಂಭದಿಂದಲೇ ಎಂತಹ ಕಷ್ಟಗಳನ್ನಾದರೂ ಸಹಿಸಬಲ್ಲೆನೆಂಬ ಆತ್ಮ ವಿಶ್ವಾಸದಿಂದಲೇ ನಾನು ಹೋರಾಟದಲ್ಲಿ ಇರುವೆ. ನನ್ನನ್ನು ನಂಬಿ."

ಸೀಸಾನ್ ಅಧೀರರಾದರು. ಅವರ ನೋಟ ಕಿಟಕಿಯಿಂದಾಚೆ ನೆಟ್ಟಿತು. ದಟ್ಟ ಕಾಡುಗಳು ಅದರಾಚೆಗಿನ ಬೆಟ್ಟ ಗುಡ್ಡಗಳು

ತಮ್ಮ ತಂಗಿಗೆ ಇಂತಹ ಸ್ಥಿತಿ ಒದಗಬಾರದು..."

"ನನ್ನಂತಹ ಸ್ಥಿತಿಯೇ ? ದೇಶದ ಮುಖಂಡರೆಲ್ಲಾ ಭ್ರಷ್ಟ ರಾಗಿರುವ ಸ್ಥಿತಿಯೇ?"

ಸೀಸಾನರ ಕಣ್ಣುಗಳು ಮಂಜಾದವು "ಮಗನೇ ನಾನೊಬ್ಬ ತಂದೆ"

"ನನ್ನ ಬಗ್ಗೆ ನೀವು ಹೆಮ್ಮೆ ಪಡಬೇಕು ಅದೇ ನನ್ನ ಆಸೆ. ಆದರೆ ನಿಮ್ಮ ಪದವಿಗೆ ನಿಮ್ಮ ಮಿಲಿಟರಿ ಪೋಷಾಕಿಗೆ ನಾನು ಗೌರವ ನೀಡಬೇಕು.... ನಾನಿದನ್ನು ಹೇಳಬಾರದೆಂದುಕೊಂಡರೂ ಹೇಳಲೇ ಬೇಕಾಗಿದೆ ನನ್ನಿಂದ ನಿಮಗೆ ನೋವಾಗಿದೆ. ನಿಮ್ಮ ಪದವಿ ಬಡ್ತಿಗೆ ನಾನು ತೊಡಕಾಗಿರಬಹುದು. ಮಿಲಿಟರಿಯಲ್ಲಿರುವವರು ನಂಬಿಕೆಯನ್ನು ಹೆಚ್ಚಾಗಿ ನಿರೀಕ್ಷಿಸುತ್ತಾರೆ. ನನ್ನಿಂದಾಗಿ ಅವರು ನಿಮ್ಮನ್ನು ನಂಬದೆಯೂ ಇರಬಹುದು ಆದರೂ ನೀವು ನನ್ನ ಬಗ್ಗೆ ಕೊಂಚ ಕೂಡ ನಾಚಿಕೆಪಟ್ಟು ಕೊಳ್ಳಬೇಕಾಗಿಲ್ಲ. ಅದೇ ರೀತಿಯಲ್ಲಿ ಜಾಮಿ ಮತ್ತು ಬೇತ್ ಯಾವುದು ಸರಿಯೋ ಅದನ್ನೇ ಮಾಡುತ್ತೇನೆ."

"ನಿನ್ನ ಬಗ್ಗೆ ಅವಮಾನ ಪಟ್ಟುಕೊಳ್ಳುವಂತಹದೇನೂ ಇಲ್ಲವಲ್ಲ. ಆದರೆ ಜಾಮಿ - ಬೇತ್ ಇವರುಗಳನ್ನು ನಾನು ಕಳೆದು ಕೊಳ್ಳಲು ತಯಾರಿಲ್ಲ. ದಯವಿಟ್ಟು ನೀನು ಅವರೊಂದಿಗೆ ಮಾತಾಡು. ಬೇತ್ ತುಂಬಾ ಚಿಕ್ಕವಳು ಇನ್ನೂ ಹತ್ತೊಂಬತ್ತು ವರ್ಷ ಕೂಡ ಆಗಿಲ್ಲ."

"ವಯಸ್ಸು ಮುಖ್ಯವಲ್ಲ ಅಪ್ಪ. 19 ವಯಸ್ಸಿನಲ್ಲಿ ಬೇಕಾದಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯ. ಅವರ ಹತ್ತಿರ ಈ ಬಗ್ಗೆ ನಾನು ಮಾತಾಡುವುದು ಸಾಧ್ಯವೇ ಇಲ್ಲ. ನನಗಾಗಿರುವ ಅವಸ್ಥೆಯನ್ನು ತಿಳಿದೂ ಅದೇ ದಾರಿಯಲ್ಲೇ ಅವರು ಹೋಗಲು ಬಯಸುತ್ತಾರೆಂದರೆ ನಾನು ಹೇಳಲು ಏನು ಉಳಿದಿದೆ? ಬೇತ್‌ಳಂತಹ ಹುಡುಗಿಯರು ನಮ್ಮ ಗುಂಪಿನಲ್ಲಿ ಬಹಳ ಇದ್ದಾರೆ. ಅವರೆಲ್ಲಾ ಸ್ವಯಂ ಇಚ್ಛೆಯಿಂದಲೇ ನಮ್ಮ ಆಂದೋಲನದಲ್ಲಿ ಭಾಗವಹಿಸುತ್ತಿದ್ದಾರೆ. ಅವರೇ ಅರ್ಥ ಮಾಡಿಕೊಳ್ಳುತ್ತಾರೆ ತಾವು ಒಂಟಿಯಲ್ಲ ಎಂಬುದನ್ನು....

ತಮ್ಮ ಮಗನ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡರು ಸೀಸಾನ್.

"ಹಿಂದೆ ನೀನು ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದುದು. ಭಾಷಣಗಳಿಗೆ ಹೋಗುತ್ತಿದ್ದುದು ಇವೆಲ್ಲಾ ನನಗೆ ತಿಳಿಯುತ್ತಿತ್ತು. ಈ ಬಗ್ಗೆ ಚರ್ಚಿಸಲು ನಾನು ಇಚ್ಛಿಸುವುದಿಲ್ಲ. ನಾನು ನಿನ್ನನ್ನು ನೋಡಲೆಂದೇ ಬಂದಿದ್ದೇನೆ. ಈ ಪರಿಸ್ಥಿತಿಯಲ್ಲೂ ನಿನಗೇನಾದರೂ ಸಹಾಯ ಮಾಡಲು ಸಾಧ್ಯವೇ ಎಂದು ಪ್ರಯತ್ನಿಸಲು."

"ನನಗೇನೂ ಬೇಕಾಗಿಲ್ಲ ಅಪ್ಪ. ನೀವು ಬಂದಿರುವುದೇ ನನಗೆ ತುಂಬಾ ಸಂತೋಷವಾಗಿದೆ"

"ವಿಲ್ಲಿ ನೀನು ಜೀವಂತವಾಗಿರಬೇಕು ಸಾಯಬಾರದು."

"ಅಪ್ಪ ಚಿಂತಿಸಬೇಡಿ. ನನ್ನನ್ನು ಬೆಳಸಿ ದೊಡ್ಡವನನ್ನಾಗಿ

ಯಾವ್ಯಾವುದು ಅಪಾಯಕರ ಪ್ರದೇಶಗಳಿಂದು ವೈಮಾನಿಕ ಹೇಳಿದ್ದನೋ ಅವೆಲ್ಲಾ ನೆನಪಿಗೆ ಬಂತು. ದೂರದಲ್ಲಿ ತಬ್ಬ ಹೆಲಿಕಾಪ್ಟರ್ ಹೊರಡುವ ಮುನ್ನ ಉಂಟಾಗುವ ಶಬ್ದ ಅವರನ್ನು ಕಲ್ಪನೆಯಿಂದ ವಾಸ್ತವಕ್ಕೆ ಕರೆತಂದಿತು.

ತನ್ನ ಜೀವಮಾನದಲ್ಲಿ ಎಂದಿಗೂ ಮರೆಯಲಾಗದ, ತನ್ನನ್ನು ಸದಾ ಚುಚ್ಚುತ್ತಲೇ ಇರುವಂತಹ ಈ ಕೊನೆಯ ಭೇಟಿಯಿಂದ ಅಗಲುವ ಗಳಿಗೆ ಹತ್ತಿರವಾಗುತ್ತಿರುವುದನ್ನು ಸೀಸಾನ್ ಗ್ರಹಿಸಿದರು. "ರಾತ್ರಿ ಒಂಬತ್ತಕ್ಕೆಲ್ಲಾ ಮನೆಯನ್ನು ತಲುಪುತ್ತೇನೆ" ತಮ್ಮಲ್ಲೇ ಹೇಳಿಕೊಂಡರು.

ಮಗನಿಂದ ಅಗಲುವುದು ಅವರಿಗೆ ತುಂಬಾ ಕಷ್ಟವಾಯಿತು. ತಮ್ಮ ಮನೋಭಾವನೆ ತುಂಬಾ ಕಷ್ಟವಾಯಿತು. ತಮ್ಮ ಮನೋವೇದನೆಯನ್ನು ಅದುಮಿಟ್ಟು ಅವರು ಮಗನನ್ನು ಬಾಚಿ ತಬ್ಬಿಕೊಂಡರು.

"ಒಳ್ಳೆಯದಪ್ಪಾ, ಹೋಗಿ ಬನ್ನಿ" ವಿಲ್ಲಿ ತಂದೆಯನ್ನು ಬೀಳ್ಕೊಡುತ್ತಾ ನುಡಿದ.

ಸೀಸಾನ್ ಎದ್ದು ನಿಂತರು. ತಮ್ಮ ಕಣ್ಣೀರು ತುಂಬಿದ ಕಣ್ಣುಗಳನ್ನು ಮಗನಲ್ಲಿ ನೋಡಿಬಿಡುವನೋ ಎಂದು ತಲೆ ತಗ್ಗಿಸಿ ಬಾಗಿಲತ್ತ ವೇಗವಾಗಿ ಹೆಜ್ಜೆ ಹಾಕಿದರು.





ಪುಟ 20ಂದ

ಬಿ.ಎನ್. ಕಂಬಳಿ) ಹರಿಹರ ಸಮುದಾಯದ ನಾವು ಸಾಯುವುದಿಲ್ಲ. ಮೈಸೂರು ಸಮುದಾಯದ ಒಂದು ಹತ್ಯೆಯ ಸುತ್ತಮುತ್ತ (ನಿಃ ರಮೇಶ್. ಜನಾರ್ಧನ್) ಮಂಗಳೂರು ಸಮುದಾಯದ ಆಲೀಗರ್ (ನಿಃ ಸದಾನಂದ) ದಾವಣಗೆರೆ ಸಮುದಾಯದ ಜನತೆ (ನಿಃ ಇಸ್ಮಾಯಿಲ್ ಸಾಬ್ ಎಲಿಗಾರ) ಕುಷ್ಟಗಿ ಸಮುದಾಯದ ಒಡನಾಡಿ. ಕೆ.ಜಿ.ಎಫ್. ಸಮುದಾಯದ ಹಲ್ಲಾ ಬೋಲ್ (ತಮಿಳು ನಿಃ ಚೊಕ್ಕಲಿಂಗಂ) ಪ್ರದರ್ಶಿಸಲಾಯಿತು. ಇಡೀ ಉತ್ಸವ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಪ್ರೇಕ್ಷಕರಿಗೆ ಒಂದು ರೀತಿಯಲ್ಲಿ ರಂಗಶಿಬಿರವೇ ಆಯಿತು.

ಸಫ್ದರ್ ಹಷ್ಮಿ 'ಬೀದಿನಾಟಕ ಪ್ರೋಸೀನಿಯಂ ರಂಗನಾಟಕಗಳ ವಿರುದ್ಧ ನಡೆದಿರುವ ಕ್ರಿಯೆಯಲ್ಲ. ರಂಗನಾಟಕಗಳಂತೆಯೇ ಬೀದಿ ನಾಟಕಕ್ಕೂ ಗಟ್ಟಿ ವಸ್ತು ಉತ್ತಮ ಬಂಧ ಹಾಗೂ ಅಭಿನಯದಲ್ಲಿ ವ್ಯಕ್ತಿಪರತೆ ಬೇಕು. ಬೀದಿನಾಟಕ ಸಮೂಹದಿಂದ ಸಮೂಹಕ್ಕಾಗಿ ತಿದ್ದುವುದು ಇದರ ಮುಖ್ಯ ಕೆಲಸ' ಎನ್ನುತ್ತಿದ್ದರು.

'ತಿದ್ದುವುದು' ಎಂಬುದರ ಬಗ್ಗೆಯೇ ಬೀದಿನಾಟಕದ ಆರಂಭದ ದಿನಗಳಿಂದಲೂ ಅವ್ಯಾಹತವಾಗಿ ಚರ್ಚೆ ನಡೆದು ಬಂದಿದೆ. 'ಅಕ್ಷರ ಮಾಧ್ಯಮದ ಮೂಲಕ ತಿದ್ದುವುದು ಪೂಜ್ಯವಾದರೆ ನಾಟಕದ ಮೂಲಕ ತಿದ್ದುವುದು ಏಕೆ ಮೈಲಿಗೆಯಾಗಬೇಕು' ಎನ್ನುತ್ತದೆ ಸಮುದಾಯ.



ಗುಂಡು ನಿರೋಧಕ
ಗ್ಲ್ಯಾಸಿನ ಮನೆಯಲಿ
ಕುಂತ ರಾಜೀವ
ಕಂಡ ಕನಸಾದ
ಇಪ್ಪತ್ತೊಂದನೆ ಶತಕದ ಚಿತ್ರ ....

ಆಕಡೆ ತಿರುಗಿದ
ಮುಖಗಳ ಹಿಂದೆ
ಸುಣ್ಣ ಬಳಕೊಂಡ
ತಿರುಪತಿ ತಲೆಗಳ
ಕನ್ನಡಿಯಲ್ಲಿ ಕಾಣುವದೇನೋ....

ನೋಡಿದಿರಾ ? ನೀವ್ ನೋಡಿದಿರಾ ?

ಭಾರತ ಮತ್ತು ನೇಪಾಳ ಸಂಬಂಧಗಳು ಹದಗೆಡುತ್ತಿರುವುದು ಇತ್ತೀಚಿನ ಒಂದು ಪ್ರಮುಖ ಸುದ್ದಿ. ಸಾಮ್ರಾಜ್ಯಶಾಹೀ ಸುದ್ದಿ ಮಾಧ್ಯಮಗಳು ಇದರ ಬಗ್ಗೆ ವಿಶ್ವಾದ್ಯಂತ ಅಪ ಪ್ರಚಾರ ನಡೆಸುತ್ತಿವೆ. ಈ ಸಮಸ್ಯೆಯ ಮೂಲವೇನು ? ಇದರ ಪರಿಹಾರ ಹೇಗೆ ಸಾಧ್ಯ ? ಸಿ.ಪಿ.ಐ (ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಬಿ.ಟಿ. ರಣದಿವೆಯವರು "ಪೀಪಲ್ಸ್ ಡೆಮಾಕ್ರಸಿ" ಪತ್ರಿಕೆಯಲ್ಲಿ ಬರೆದ ಲೇಖನದ ಈ ಸಂಗ್ರಹಾನುವಾದ ಪರಿಶೀಲಿಸುತ್ತದೆ.

ಭಾರತ - ನೇಪಾಳ ಸಂಬಂಧ

ಸಾಮ್ರಾಜ್ಯಶಾಹೀ ಕುತಂತ್ರಗಳ ಬಗ್ಗೆ ಎಚ್ಚರ ಅಗತ್ಯ

ಭಾರತ-ನೇಪಾಳ ಸಂಬಂಧಗಳು ಹಠಾತ್ತಾಗಿ ಕಹಿಗೊಳ್ಳುತ್ತಿವೆ. ನಮ್ಮ ಇತರ ನೆರೆದೇಶಗಳೊಡನೆ ಆದುದು ಮರುಕಳಿಸುವ ಲಕ್ಷಣ ತೋರುತ್ತಿದೆ. ನಮ್ಮೆರಡು ದೇಶಗಳ ನಡುವಿನ ಸಧ್ಯದ ಸಂಬಂಧಗಳ ಬಗೆಗೆ ಹೊಗೆಯಾಡುತ್ತಿದ್ದ ಅಸಂತೃಪ್ತಿ ಈಗ ಒಂದು ಗಂಭೀರ ಸಮಸ್ಯೆಯಾಗಿ ಬೆಳೆದಿದೆ. ನೇಪಾಳದಲ್ಲಿ ನೈರುತ್ಯ ಭಾವೋನ್ಮಾದ ಎಬ್ಬಿಸುವ ಒಂದು ಗಂಭೀರ ಸಮಸ್ಯೆಯಾಗಿ ಬೆಳೆದಿದೆ.

ನೇಪಾಳದಲ್ಲಿ ಹೊಸ ವರ್ಗ ಹಿತಾಸಕ್ತಿಗಳು ಬೆಳೆದು ದೇಶ ಒಂದು ಆಧುನಿಕ ಪ್ರಭುತ್ವವಾಗಿ ಮೂಡಿ ಬರುವ ಪ್ರಕ್ರಿಯೆಯ ಒಂದು ಭಾಗವಿದು. ಪಾಕಿಸ್ತಾನದ ಲಷ್ಕರಿ ಶಾಸನ ಸರ್ವಾಧಿಕಾರಿ ಝಿಯಾರ ಘೋಷ ವಾಕ್ಯವನ್ನೇ ಹೋಲುವ 'ಪಕ್ಷ ರಹಿತ ಪ್ರಜಾಪ್ರಭುತ್ವದ' ಮಂತ್ರ ಹೇಳುವ ನೇಪಾಳದ ಪ್ರಾತಿನಿಧಿಕವಲ್ಲದ ಸರಕಾರವೊಂದು ಸನ್ನಿವೇಶದ ದುರ್ಲಾಭ ಪಡೆಯಲು ಪ್ರಯತ್ನಿಸುತ್ತಿದೆ. ಇವೆಲ್ಲದರ ಹಿಂದೆ ವಿಶ್ವ ಸಾಮ್ರಾಜ್ಯ ಶಾಹೀ ಏಜೆಂಸಿಗಳ ಪ್ರತಿಗಾಮೀ ಕೈಗಳ ಇರವನ್ನು ಕೂಡಾ ಯಾರೂ ಮರೆಯಬಾರದು. ಯಾಕೆಂದರೆ ಈ ಶಕ್ತಿಗಳ ಜಾಗತಿಕ ಪಿತೂರಿಗಳಿಗೆ ತೃತೀಯ ಜಗತ್ತಿನ ದೇಶಗಳ ನಡುವೆ ಕಲಹ, ಸೆಳೆತ ಅಗತ್ಯ ಸಂಗತಿ.

ವಾಸ್ತವವಾಗಿ ದಿನಗಳೆದಂತೆ ಈ ಅಂಶ ಹೆಚ್ಚೆಚ್ಚು ಪ್ರಬಲಗೊಳ್ಳುತ್ತಿದೆ.

ಭಾರತ - ನೇಪಾಳ ನಡುವೆ ತಿಕ್ಕಾಟದ ತಕ್ಷಣದ ಕಾರಣ 1978 ರಲ್ಲಿ ಸಹಿ ಹಾಕಲ್ಪಟ್ಟು ಈಗ ತನ್ನ ಅವಧಿ ಮುಗಿಸಿರುವ ವ್ಯಾಪಾರ ಮತ್ತು ಸಾಗಣೆ ಸಂಧಿ. ಆದರೆ ಈಗ ಇದರ ಸ್ಥಾನದಲ್ಲಿ ಹೊಸ ಸಂಧಿಯ ಬಗ್ಗೆ ಇತ್ಯರ್ಥವಾದರೂ ಇವೆರಡು ದೇಶಗಳ ನಡುವಿನ ಘರ್ಷಣೆ ಹೊಗೆಯಾಡುತ್ತಲೇ ಇರುತ್ತದೆ. ಅದಕ್ಕೆ ಪ್ರೋತ್ಸಾಹ ನೀಡುವ ಪ್ರತಿಗಾಮಿ ಶಕ್ತಿಗಳಿಗೆ ಬೇಕೆನಿಸಿದಾಗಲೆಲ್ಲಾ ಅದನ್ನು ಬೆಂಕಿಯಾಗಿಸಲು ಸಾಧ್ಯ.

ಅಸಮಾನತೆ ಹುಟ್ಟಿಸಿದ 'ಸಮಾನತೆ'

1950 ರಲ್ಲಿ ಸಹಿ ಹಾಕಿದ ಭಾರತ - ನೇಪಾಳ ಮಿತ್ರತ್ವ ಸಂಧಿಯ ಎರಡು ಕಲಮುಗಳ ಅನುಷ್ಠಾನ ನೇಪಾಳದ ಅಸಂತೋಷಕ್ಕೆ ನಿಜವಾದ ಕಾರಣ.

ಈ ಸಂಧಿಯ ಆರನೇ ಕಲಮು ಹೀಗೆನ್ನುತ್ತದೆ– "ಪ್ರತಿಯೊಂದು ಸರಕಾರವೂ ಭಾರತ ಮತ್ತು ನೇಪಾಳದ ನೆರೆಕರೆಯ ಮಿತ್ರತ್ವದ ಸಂಕೇತವಾಗಿ ಪರಸ್ಪರ ದೇಶಗಳ ರಾಷ್ಟ್ರೀಯರಿಗೆ ತನ್ನ ಪ್ರದೇಶದಲ್ಲಿ ಈ ಪ್ರದೇಶದ ಕೈಗಾರಿಕಾ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುವಂತೆ ಅವರನ್ನು ತನ್ನ ರಾಷ್ಟ್ರೀಯರಂತೆ ಪರಿಗಣಿಸುತ್ತದೆ ಹಾಗೂ ಸಂಬಂಧಪಟ್ಟ ರಿಯಾಯ್ತಿಗಳನ್ನು, ಕಾಂಟ್ರಾಕ್ಟುಗಳನ್ನು ನೀಡುತ್ತದೆ".

ಏಳನೇ ಕಲಮು " ನಿವಾಸ, ಆಸ್ತಿ ಬಡತನ, ವ್ಯಾಪಾರ-ವಾಣಿಜ್ಯದಲ್ಲಿ ಭಾಗವಹಿಸುವಿಕೆ, ಒಂದೆಡೆಯಿಂದ ಇನ್ನೊಂದೆಡೆಗೆ ಚಲನೆಯ ಸ್ವಾತಂತ್ರ್ಯ ಮತ್ತಿತರ ಇಂತಹ ವಿಶೇಷ ಸೌಲಭ್ಯಗಳನ್ನು ಒಂದು ದೇಶದ ರಾಷ್ಟ್ರೀಯರಿಗೆ ಇನ್ನೊಂದು ದೇಶದ ನೆಲದಲ್ಲಿ ಪರಸ್ಪರ ಒದಗಿಸಲು ನೇಪಾಳ ಮತ್ತು ಭಾರತಸರಕಾರ ಒಪ್ಪಿಕೊಳ್ಳುತ್ತವೆ."

ರಾಷ್ಟ್ರೀಯರೆಂದು ಕಾಣಬೇಕೆನ್ನುವ ಈ ಸಮಾನತೆಯೇ ನಿಜವಾಗಿ ನಮ್ಮೆರಡು ದೇಶಗಳ ನಡುವೆ ಬೆಳೆಯುತ್ತಿರುವ ಅಸಮಾನತೆಯ ಆಧಾರ. ಯಾಕೆಂದರೆ ಈ ಸಂಧಿಗೆ ಸಹಿ ಹಾಕಿದ ಎರಡು ದೇಶಗಳು ಸಂಪನ್ಮೂಲಗಳು, ಸಾಮಾಜಿಕ ಬೆಳವಣಿಗೆ ಮತ್ತು ಆಕಾರದಲ್ಲಿ, ಸಮಾನವಾಗಿಲ್ಲ, ಈ ಸ್ವಾತಂತ್ರ್ಯದಲ್ಲಿ, ಮುಖ್ಯ ವಿಷಯಗಳಲ್ಲೂ ರಾಷ್ಟ್ರೀಯ ಸೌಲಭ್ಯ ಪಡೆಯುವಲ್ಲಿ ಭಾರತ ಹೆಚ್ಚು ಯಶಸ್ವಿಯಾಗಿ, ನೇಪಾಳಕ್ಕೆ ಹೆಚ್ಚೆಂದರೆ ಭಾರತಕ್ಕೆ ಕೆಲಸಗಾರರನ್ನು ಕಳುಹಿಸುವ ಸೌಲಭ್ಯ ಮಾತ್ರವೇ ದೊರೆಯುವಂತಾದರೆ ಅದರಲ್ಲಿ ಆಶ್ಚರ್ಯವಿಲ್ಲ.

ಇದು ನಾಲ್ಕು ದಶಕಗಳ ಕಾಲ ಸತತವಾಗಿ ನಡೆಯಿತು. ಭಾರತಕ್ಕೆ ನೇಪಾಳದ ಕೆಲಸಗಾರರು ವಿಪುಲವಾಗಿ ದೊರೆತರು. ನೇಪಾಳದ ವ್ಯಾಪಾರ, ವಾಣಿಜ್ಯ, ಉದ್ಯಮ ಮತ್ತು ಕಸಬುಗಳನ್ನು ಬಹು ಪಾಲು ಭಾರತೀಯ ನಾಗರಿಕರೇ ನಡೆಸುವಂತಾಯಿತು. ಬೇಗನೇ ಹಣ ಸಂಪಾದಿಸುವ ಮಾರ್ಗ ಹುಡುಕುತ್ತಿದ್ದ ಭಾರತದ ಸಣ್ಣ-ದೊಡ್ಡ ವ್ಯಾಪಾರಿಗಳಿಗೆ ಇದೊಂದು ಹೊಸ ಫಲವತ್ತಾದ ಹಸುರಾದ ಗೋಮಾಳ ದೊರೆತಂತಾಯಿತು.

ಆದ್ದರಿಂದ ಈ ಅವಧಿಯಲ್ಲಿ ಭಾರತ ನೇಪಾಳಗಳ ನಡುವೆ ಅಸಮ ಸಂಬಂಧಗಳು ಸೃಷ್ಟಿಯಾದವು. ಈ ಸಂಧಿ ಮತ್ತು ನಾಲ್ಕೂ ಕಡೆಗಳಿಂದ ನೆಲ ದಿಂದಲೇ ಆವೃತ್ತವಾದ ನೇಪಾಳದ ಭೌಗೋಳಿಕ ಸನ್ನಿವೇಶದಿಂದಾಗಿ ಅದು ಆಮದು, ರಫ್ತು ಹಾಗೂ ಬಂಡವಾಳದ ಬರುವಿಕೆಗೆ ಭಾರತವನ್ನೇ ಅವಲಂಬಿಸ ಬೇಕಾಯ್ತು. ನೇಪಾಳದ ಆಮದಿನಲ್ಲಿ ಭಾರತದ ಪಾಲು 60% ರಫ್ತಿನಲ್ಲಿ 40% ಈ ಅತೀ ನಿಕಟ ಸಂಬಂಧ ಆಧುನಿಕ ಯುಗಕ್ಕೆ ಕಾಲಿಡುತ್ತಿರುವ ಒಂದು ದೇಶದ ರಾಷ್ಟ್ರೀಯ ಭಾವನೆಗಳನ್ನು ತಟ್ಟದ್ದರೆ ಅದರಲ್ಲಿ ಆಶ್ಚರ್ಯವೇನು?

ಇಂತಹ ಸಂಧಿ ಕಳೆದ ಹಲವು ವರ್ಷಗಳಲ್ಲಿ ಗಂಭೀರ ಸೆಳೆತಕ್ಕೆ ಒಳಗಾಗಿತ್ತು. ಭಾರತ ಸರಕಾರ ಇದನ್ನು ನಿರ್ಲಕ್ಷಿಸುತ್ತಾ ಬಂತು. ನೇಪಾಳ ಒಳಗೊಳಗೇ ಒಡಿಮಿಡಿ ಗೊಳ್ಳುತ್ತಾ ಸಂಧಿಯ ಶರತ್ತುಗಳನ್ನು ಉಲ್ಲಂಘಿಸಿ ಪರೋಕ್ಷವಾಗಿ ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಉದಾಹರಣೆಗೆ, ಈ ಸಂಧಿಯನ್ನು ತಾನು ನಿರಾಕರಿಸಲು ಅಗತ್ಯವಾದ ಒಂದು ವರ್ಷದ ನೋಟಿಸನ್ನು ಕೊಡದೆಯೇ ನೇಪಾಳ ಸರಕಾರ ಭಾರತದ ನಾಗರಿಕರಿಗೆ ರಾಷ್ಟ್ರೀಯ ಸ್ಥಾನಮಾನ ನಿರಾಕರಿಸಿ ಸಂಧಿಯನ್ನು ಉಲ್ಲಂಘಿಸಿತು. 1987 ರಲ್ಲಿ ಭಾರತದ ಸರಕುಗಳಿಗೆ ದೊರೆಯುತ್ತಿದ್ದ ಕರಸೌಲಭ್ಯ ಗಳನ್ನು ಹಿಂತೆಗೆದು ಕೊಂಡಿತು. ಇದರಿಂದ 1987-88ರಲ್ಲಿ ಭಾರತದ ರಫ್ತು ಅರ್ಧಕ್ಕಿಳಿಯಿತು. ಆದರೆ ಎರಡರಲ್ಲಿ ಯಾವ ದೇಶವೂ ಸಂಧಿಯನ್ನು ಅಧಿಕೃತವಾಗಿ ಕೈಬಿಡಲಿಲ್ಲ.

ದುರ್ಲಾಭ ಪಡೆಯಲಾಗುತ್ತಿದೆ.

ಇದು ಈಗಿನ ವಿವಾದದ ಹಿನ್ನೆಲೆ. ಇದನ್ನು ನಿರಂಕುಶ ರಾಜಪ್ರಭುತ್ವವನ್ನು ಪಕ್ಷರಹಿತ ಪ್ರಜಾಪ್ರಭುತ್ವವೆಂದು ಹೇಳಿ ಕೊಂಡು ತನ್ನ ಜನತೆಗೆ ಪ್ರಜಾಪ್ರಭುತ್ವ ವನ್ನು ನಿರಾಕರಿಸುತ್ತಿರುವ ನೇಪಾಳದ ಪ್ರತಿಗಾಮಿ ರಾಜಪ್ರಭುತ್ವ ತನ್ನ ದುರ್ಲಾಭಕ್ಕೆ ಬಳಸಿಕೊಳ್ಳುತ್ತಿದೆ.

ಈ ಆಳ್ವಿಕೆ ಹಾಗೂ ಅದರ ಸುತ್ತಲಿರುವ ಕೂಟ ಮತ್ತು ನೇಪಾಳೀ ಸಮಾಜದಲ್ಲಿ ಮೂಡಿಬರುತ್ತಿರುವ ಹೊಸ ಹಿತಾಸಕ್ತಿಗಳು ಭಾರತದ ವಿರುದ್ಧ ತಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಅಮೇರಿಕಾದ ಮೊರೆ ಹೋಗಲು ಕೂಡಾ ಸಿದ್ಧವಿದ್ದಾರೆ.

ನೇಪಾಳದಲ್ಲಿ ಇತ್ತೀಚೆಗೆ ಅಮೆರಿಕನ್ ಪ್ರಭಾವ ಹೆಚ್ಚುತ್ತಿದೆ. ಈ ಅಪಾಯವನ್ನು ನಿರ್ಲಕ್ಷಿಸಬಾರದು.ಯಾಕೆಂದರೆ ಇದರ ಮೊದಲ ಬಲಿ ನೇಪಾಳದ ಪ್ರಜಾ ಪ್ರಭುತ್ವವಾದಿ ಆಂದೋಲನ ವಿದೇಶೀಯರ, ಸಾಮ್ರಾಜ್ಯ ಶಾಹಿಗಳ ಪ್ರಭಾವ ಹೆಚ್ಚಿದಂತೆಈ ಆಂದೋಲನವನ್ನು ಬಗ್ಗು ಬಡಿಯಲಾಗುವದು. ಇದರೊಂದಿಗೆ ಭಾರತವನ್ನು ಮಿತ್ರತ್ವವಿಲ್ಲದ ದೇಶಗಳಿಂದ ಸುತ್ತುವರಿಯುವ ಕೆಲಸವೂ ಪೂರ್ಣವಾದಂತಾಗುವುದು. ಸಾರ್ಕ್ ಕೂಟ ಪೂರ್ಣವಾಗಿ ಭಾರತ ವಿರೋಧಿ ವೇದಿಕೆಯಾದಂತಾಗುತ್ತದೆ.

ಆದ್ದರಿಂದ ಈಗಿರುವ ಪ್ರಶ್ನೆ ಭಾರತ ನೇಪಾಳಗಳು ಹಿನ್ನೆಲೆಯಲ್ಲಿ ಪ್ರಭಾವ ಬೀರುತ್ತಿರುವ ಶಕ್ತಿಗಳನ್ನು ಅರಿತು ಈಗಿನ ವಿವಾದವನ್ನು ಇತ್ಯರ್ಥ ಮಾಡಿಕೊಳ್ಳಲಾಗುತ್ತಿದೆಯೇ ಅಥವಾ ಈ ಶಕ್ತಿಗಳು ಅಪೇಕ್ಷಿಸುವಂತೆ ಅದು ಶಾಶ್ವತ ಬಿಗುವಿನ ಸ್ಥಿತಿ ತಲುಪಲು ಬಿಡುತ್ತದೆಯೇ ಎಂಬುದೇ ಆಗಿದೆ. ಆದ್ದರಿಂದಲೇ ಈ ಪ್ರಶ್ನೆಯನ್ನು ವ್ಯಾಪಾರ-ಸಾಗಣೆಯ ಸಂಕುಚಿತ ದೃಷ್ಟಿಯಿಂದಲೇ ನೋಡಿ ಯಾರು ಅದನ್ನು ಉಲ್ಲಂಘಿಸಿದರೆಂದು ದೋಷಾರೋಪಣೆ ಮಾಡಿಕೊಳ್ಳುವುದು ಸಲ್ಲದು.

ವಾಸ್ತವ ದೃಷ್ಟಿ ಅಗತ್ಯ

1950ರ ಸಂಧಿಯ ಚೌಕಟ್ಟಿನಲ್ಲೇ ಈ ವಿವಾದದ ಇತ್ಯರ್ಥ ಕಂಡುಕೊಳ್ಳುವ ಪ್ರಯತ್ನ ಸಾಧ್ಯವಿಲ್ಲವೆಂಬುದು ಕೂಡಾ ಈಗ ಸ್ಪಷ್ಟ. ಯಾಕೆಂದರೆ ಭಾರತದ ನಾಗರೀಕರನ್ನು ವಾಣಿಜ್ಯ, ವ್ಯಾಪಾರ ಹಾಗೂ ಆಸ್ತಿ ಕುರಿತಂತೆ ರಾಷ್ಟ್ರೀಯರೆಂದು ಪರಿಗಣಿಸಲು ನೇಪಾಳದ ವಿರೋಧವಿದೆ. ಆದರೆ ಭಾರತ ಸರಕಾರ ಈ ದಿಕ್ಕಿನಲ್ಲೇ ಪ್ರಯತ್ನ ನಡೆಸಿದೆ. ತನ್ನ ಅವಧಿ ಪೂರೈಸುತ್ತಿದ್ದ 1978ರ ವ್ಯಾಪಾರ-ಸಾಗಣೆ ಸಂಧಿಯ ಸ್ಥಾನದಲ್ಲಿ ಇನ್ನೊಂದು ಸಂಧಿಯ ಬಗ್ಗೆ ಮಾತುಕತೆಗಳ ಸಮಯದಲ್ಲಿ ನೇಪಾಳ ಸರಕಾರ 1987ರಲ್ಲಿ ವಿಧಿಸಿದ ಕರಗಳನ್ನು ವಾಪಾಸುಪಡೆಯಬೇಕು ಹಾಗೂ ಭಾರತಕ್ಕೆ ಒದಗಿಸಿದ ಸೌಲಭ್ಯವನ್ನು ಇತರ ದೇಶಗಳಿಗೆ ಒದಗಿಸಬಾರದು ಎಂದು ಭಾರತ ಸರ್ಕಾರ ಶರತ್ತು ಹಾಕಿತ್ತು. ಅಂದರೆ ರಾಷ್ಟ್ರೀಯರೆಂಬ ಪರಿಗಣನೆ ಮುಂದುವರಿಯ ಬೇಕೆಂದೇ ಅರ್ಥ. ನೇಪಾಳದ ಪ್ರತಿನಿಧಿಗಳು ಮೊದಲಿಗೆ ಇದಕ್ಕೆ ಒಪ್ಪಿದರು. ಆದರೆ ನಂತರ ಮಾತು ತಪ್ಪಿದರು. ಅಂದರೆ ಬಲವಂತವಾಗಿ ರಾಷ್ಟ್ರೀಯರೆಂಬ ಪರಿಗಣನೆ ಪಡೆಯುವ ಪ್ರಯತ್ನ ವಿಫಲವಾಯಿತು. ಹೀಗಿರುವಾಗ ಭಾರತ ಸರಕಾರ ತನ್ನ ವ್ಯಾಪಾರಕ್ಕೆ ವಿಶೇಷ ರಿಯಾಯ್ತಿಯಿಲ್ಲದ ಒಂದು ಮಿತ್ರತ್ವ ಸಂಧಿಗೆ ಸಿದ್ಧವಾಗ ಬೇಕಾಗುತ್ತದೆ. ಇದರಿಂದ ಭಾರತದ ಹಿತಾಸಕ್ತಿಗಳಿಗೆ ಸ್ವಲ್ಪ ಮಟ್ಟಿನ ತೊಂದರೆಯಾಗಬಹುದು. ಆದರೆ ಬೇರೆ ದಾರಿಯಿಲ್ಲ.

ಈ ವಾಸ್ತವತೆಯನ್ನು ಗಮನದಲ್ಲಿಟ್ಟುಕೊಂಡು ವ್ಯಾಪಾರ ಸಾಗಣೆ ಸಂಧಿಯ ಬಗ್ಗೆ ಮಾತುಕತೆ ನಡೆಯಬೇಕು. ಇಲ್ಲಿ ನೇಪಾಳಕ್ಕೂ ಒಂದು ಸಲಹೆ. ಭಾರತೀಯರಿಗೆ ನೇಪಾಳದ ರಾಷ್ಟ್ರೀಯದಂತಹ ಸ್ಥಾನಮಾನ ವಾಪಾಸು ಪಡೆಯುವುದನ್ನು ಭಾವೋದ್ವೇಗಗಳಿಲ್ಲದೆ ಶಾಂತ ಚಿತ್ತದಿಂದ ನಡೆಸದಿದ್ದರೆ ಗಂಭೀರ ಸನ್ನಿವೇಶಗಳು ಉಂಟಾಗುವ ಸಂಭವವಿದೆ. ಭಾರತೀಯರಿಗೆ ಕೆಲಸದ ಪರ್ಮಿಟ್‌ನ ಶರತ್ತು ಹಾಕಿದರೆ ಲಕ್ಷಾಂತರ ಭಾರತೀಯರು ವಾಪಾಸು ಬರಬೇಕಾದ ಸ್ಥಿತಿ ಉಂಟಾಗಬಹುದು. ಎರಡೂ ಪಕ್ಷದವರು ಇದನ್ನು ಬುದ್ಧಿವಂತಿಕೆಯಿಂದ ನಿರ್ವಹಿಸಿದರೆ ಇದರಿಂದ ಕಹಿ ವಾತಾವರಣ ಸೃಷ್ಟಿಯಾಗದಂತೆ ನೋಡಿಕೊಳ್ಳಬಹುದು.ಯಾಕೆಂದರೆ ಭಾರತ ಇಂತಹ ಅಲ್ಲೋಲ-ಕಲ್ಲೋಲವನ್ನು ಹಿಂದೆಯೂ ಅನುಭವಿಸಿದೆ. ದೇಶದ ಇಬ್ಭಾಗವಾದಾಗ ಮತ್ತು ನಂತರ ಪೂರ್ವ ಆಫ್ರಿಕಾದಿಂದ ಬಹಳಷ್ಟು ಭಾರತೀಯರು ಮರಳಬೇಕಾಗಿ ಬಂದಾಗ.

ಕಹಿ ಭಾವನೆ ಸೃಷ್ಟಿಯಾಗಬಾರದು

ನೇಪಾಳದಲ್ಲಿನ ಪ್ರಜಾಪ್ರಭುತ್ವ ವಾದೀ ಶಕ್ತಿಗಳು ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಪರಸ್ಪರ ಕೊಡು-ಕೊಳ್ಳುವ ವಾತಾವರಣ ಸೃಷ್ಟಿಸಲು ನೆರವಾಗಬೇಕು. ಭಾರತ ನೇಪಾಳ ಗಡಿಯಲ್ಲಿ ಸಾಗಣೆ ಕೇಂದ್ರಗಳನ್ನು ಅಂತರಾಷ್ಟ್ರೀಯ ನಿಯಮಗಳ ಪ್ರಕಾರ ತಾನು ಒದಗಿಸಿರುವುದಾಗಿ ಭಾರತ ಹೇಳುತ್ತಿರುವುದು ಪೂರ್ಣ ಸತ್ಯವಾಗಿರಬಹುದು. ಆದರೆ ಅದರಿಂದ ಸರಕುಗಳ, ರವಾನೆಗೆ ತೊಂದರೆಯಾಗಿ ನೇಪಾಳದ ಜನಸಾಮಾನ್ಯರಿಗೆ ವಿಪರೀತ ತೊಂದರೆಯಾಗಿದೆ ಎಂಬುದೂ ನಿಜವೇ. ಎಷ್ಟು ಬೇಗ ಈ ತೊಂದರೆ ನಿವಾರಣೆಯಾದರೆ ಅಷ್ಟು ಒಳ್ಳೆಯದು.

ನೇಪಾಳದ ಈಗಿನ ಆಳ್ವಿಕೆಗೆ ವಿರೋಧವಿರುವ ಅಲ್ಲಿನ ಎಲ್ಲಾ ರಾಜಕೀಯ ಪಕ್ಷಗಳೂ ಭಾರತ ಅವರ ದೇಶಕ್ಕೆ ಆರ್ಥಿಕ ದಿಗ್ಬಂಧನ ವಿಧಿಸಿದೆ ಎಂದು ಭಾವಿಸಿವೆ ಎಂಬುದನ್ನೂ ಗಮನಿಸಬೇಕು. ಕಮ್ಯುನಿಸ್ಟ್ ಪಕ್ಷಗಳಷ್ಟೇ ಈ ಎರಡು ದೇಶಗಳ ನಡುವಿನ ಮಿತ್ರತ್ವವನ್ನು ರಕ್ಷಿಸುವ ಸರಿಯಾದ ನಿಲುವು ತಳೆದು ಪರಸ್ಪರ ಹಿತಾಸಕ್ತಿಗಳನ್ನು ಗಮನಿಸಿ ಈ ವಿವಾದವನ್ನು ಇತ್ಯರ್ಥ ಗೊಳಿಸಬೇಕೆಂದು ಕರೆ ನೀಡಿವೆ. ನೇಪಾಳದ ರಾಜಪ್ರಭುತ್ವ ತನ್ನ ರಾಜಕೀಯ ವಿರೋಧಿಗಳಿಂದ ಕೂಡಾ ಸಾಧಾರಣ ಬೆಂಬಲ ಗಳಿಸಿದೆ ಎಂಬುದು ಇಲ್ಲಿ ಗಮನಾರ್ಹ.

ನೇಪಾಳ ನಾಲ್ಕು ಸುತ್ತಿನಿಂದ ಭೂ ಆವೃತವಾಗಿದ್ದು ಭಾರತದ ಮೂಲಕವಷ್ಟೇ ಸಮುದ್ರಕ್ಕೆ ದಾರಿ ಎಂಬ ಅಂಶದಿಂದಾಗಿ ಪರಸ್ಪರ ಹಿತಾಸಕ್ತಿಗಳಿಗಾಗಿ ಗೆಳೆತನದ ಸಂಬಂಧ ಕಾಪಾಡಿಕೊಳ್ಳುವುದು ಅಗತ್ಯ. ವಿಶ್ವಸಂಸ್ಥೆಯ ನಿಯಮ ಹಾಗೂ ಸಮುದ್ರ ಕಾನೂನು ಪ್ರಕಾರ ಭೂ ಆವೃತ್ತ ದೇಶಕ್ಕೆ ಸಮುದ್ರದಿಂದ ಹಾಗೂ ಸಮುದ್ರಕ್ಕೆ ದಾರಿ ಪಡೆಯುವ ಹಕ್ಕಿದೆ. ಅದೇ ರೀತಿ ಸಾಗಣೆಗೆ ದಾರಿ ಒದಗಿಸುವ ದೇಶಕ್ಕೆ ಈ ಹಕ್ಕು ತನ್ನ ಕಾನೂನುಬದ್ಧ ಹಿತಾಸಕ್ತಿಗಳಿಗೆ ಬಾಧೆಯಾಗದಂತೆ ನೋಡಿಕೊಳ್ಳಲು ಎಲ್ಲಾ ಕ್ರಮ ಕೈಗೊಳ್ಳುವ ಹಕ್ಕಿದೆ. ಆದ್ದರಿಂದ ಇಂತಹ ಎರಡು ದೇಶಗಳ ನಡುವೆ ಗೆಳೆತನ ಮತ್ತು ಒಪ್ಪಂದಗಳಿಲ್ಲದಿದ್ದರೆ ಸಾಗಣೆ ಹಕ್ಕುಗಳು ಹೊಸ ಸಮಸ್ಯೆಗಳನ್ನೇ ಸೃಷ್ಟಿಸಬಹುದು.

ನೇಪಾಳಕ್ಕೆ . ತನ್ನ ಆಮದು ಹಾಗೂ ರಫ್ತನ್ನು ವ್ಯಾಪಕಗೊಳಿಸುವ ಹಕ್ಕು ಇದೆಯೆಂಬುದನ್ನು ಪೂರ್ಣವಾಗಿ ಒಪ್ಪಲೇ ಬೇಕು. ಆದೇ ವೇಳೆಗೆ ಅದು ಭಾರತದ ವಿರುದ್ಧ ಒಂದು ವ್ಯಾಪಾರ ಯುದ್ಧ ಎಂಬ ಭಾವನೆ ಸೃಷ್ಟಿಯಾಗುವಂತಿರಬಾರದು.

ಅಲಿಪ್ತ ಆಂದೋಲನದ ಪ್ರಮುಖ ದೇಶವಾದ ಭಾರತದ ಸರಕಾರದ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ನಮ್ಮೆರಡು ದೇಶಗಳ ನಡುವಿನ ಸಂಬಂಧಗಳು ಹದಗೆಟ್ಟರೆ ನಮ್ಮೆರಡು ಜನತೆಗಳಿಗೆ ತೊಂದರೆಯಷ್ಟೇ ಅಲ್ಲ, ಅದು ಅಲಿಪ್ತ ದೇಶಗಳ ಬಳಗಕ್ಕೆ ಒಂದು ಸೋಲು. ನ್ಯಾಯಬದ್ಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡೇ ಗರಿಷ್ಠ ರಿಯಾಯ್ತಿ ನೀಡುವುದು ಅತೀ ಸೂಕ್ತ. ಅಲ್ಪತನದ ಕೊಸರಾಟದಿಂದ ಪ್ರಯೋಜನವಿಲ್ಲ. ಈ ಕೆಲಸ ಸುಲಭದ್ದಲ್ಲವೆಂಬುದೂ ನಿಜವೇ. ಯಾಕೆಂದರೆ ನೇಪಾಳೀ ಆಡಳಿತ ಅಡಚಣೆಯುಂಟುಮಾಡುವ ನಿಲುವು ತಳೆಯಬಹುದು. ಒಂದು ದೊಡ್ಡ ದೇಶ ಒಂದು ಸಣ್ಣ ನೆರೆ ದೇಶದ ಹಿತಾಸಕ್ತಿ ರಕ್ಷಿಸಲು ನಮ್ಮ ದೇಶ ಸರ್ವ ಪ್ರಯತ್ನ ನಡೆಸಿತು ಎಂಬ ಬಗ್ಗೆ ನೇಪಾಳದ ಪ್ರಾಮಾಣಿಕ ಜನಗಳಿಗೆ ತೃಪ್ತಿಯಾಗುವಂತೆ ಭಾರತ ಸರಕಾರ ತನ್ನ ಕೈಲಾದ್ದನ್ನೆಲ್ಲಾ ಮಾಡಬೇಕು.

ಮೇ ದಿನಾಚರಣೆ

ಭದ್ರಾವತಿ

ಭದ್ರಾವತಿಯ ಜನರಲ್ ಎಂಪ್ಲಾಯೀಸ್ ಮತ್ತು ಹಮಾಲಿ ಕಾರ್ಮಿಕ ಸಂಘಗಳು ಜಂಟಿಯಾಗಿ ಮೇ ದಿನವನ್ನು ಸಿ.ಐ.ಟಿ.ಯು. ಸಂಘದ ಕಛೇರಿ ಎದುರು ಆಚರಿಸಿದವು. ಸಂಘದ ಕಾ॥ ಮಹಮ್ಮದ್ ರಫೀಸಾಬ್ ಮೊದಲಿಗೆ ಧ್ವಜಾರೋಹಣ ಮಾಡಿದರು. ಪ್ರಧಾನ ಕಾರ್ಯದರ್ಶಿ ರಂಗೇಗೌಡ, ಕಾರ್ಯದರ್ಶಿ ಬಸವರಾಜು ಹಾಗೂ ರೈತ ಮುಖಂಡ ನರಸಿಂಹಯ್ಯ, ಶೇಖರಪ್ಪ ಮಾತನಾಡಿದರು.

ಸಿರಸಿ

ರಸ್ತೆಸಾರಿಗೆ ನೌಕರರ ಸಂಘ, ಬ್ಯಾಂಕ್, ಎಲ್.ಐ.ಸಿ., ಮುಳಗುಂದ ಇಂಡಸ್ಟ್ರಿಯಲ್ ಕಾರ್ಮಿಕ ಸಂಘ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಜಂಟಿಯಾಗಿ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಲಾಯಿತು. ಸಿ.ಪಿ.ಐ.(ಎಂ) ಮುಖಂಡ ಕಾ॥ ಎಂ.ಎಸ್. ಧೀರೇಶ್ವರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಯಶವಂತ ಹೆರವಟ್ಟಾ ಮತ್ತು ಡಾ॥ ಜಿ. ಎನ್. ಹೆಗ್ಡೆ, ಜಿ.ಎನ್. ಹೆಗಡೆಯವರು ಹಾಗೂ ಪಿ.ಜಿ. ಮಶಾಲ್ದಿಯವರು ಮಾತನಾಡಿದರು.

ನಿರುದ್ಯೋಗ, ಕೋಮುವಾದಿ, ಛಿದ್ರಕಾರಿ ಶಕ್ತಿಗಳ ವಿರುದ್ಧ, ರಾಜೀವ್‌ಗಾಂಧಿ ಹೊಸ ಆರ್ಥಿಕ ನೀತಿಯ ಖಂಡನೆ, ಮಂಡೇಲಾ ಬಿಡುಗಡೆ, ವಿಶ್ವಶಾಂತಿ, ಕನಿಷ್ಠಕೂಲಿ ಖಾಯ್ಮೆಜಾರಿ, ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಸುವ ಮುಂತಾದ ನಿರ್ಣಯವನ್ನು ಅಂಗೀಕರಿಸಲಾಯಿತು.

ಶಹಾಬಾದ್

ರೈಲ್ವೆ ನಿಲ್ದಾಣದಿಂದ ಹೊರಟ ಎ.ಬಿ.ಎಲ್. ಕಾರ್ಮಿಕರು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಯೂನಿಯನ್ ಕಛೇರಿ ಎದುರು ಬಹಿರಂಗ ಸಭೆ ನಡೆಸಿತು. ಅಧ್ಯಕ್ಷ ಕಾ॥ ಎ.ಬಿ. ದಾಸ್ ಕಾರ್ಯದರ್ಶಿ ಕಾ॥ ಕಾಳಪ್ಪ, ಮಾತನಾಡಿದರು. ಸಂಜೆ ಚಲನ ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ದಾಂಡೇಲಿ

ಪೇಪರ್ ಮಿಲ್ಸ್, ಪ್ಲೈವುಡ್, ಪೆರೋವಿಲೋಯ್ಸ್ ಕಾರ್ಖಾನೆಗಳ ಕಾರ್ಮಿಕರು ಜಂಟಿಯಾಗಿ ಮೆರವಣಿಗೆ ಬಹಿರಂಗ ಸಭೆ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾ॥ ಹರೀಶ್ ನಾಯಕ್‌ರವರು ವಹಿಸಿದ್ದರು. ಸಭೆಯಲ್ಲಿ ಕಾ॥ ಟಿ.ಎಸ್. ನಾಯ್ಕ ಅಕ್ರಮಖಾನ್, ಉಮೇಶನಾಯ್ಕ ಮಾತನಾಡಿದರು. ಎಲ್ಲಾ ಸಂಘಗಳ ಕಛೇರಿಗಳನ್ನು ಕೆಂಬಣ್ಣದಿಂದ ಅಲಂಕರಿಸಿ ಧ್ವಜಾರೋಹಣ ನಡೆಸಲಾಗಿತ್ತು.

> **ಐಕ್ಯರಂಗಕ್ಕೆ ನೆನಪಿನ ಕಾಣಿಕೆ**
>
> ಕರ್ನಾಟಕ ಪ್ರಾಂತ ರೈತ ಸಂಘದ ಕುಂದಾಪುರ ತಾಲ್ಲೋಕು ರೈತ ಸಂಘದ ಅಧ್ಯಕ್ಷರಾದ ಕಾ॥ಹೆಚ್.ಶಿವರಾಮ ಶೆಟ್ಟರು ತಮ್ಮ ಮಗ ಶ್ರೀ ಚಂದ್ರಶೇಖರನ ಮದುವೆಯ ಸವಿನೆನಪಿಗಾಗಿ ಐಕ್ಯರಂಗ ಪತ್ರಿಕೆಗೆ 101ರೂಗಳನ್ನು ಕಾಣಿಕೆಯಾಗಿ ನೀಡಿದ್ದಾರೆ.

ರಾಷ್ಟ್ರಪತಿ ಆಡಳಿತ ಹೇರಿಕೆ ವಿರುದ್ಧ ತೀವ್ರ ಪ್ರತಿಭಟನೆ

ಶಹಾಪುರದಲ್ಲಿ ಏಪ್ರಿಲ್ 27 ರಂದು ಕರ್ನಾಟಕದಲ್ಲಿ ಜನತಾದಳ ಸರ್ಕಾರವನ್ನು ಕಾನೂನು ಬಾಹಿರವಾಗಿ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರಿದ ರಾಜೀವ್‌ಗಾಂಧಿ ಸರ್ವಾಧಿಕಾರಿ ಕ್ರಮವನ್ನು ಪ್ರತಿಭಟಿಸಿ ವಿರೋಧ ಪಕ್ಷಗಳು ನೀಡಿದ 'ಕರ್ನಾಟಕ ಬಂದ್' ಪ್ರಯುಕ್ತ ಇಲ್ಲಿನ ಜನತಾದಳ, ಸಿ.ಪಿ.ಐ(ಎಂ) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನೂರಾರು ಜನ ಕಾರ್ಯಕರ್ತರು ಮೆರವಣಿಗೆ ನಡೆಸಿ ಶಹಾಪುರ ಬಂದ್ ಯಶಸ್ವಿಗೊಳಿಸಿದರು. ಸಂಚಾರ ತಡೆಹಿಡಿದು ಕೇಂದ್ರ ಸರ್ಕಾರದ ಜನ ವಿರೋಧಿ ಕ್ರಮವನ್ನು ಖಂಡಿಸಿ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು. ಜನತಾದಳ ಮುಖಂಡ ಅಯ್ಯಣ್ಣ ಕನ್ನೆಕೊಳ್ಳೂರ, ಮಲ್ಲಣ್ಣ ಮಡ್ಡಿ, ಹಾಗೂ ವಕೀಲರಾದ ಎಸ್. ಶೇಖರ್, ಸಿ.ಪಿ.ಐ(ಎಂ) ಮುಖಂಡ ಕಾ॥ ಚನ್ನಪ್ಪ ಆನೆಗುಂದಿಯವರು ನೇತೃತ್ವ ವಹಿಸಿದ್ದರು.

ಹೂವಿನ ಹಡಗಲಿ

ಏಪ್ರಿಲ್ 22 ರಂದು ಹೂವಿನ ಹಡಗಲಿಯಲ್ಲಿ 400 ಮಂದಿ ರೈತರು ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆ ವಿರುದ್ಧ ಹಾಗೂ ತಾಲೋಕಿನ ರೈತರ ಬೇಡಿಕೆಗಳನ್ನು ಮುಂದಿರಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರ್ ರವರಿಗೆ ಮನವಿ ಅರ್ಪಿಸಿದರು. ಬಡ್ಡಿನ ಬಾಕಿ ವಸೂಲಿ ನಿಲ್ಲಿಸಬೇಕು, ವಿದ್ಯುತ್ ಸೌಲಭ್ಯ ನೀಡಬೇಕು, ಸಿ ಮತ್ತು ಡಿ ವರ್ಗದ ಭೂಮಿಯನ್ನು ರೈತರಿಗೆ ಹಂಚಬೇಕು ಮುಂತಾದ ಬೇಡಿಕೆಗಳನ್ನು ಒತ್ತಾಯಿಸಲಾಯಿತು. ಕಾ॥ ಭೀಮಸೇನಾಚಾರ್, ಪಿ.ಆರ್.ವೆಂಕಟೇಶ, ಶ್ರೀಕಾಂತ್ ಹವಲ್ದಾರ್ ಮುಂತಾದವರು ಮಾತನಾಡಿ ಕಾಂಗ್ರೆಸ್ಸೇತರ ಸರ್ಕಾರಗಳನ್ನು ವಜಾಗೊಳಿಸುವ ಮೂಲಕ ರಾಜೀವ್ ಗಾಂಧಿ ಸರ್ವಾಧಿಕಾರಿ ರೀತಿಯಲ್ಲಿ ವರ್ತಿಸುತ್ತಿದ್ದು ಬಹುಮತ ತೋರಿಸಲು ಅವಕಾಶವನ್ನು ನೀಡದಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದಂತೆ ಎಂದು ಆರೋಪಿಸಿದರು.

ಸಿರಸಿ

ಜನತಾದಳ ಸರ್ಕಾರವನ್ನು ವಜಾಗೊಳಿಸಿ ಕರ್ನಾಟಕ ಜನತೆಗೆ ಕೇಂದ್ರ ಸರ್ಕಾರ ವಂಚನೆ ಮಾಡಿದೆ ಎಂದು ಸಿರಸಿ ಸಿ.ಪಿ.ಐ(ಎಂ) ಖಂಡಿಸಿ ಏಪ್ರಿಲ್ 27 ರಂದು ಪ್ರತಿಭಟನಾ ಪ್ರದರ್ಶನವನ್ನು ಸಂಘಟಿಸಿತು.

ಬಹುಮತ ಸಾಬೀತಿಗೆ ಅವಕಾಶ ನೀಡದೆ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿದ ಕೇಂದ್ರ ಸರ್ಕಾರ ಜನತಂತ್ರ ವಿರೋಧಿಯಾಗಿ ನಡೆದುಕೊಂಡಿದೆ ಎಂದು ಆರೋಪಿ ಮನವಿ ಅರ್ಪಿಸಲಾಯಿತು.

ಬಿಜಾಪುರ

ಏಪ್ರಿಲ್ 23 ರಂದು ಬಸವೇಶ್ವರ ವೃತ್ತದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಿ.ಪಿ.ಐ.(ಎಂ) ಮುಖವಾಡ ಕಾ॥ ಬೀಮಸಿಕಲಾದಗಿ, ಮನ್ನೂಸಾಬ ಕಲಾದಗಿಯವರು ಮಾತನಾಡಿದರು. ಜನತಾದಳದ ಜಿಲ್ಲಾ ಪರಿಷತ್ ಉಪಾಧ್ಯಕ್ಷ ಶ್ರೀಮತಿ ಸುಮನ್ ಕೊಲ್ಹಾರ, ತೋರಗಲ್, ಈಳಗೋರ, ಲಾಡ್ಗದ ಗುಂದಿಯವರು ಸಿ.ಪಿ.ಐ. ಶ್ರೀ ಚಂಚಲಕರ, ಬಿ.ಜೆ.ಪಿ.ಯ ಡಾ॥ ಮಹೇಂದ್ರಕರ ಮುಂತಾದವರು ಮಾತನಾಡಿ ಸಂವಿಧಾನದ ನೀತಿ ನಿಯಮಗಳನ್ನು ಗಾಳಿಗೆ ತೂರಿ ವಿಧಾನ ಸಭೆಯಿನ್ನು ವಿಸರ್ಜಿಸುವ ಘೋರ ಹಾಗೂ ನೀಚ ಕೃತ್ಯವೆಸಗಿರುವ ರಾಜ್ಯ ಪಾಲರನ್ನು ಹಾಗೂ ಕೇಂದ್ರ ಸರ್ಕಾರವನ್ನು ತೀವ್ರವಾಗಿ ಖಂಡಿಸಲಾಯಿತು.

ಜನತಾದಳದ ಉಪಾಧ್ಯಕ್ಷ ಕರ್ಪೂರಮಠ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಯಂಡಿಗೇರ ಸ್ವಾಗತಿಸಿ ಶಾಂತಪ್ಪ ಜತ್ತಿ ವಂದಿಸಿದರು.

ಬಂಟ್ವಾಳ

ಏಪ್ರಿಲ್ 27 ರಂದು ವಿರೋಧ ಪಕ್ಷಗಳ ಕರೆಯಂತೆ ತಾಲೋಕಿನಾದ್ಯಂತ ಯಶಸ್ವಿ ಬಂದ್ ಆಚರಿಸಲಾಯಿತು. ಬೀಡಿ, ಹಂಚು, ಮರದಮಿಲ್ಲು ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದವು. ರಿಕ್ಷಾ, ಟೂರಿಸ್ಟ್, ಟ್ಯಾಕ್ಸಿ, ವ್ಯಾನ್, ಖಾಸಗಿ ಬಸ್ಸುಗಳು ಚಲಿಸಲಿಲ್ಲ. ಅಂಗಡಿ, ಹೋಟೇಲ್‌ಗಳು ಬಾಗಿಲು ತೆರೆಯದೆ ಬಂದ್‌ನಲ್ಲಿ ಪಾಲ್ಗೊಂಡು ಅತ್ಯಂತ ಯಶಸ್ವಿಯಾಗಿ ಬಂದ್ ಆಚರಿಸಿದ ಜನತೆಯನ್ನು ತಾಲೋಕು ಪಕ್ಷದ ಕಾರ್ಯದರ್ಶಿ ಕಾ॥ ಬಿ. ವಾಸುಗಟ್ಟಿ ಅಭಿನಂದಿಸಿದ್ದಾರೆ. ಬಂದ್ ಗೆ ಪೂರ್ವಭಾವಿಯಾಗಿ 23 ರಂದು ನಡೆದ ಸಭೆಯಲ್ಲಿ ಕಾ॥ ಕೆ. ಆರ್. ಶ್ರೀಯಾನ್ ಹೂವಯ್ಯ ಬಂಗೇರ ಹಾಗೂ ಬಿ. ವಾಸುಗಟ್ಟಿಯವರು ಮಾತನಾಡಿ ಬಂದ್ ಯಶಸ್ವಿಗೊಳಿಸಲು ಮನವಿ ಮಾಡಿದ್ದರು.

ಅಮೆರಿಕನ್ ಆಡಳಿತದ ಬ್ಲಾಕ್ ಮೇಲ್ ತಂತ್ರಕ್ಕೆ ಪಾಲಿಟ್ ಬ್ಯೂರೋ ತೀವ್ರ ಖಂಡನೆ

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರ ತನ್ನ ವ್ಯಾಪಾರ ಕಾನೂನಿನ "ಸುಪರ್ 301" ಕಲಮನ್ನು ಭಾರತಕ್ಕೆ ಅನ್ವಯಿಸಿ ಭಾರತ ಅಮೆರಿಕನ್ ಬಂಡವಾಳಕ್ಕೆ ತನ್ನ ಆರ್ಥಿಕವನ್ನು ಮತ್ತಷ್ಟು ತೆರೆಯುವಂತೆ 'ಬ್ಲಾಕ್ ಮೇಲ್' ಒತ್ತಡ ತಂತ್ರ ಬಳಸುತ್ತಿದೆ ಎಂದು ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. 1980ರ ದಶಕದ ಆರಂಭದಿಂದಲೇ ಪ್ರತಿಯೊಂದು ಗ್ಯಾಟ್ ಸಮ್ಮೇಳನದಲ್ಲಿ ಅಮೆರಿಕನ್ ಪ್ರತಿನಿಧಿಗಳು ಭಾರತ ತನ್ನ ಸೇವಾ ವಲಯದಲ್ಲಿ, ಮುಖ್ಯವಾಗಿ ವಿಮಾ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಪ್ರವೇಶ ನೀಡಬೇಕೆಂದು ಒತ್ತಾಯಿಸುತ್ತಾ ಬಂದಿದ್ದಾರೆಂದು ಮೇ 27 ರಂದು ನೀಡಿದ ಪಾಲಿಟ್‌ಬ್ಯೂರೋ ಹೇಳಿಕೆ ನೆನಪಿಸಿದೆ.

ರಾಜೀವ ಗಾಂಧಿ ಸರಕಾರದ ಉದಾರೀಕರಣ ನೀತಿ ದೇಶದೊಳಕ್ಕೆ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶಕ್ಕೆ ಸೌಲಭ್ಯ ಕಲ್ಪಿಸಿ ಭಾರತ ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಹೆಚ್ಚೆಚ್ಚು ಬಾಗುವಂತೆ ಮಾಡಿದೆ. ಇದರಿಂದಲೇ ಧೈರ್ಯಗೊಂಡ ಅಮೆರಿಕನ್ ಸರಕಾರ ಈಗ ತನ್ನ ವ್ಯಾಪಾರ ಕಾನೂನನ್ನು ಬಳಸಿ ಭಾರತದ ಆರ್ಥಿಕದೊಳಗೆ ಹೆಚ್ಚಿನ ಪ್ರವೇಶ ಪಡೆಯಲು ಭಾರತ ಸರಕಾರದ ಮೇಲೆ ಒತ್ತಡ ತಂದಿದೆ. ಇತ್ತೀಚಿನ ಈ ಕ್ರಮ ಬೌದ್ಧಿಕ ಆಸ್ತಿ ಹಕ್ಕುಗಳ ಮೇಲೆ ಅಮೆರಿಕನ್ ನಿಲುವನ್ನು ಭಾರತ ಒಪ್ಪುವಂತೆ ಹೆಚ್ಚೆಚ್ಚು ಒತ್ತಡ ಹಾಕುತ್ತಿರುವ ಹಿನ್ನೆಲೆಯಲ್ಲಿ ಬಂದಿದೆ ಎಂದು ಪಾಲಿಟ್‌ಬ್ಯೂರೋ ಹೇಳಿಕೆ ತಿಳಿಸುತ್ತದೆ.

ಒಂದೆಡೆ ಸ್ವತಃ ಅಮೆರಿಕಾ ದೇಶವೇ ತನ್ನ ಸರಕುಗಳನ್ನು ವಿದೇಶೀ ಸ್ಪರ್ಧೆ ಯಿಂದ ಕಾಪಾಡುವ ಸಂರಕ್ಷಣಾ ನೀತಿಗೆ ಅಂಟಿಕೊಂಡಿರುವಾಗ ಇತರ ದೇಶಗಳು ಮಾತ್ರ ತನ್ನ ಸರಕುಗಳ, ಬಂಡವಾಳದ ಪ್ರವೇಶ ಸುಲಭವಾಗುವಂತೆ ತಮ್ಮ ದೇಶದ ನಿಯಮಗಳನ್ನು ಸಡಿಲಗೊಳಿಸಬೇಕು ಅಥವಾ ರದ್ದುಗೊಳಿಸಬೇಕು ಎಂದು ಬಯಸುವುದು ಅತ್ಯಂತ ನಿಂದನಾರ್ಹ ಎಂದು ಪಾಲಿಟ್‌ಬ್ಯೂರೋ ಖಂಡಿಸಿದೆ.

ಭಾರತ ಸರಕಾರ ಅಮೆರಿಕಾದ ಈ ಹಸ್ತಕ್ಷೇಪವನ್ನು ಆಕ್ಷೇಪಿಸಿದೆ ಎಂದು ಗಮನಿಸಿರುವ ಪಾಲಿಟ್‌ಬ್ಯೂರೋ ಅಮೆರಿಕಾದ ಈ ಬ್ಲಾಕ್‌ಮೇಲನ್ನು ದೃಢವಾಗಿ ವಿರೋಧಿಸಬೇಕೆಂದು ಭಾರತ ಸರಕಾರವನ್ನು ಒತ್ತಾಯಿಸಿದೆ. ತನ್ನ ಆರ್ಥಿಕ ಧೋರಣೆಗಳನ್ನು ತಾನೇ ರೂಪಿಸುವ ಭಾರತದ ಸಾರ್ವಭೌಮ ಅಧಿಕಾರದ ಮೇಲೆ ಅಮೆರಿಕನ್ ಆಡಳಿತದ ಈ ಬಹಿರಂಗ ಹಲ್ಲೆಯನ್ನು ಬಲವಾಗಿ ಪ್ರತಿಭಟಿಸಬೇಕೆಂದು ಪಾಲಿಟ್‌ಬ್ಯೂರೋ ಎಲ್ಲಾ ಜನವಿಭಾಗಗಳಿಗೆ ಕರೆ ನೀಡಿದೆ.

ಚಾರಿತ್ರಿಕ ಚೀಣಾ ಸೋವಿಯತ್ ಶೃಂಗಸಭೆ

ಶಾಂತಿ ಪ್ರಜಾಪ್ರಭುತ್ವ, ಸಮಾಜವಾದದ ವಿಶ್ವ ಶಕ್ತಿಗಳಿಗೊಂದು ದೊಡ್ಡ ವಿಜಯ

ಮೇ 15ರಿಂದ 18ರವರೆಗೆ ಸಿ.ಪಿ.ಎಸ್.ಯು ಪ್ರಧಾನ ಕಾರ್ಯದರ್ಶಿ ಮಿಖೈಲ್ ಗೊರ್ಬಚೆವ್ ಚೀಣಾಕ್ಕೆ ಭೇಟಿಯಿತ್ತರು. 1959ರ ನಂತರ ಇದು ಸೋವಿಯತ್ ಮುಖಂಡರೊಬ್ಬರ ಪ್ರಥಮ ಭೇಟಿಯಾಗಿತ್ತು. ಈ ಭೇಟಿ ಕಾಲದಲ್ಲಿ ನಡೆದ ಮಾತುಕತೆಗಳು ಮತ್ತು ಚೀಣಾ-ಸೋವಿಯತ್ ಶೃಂಗ ಸಭೆಯು ಮಹತ್ವದ ಬಗ್ಗೆ ಮೇ 18ರಂದು ಹೊರಡಿಸಿದ ಪತ್ರಿಕಾ ಹೇಳಿಕೆಯನ್ನು ಇಲ್ಲಿ ಕೊಡಲಾಗಿದ.

ರಾಜ್ಯಚೀಣಾ ಜನತಾ ಗಣ ಮತ್ತು ಸೋವಿಯತ್ ಒಕ್ಕೂಟ, ಹಾಗೂ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಮತ್ತು ಚೀಣಾ ಕಮ್ಯುನಿಸ್ಟ್ ಪಕ್ಷದ ನಡುವಿನ ಸಂಬಂಧಗಳು ಮೂರು ದಶಕಗಳ ನಂತರ ಮತ್ತೆ ಸಾಮಾನ್ಯಗೊಂಡಿರುವುದನ್ನು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸ್ವಾಗತಿಸುತ್ತದೆ.

ತನ್ನ ಭೇಟಿಯ ಕಾಲದಲ್ಲಿ ಕಾಮ್ರೇಡ್ ಗೊರ್ಬಚೆವ್ ಚೀಣೀ ಅಧ್ಯಕ್ಷ ಯಾಂಗ್ ಶಾಂಗ್‌ಕುನ್, ಪ್ರಧಾನಮಂತ್ರಿ ಲಿ ಪೆಂಗ್, ಚೀಣಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಝೂವೋ ಝಿಯಾಂಗ್‌ರೊಡನೆ ಮಾತುಕತೆ ನಡೆಸಿದರು ; ಡೆಂಗ್ ಕ್ಸಿಯಾವೋ ಪಿಂಗ್‌ರೊಡನೆ ಶೃಂಗ ಸಭೆ ನಡೆಸಿದರು.

ಈ ಚಾರಿತ್ರಿಕ ಘಟನೆ ಮಹತ್ವ ಪೂರ್ಣ ವ್ಯಾಪಕ ಫಲಿತಾಂಶ ನೀಡಿದೆ. ನಡೆದ ಒಪ್ಪಂದಗಳು ಸರಕಾರಗಳ ನಡುವೆ ಪಕ್ಷಗಳ ನಡುವಿನ ಸಂಬಂಧಗಳ ಬೆಳವಣಿಗೆಗೆ ಭದ್ರ ರಾಜಕೀಯ ಬುನಾದಿ ಹಾಕಿವೆ. ಆರ್ಥಿಕ ಸಹಕಾರದ ವಲಯದಲ್ಲಿ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಇವು ಸಮಾಜವಾದೀ ಬೆಳವಣಿಗೆಯ ಒಂದು ಘನ ಕ್ರಾವಲಾಗಲಿವೆ.

ಈ ಎರಡು ದೊಡ್ಡ ಸಮಾಜವಾದೀ ದೇಶಗಳ ನಡುವಿನ ಸಂಬಂಧಗಳ ಸಾಮಾನ್ಯೀಕರಣ ವಿಶ್ವ ಕಮ್ಯುನಿಸ್ಟ್ ಆಂದೋಲನದ ಮೇಲೆ, ಮುಂದಿನ ವಿಶ್ವ ಬೆಳವಣಿಗೆಗಳ ಮೇಲೆ ಒಂದು ಅಭಿನಂದನಾರ್ಹ ಪರಿಣಾಮ ಬೀರಲಿದೆ. ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯ ಮೇಲೆ ಪರಸ್ಪರ ಗೌರವ, ಅನಾಕ್ರಮಣ, ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು, ಸಮಾನತೆ, ಪರಸ್ಪರ ಪ್ರಯೋಜನ ಹಾಗೂ ಶಾಂತಿಯುತ ಸಹಬಾಳ್ವೆಯ ಮೇಲೆ ನಿಲ್ಲುವ ಈ ಸಂಬಂಧಗಳು ಸಮಾಜವಾದೀದೇಶಗಳ ನಡುವಿನ ಸಂಬಂಧಗಳು ಹಾಗೂ ಕೊಡು ಕೊಳ್ಳುವಿಕೆಯ ಮೇಲೂ ಆಳವಾದ ಪ್ರಭಾವ ಬೀರಲಿವೆ.

ಈ ಎರಡು ದೇಶಗಳ ನಡುವಿನ ಸಂಬಂಧಗಳು ಸುಧಾರಿಸಬೇಕು ಹಾಗೂ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದ ಮೇಲೆ ಏಕೀಕರಣಗೊಳ್ಳಬೇಕೆಂದು ಸದಾ ಶ್ರಮಿಸಿರುವ ಸಿ.ಪಿ.ಐ (ಎಂ) ಗಂತೂ ಈ ಶೃಂಗಸಭೆಯ ಫಲಿತಾಂಶಗಳಿಂದ ವಿಶೇಷ ಸಂತೋಷವಾಗಿದೆ.

ಚೀಣಾ-ಸೋವಿಯತ್ ಸಂಬಂಧಗಳು ಸಾಮಾನ್ಯಗೊಂಡಿರುವುದು ವಿಶ್ವಶಾಂತಿಗಾಗಿ ಹೋರಾಡುತ್ತಿರುವ ಶಕ್ತಿಗಳನ್ನು ಅಪಾರವಾಗಿ ಬಲಗೊಳಿಸುವ ವಿಶೇಷ ಪರಿಣಾಮ ಬೀರಲಿದೆ. ಏಷ್ಯಾ-ಶಾಂತಸಾಗರ ಪ್ರದೇಶದಲ್ಲಿನ ಬಿಗುವನ್ನು ಸಡಿಲಗೊಳಿಸುವುದರ ಮೇಲೆ ಇದು ತಕ್ಷಣ ಪ್ರಭಾವ ಬೀರಲಿದೆ ಚೀಣಾ-ಸೋವಿಯತ್ ಸೋದರ ಸಂಬಂಧಗಳ ಮರುಸ್ಥಾಪನೆ ಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ವಿಶ್ವ ಶಕ್ತಿಗಳಿಗೊಂದು ದೊಡ್ಡ ವಿಜಯ.

ದೆಹಲಿ ಕ್ರಿಮಿನಲ್‌ಗಳ ಕೋಟೆ.

ಗೃಹವ್ಯವಹಾರಗಳ ರಾಜ್ಯಮಂತ್ರಿ ಚಿದಂಬರಂ ಏಪ್ರಿಲ್ 10 ರಂದು ರಾಜ್ಯ ಸಭೆಗೆ ನೀಡಿದ ಅಪರಾಧ ಪರಿಸ್ಥಿತಿ ಕುರಿತ ಅಂಕಿ-ಅಂಶಗಳನ್ನು ನೋಡಿದಾಗ ವ್ಯವಸ್ಥೆ ಹೆಚ್ಚು ಬಿಗಡಾಯಿಸಿರುವುದು ಕಂಡು ಬರುತ್ತದೆ. ಕೇರಳ, ಪಶ್ಚಿಮ ಉತ್ತಮವಿದ್ದು ಕಾಂಗ್ರೆಸ್ (ಐ) ಹಿಂಸಾಚಾರವಿಲ್ಲದಿದ್ದರೆ ಅದು ಇನ್ನೂ ಉತ್ತಮವಿರುತ್ತಿತ್ತು. ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ಅಪರಾಧಗಳಿಗೆ ತುತ್ತಾದವರು ಪ್ರಾಣಭಯದಿಂದ ಬಹಳಷ್ಟು ಸಂದರ್ಭಗಳಲ್ಲಿ ಪೋಲಿಸರಿಗೆ ದೂರು ನೀಡುವುದಿಲ್ಲ ಎಂಬುದನ್ನು ಗಮನಕ್ಕೆ ತಗೊಂಡರೆ ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ಕಾನೂನು ವ್ಯವಸ್ಥೆ ಹೇಗಿರುವುದೆಂದು ಯಾರು ಊಹಿಸಬಹುದು.

ಪ್ರತಿ ಸಾವಿರ ಜನಸಂಖ್ಯೆಗೆ ಅಪರಾಧದರ ಹೀಗಿದೆ. ಪಾಂಡಿಚೇರಿ -5. ದೆಹಲಿ -3.5. ಮಧ್ಯಪ್ರದೇಶ 3. ಗುಜರಾತ್, ರಾಜಸ್ಥಾನ, ಕೇರಳ 2.5. ಮಹಾರಾಷ್ಟ್ರ ಮತ್ತು ಕರ್ನಾಟಕ -2. ಯು.ಪಿ., ಬಿಹಾರ್ ಮತ್ತು ಆಂಧ್ರಪ್ರದೇಶ -1.5. ಪಶ್ಚಿಮಬಂಗಾಲ - 1.1.

ದೇಶದ ರಾಜಧಾನಿ ಕೂಡಾ ಕಾಂಗ್ರೆಸ್ (ಐ)ನ ಉದಾರ ಆಶ್ರಯದಲ್ಲಿ ಕ್ರಿಮಿನಲ್‌ಗಳ ಕೋಟೆಯಾಗಿದೆ ಎಂಬುದನ್ನು ಇದು ತೋರಿಸುತ್ತದೆ.

ಒರಿಸ್ಸಾ ಅರಣ್ಯ ಕಾರ್ಮಿಕರ ಮತಪ್ರದರ್ಶನ

ಮಾರ್ಚ್ 27 ರಂದು ಒರಿಸ್ಸಾ ಅರಣ್ಯನಿಗಮದ ಮುಖ್ಯ ಕಚೇರಿ ಯೆದುರು ರಾಜ್ಯದ ಹಲವೆಡೆಗಳಿಂದ ಬಂದ ಮೂರು ಸಾವಿರಕ್ಕೂ ಹೆಚ್ಚು ಅರಣ್ಯ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಮತಪ್ರದರ್ಶನ ನಡೆಸಿದರು.

ಸಿ.ಐ.ಟಿ.ಯು. ಸಂಘವಾದ ಒರಿಸ್ಸಾ ಅರಣ್ಯ ಮಜ್ದೂರ್ ಸಂಘದ ನೇತೃತ್ವದಲ್ಲಿ ಈ ಮತಪ್ರದರ್ಶನ ನಡೆಯಿತು. ಪರಿಚಯ ಪತ್ರ ಹಾಗೂ ವೇತನ ಪತ್ರ ನೀಡಬೇಕು, ವಿಶ್ವ ಆಹಾರ ಕಾರ್ಯಕ್ರಮದಲ್ಲಿನ ಭ್ರಷ್ಟಾಚಾರ ನಿಲ್ಲಬೇಕು, ಇ.ಎಸ್.ಐ. ಹಾಗೂ ಗುಂಪು ವಿಮೆ ಸೌಲಭ್ಯ ಒದಗಿಸಬೇಕು ಹಾಗೂ ಬೊಂಬು ಕಡಿಯುವ ಕಾರ್ಮಿಕರಿಗೆ 165 ರೂ ಕನಿಷ್ಠಕೂಲಿ ಕೊಡಬೇಕು-ಇವು ಅವರ ಪ್ರಮುಖ ಒತ್ತಾಯಗಳು.

ಮೆರವಣಿಗೆಯಲ್ಲಿ ಬಂದ ಕಾರ್ಮಿಕರನ್ನು ಎದುರುಗೊಂಡದ್ದು ಭಾರೀ ಪೋಲಿಸ್ ಬಂದೋಬಸ್ತು. ಭ್ರಷ್ಟ ಎಂ.ಡಿ. ಪರಾರಿಯಾಗಿದ್ದ. ಕಚೇರಿಯ ದ್ವಾರದ ಎದುರೇ ಕಾರ್ಮಿಕರು ಸಭೆ ನಡೆಸಿದರು. ಒರಿಸ್ಸಾ ಅರಣ್ಯ ನಿಗಮದ ಆಡಳಿತ ಪೇಪರ್ ಮಿಲ್ ಮಾಲೀಕರೊಂದಿಗೆ ಸೇರಿಕೊಂಡು ಹೇಗೆ ಭ್ರಷ್ಟಾಚಾರ ನಡೆಯುತ್ತಿದೆ, ವಿಶ್ವ ಆಹಾರ ಕಾರ್ಯಕ್ರಮದಲ್ಲಿ ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಭಾಷಣಕಾರರು ವಿವರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ದಂಡಪಾಣಿ ಮೊಹಂತಿಯವರಲ್ಲದೆ ಈ ಹೋರಾಟವನ್ನು ಬೆಂಬಲಿಸಿ ಕೋಟ ಕಾರ್ಮಿಕರ ಮುಖಂಡ ಸತ್ಯಗೋಪಾಲ ಮಿತ್ರ ಹಾಗೂ ಅರಣ್ಯನಿಗಮ ಕಾಮಗಾರೀ ಸಂಘದ ಕಾರ್ಯದರ್ಶಿ ಬಲಶೀಧರ್ ಘರಿದಾ ಮಾತನಾಡಿದರು.

ಒಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಎ.ಬಿ.ವಿ.ಪಿ. ಗೂಂಡಾಗಿರಿ

ಶೈಕ್ಷಣಿಕ ವರ್ಷದ ಮಹತ್ವದ ಘಟ್ಟಗಳಲ್ಲಿ, ವಿಶೇಷವಾಗಿ ಆರಂಭ ಮತ್ತು ಅಂತ್ಯದ ಹೊತ್ತಿಗೆ ಹಿಂಸಾಚಾರ ನಡೆಸಿ ಅರಾಜಕತೆ ತಂದು ತನಗೆ ಬೆಂಬಲವಿಲ್ಲದ ವಿದ್ಯಾರ್ಥಿಗಳನ್ನು ಬೆದರಿಸುವುದು ಒಸ್ಮಾನಿಯಾ ವಿಶ್ವ ವಿದ್ಯಾಲಯದಲ್ಲಿ ಕಳೆದ ಐದು ವರ್ಷಗಳಿಂದ ಅಖಿಲಭಾರತ ವಿದ್ಯಾರ್ಥಿ ಪರಿಷತ್ ಪಾಲಿಸಿಕೊಂಡು ಬಂದಿರುವ ಒಂದು "ಭವ್ಯ ಪರಂಪರೆ". ವಿಶ್ವವಿದ್ಯಾ ಲಯದಲ್ಲಿ ಸತತ ಪ್ರಭಾವ ಬೆಳೆಸಿ ಕೊಳ್ಳುತ್ತಿರುವ ಎಸ್.ಎಫ್.ಐ. ಅದರ ಗೂಂಡಾಗಿರಿಯ ಮುಖ್ಯಗುರಿ ಈ ಶೈಕ್ಷಣಿಕ ವರ್ಷಾಂತ್ಯದಲ್ಲಿ ಎ.ಬಿ.ವಿ.ಪಿ. [illegible] "ಪರಂಪರೆ"ಯನ್ನು ಆಚರಿಸಿ[illegible]

ಏಪ್ರಿಲ್ [illegible] ರಂದು ರಾತ್ರಿ ಸ್ನಾತಕೋತ್ತರ [illegible]ನಿಲಯದ ಒಂದು ಕೊಠಡಿ[illegible]ಲ್ಲಿದ್ದ ವಿದ್ಯಾರ್ಥಿಗಳ ಮೇಲೆ ಅಪರಿಚಿತರು ಬಂದು ಹಲ್ಲೆಮಾಡಿದರು. ಇದರಲ್ಲಿ ಗಾ[illegible]ಗೊಂಡ[illegible] [illegible] ವಿದ್ಯಾರ್ಥಿಗಳಲ್ಲಿ ಒಬ್ಬರು ಎಸ್.ಎಫ್.ಐ. ಬೆಂಬಲಿಗ. ಆದರೂ ಇದು ಎಸ್.ಎಫ್.ಐ. ಕೃತ್ಯ ಎಂದು ಅಪಪ್ರಚಾರ ನಡೆಸಿದ ಎ.ಬಿ.ಎ.ಪಿ. ಗೂಂಡಾಗಳು ಮರುದಿನ ಪ್ರತೀಕಾರದ ನೆಪದಲ್ಲಿ ಎಸ್.ಎಫ್.ಐ. ಸಕ್ರಿಯ ಕಾರ್ಯಕರ್ತರ ಕೋಣೆಗಳಿಗೆ ನುಗ್ಗಿ ಹಲ್ಲೆ ನಡೆಸಿದರು. ಅವರ ಪುಸ್ತಕ, ಬಟ್ಟೆ ಇತ್ಯಾದಿಗಳನ್ನು ಸುಟ್ಟರು.

ಈ ಮೂಲಕ ವಿಶ್ವವಿದ್ಯಾಲಯ ಪರೀಕ್ಷೆಗಳನ್ನು ಮುಂದೂಡುವಂತೆ ಅದರ ಪ್ರಯತ್ನವನ್ನು ವಿಫಲಗೊಳಿಸಲು ಮರುದಿನ ಎಸ್.ಎಫ್.ಐ. ಉಪಕುಲ ಪತಿಗಳ [illegible] ಅಪರಾಧಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವ ಮನವಿಪತ್ರವನ್ನು ಸಲ್ಲಿಸಲಾಯಿತು. ಈ ಮೆರವಣಿಗೆಯ ಮೇಲೂ ಎ.ಬಿ.ಎ.ಪಿ. ಗೂಂಡಾಗಳು ಹಲ್ಲೆ ನಡೆಸಿದರು.

ಮಕ್ರಾನಾ ಗಲಭೆಗಳು ಪೂರ್ವಯೋಜಿತ

ರಾಜಸ್ಥಾನದಲ್ಲಿ ಇತ್ತೀಚೆಗೆ ಮಕ್ರಾನಾ ಮತ್ತು ಬಿಗೋಡ್‌ನಲ್ಲಿ ನಡೆದ ಗಲಭೆಗಳು ಪೂರ್ವಯೋಜಿತವಾಗಿದ್ದವು. ರಾಜ್ಯದಲ್ಲಿ ಹಿಂದೆಂದೂ ಇಷ್ಟು ತೀವ್ರ ಗಲಭೆಗಳು ನಡೆದಿರಲಿಲ್ಲ ಎಂದು ಈ ಗಲಭೆಗಳ ಅಧ್ಯಯನ ನಡೆಸಿದ ಸಿ.ಪಿ.ಐ(ಎಂ)ನ ಪ್ರತಿನಿಧಿ ಮಂಡಳಿ ತಿಳಿಸಿದೆ. ಅತ್ಯಂತ ವ್ಯವಸ್ಥಿತರೀತಿಯಲ್ಲಿ ಗಲಭೆಕೋರರು [illegible] ನಡೆಸುತ್ತಿದ್ದು, ಪೋಲೀಸರು ಮೂಕ ಪ್ರೇಕ್ಷಕರಾಗಿ ನಿಂತಿದ್ದರು. ಈ ಗಲಭೆಗಳಲ್ಲಿ ನಾಲ್ಕು ಮಂದಿ ಮುಗ್ಧರು ಪ್ರಾಣಕಳೆದುಕೊಂಡರು. ಕೋಟಿಗಟ್ಟಲೆ ರೂಪಾಯಿ ಬೆಲೆಯ ಆಸ್ತಿನಾಶ, ಲೂಟಿ ನಡೆಯಿತು.

ಒಂದು ಕೋಮಿನ ಕಿಡಿಗೇಡಿಗಳು ಇನ್ನೊಂದು ಕೋಮಿನ ವಿರುದ್ಧ ತೀವ್ರ ದ್ವೇಷ ಎಬ್ಬಿಸುವ ಪ್ರಚಾರ ನಡೆಸಿ ವಿವಿಧ ಮೊಹಲ್ಲಾಗಳಲ್ಲಿ ಗೋಡೆಗಳಲ್ಲಿ ಉದ್ರೇಕಕಾರಿ ಘೋಷಣೆ ಬರೆದರು. ಇದರಿಂದ ಈ ಎರಡು ಕೋಮುಗಳ ನಡುವೆ ಎಂತಹ ದ್ವೇಷವನ್ನು ಹುಟ್ಟಿಸಿಂದರೆ ಕ್ಷುಲ್ಲಕ ವಿಷಯಗಳಿಗೂ ಗಲಭೆ ನಡೆಯಲಾರಂಭಿಸಿತು.

ಈಗ ಕಾಂಗ್ರೆಸ್(ಐ) ಮತ್ತು ವಿರೋಧಿ ಕೋಮುವಾದಿ ಪಕ್ಷಗಳು ಪರಿಸ್ಥಿತಿಯ ರಾಜಕೀಯ ಲಾಭ ಗಿಟ್ಟಿಸುವುದರಲ್ಲಿ ನಿರತವಾಗಿವೆ. ಸರ್ಕಾರ ಗಲಭೆಕೋರರಿಗೆ ತಕ್ಷಣ ತಕ್ಕ ಶಿಕ್ಷೆ ವಿಧಿಸಬೇಕು, ಕುಟುಂಬಗಳಿಗೆ ಸಾಕಷ್ಟು ಪರಿಹಾರ ನೀಡಬೇಕೆಂದು ಒತ್ತಾಯಿಸಿರುವ ಅಧ್ಯಯನ ತಂಡ ಕೋಮು ಶಕ್ತಿಗಳು ಇನ್ನೂ ಸಕ್ರಿಯವಾಗಿವೆ. ಈ ಬಗ್ಗೆ ಜಾಗರೂಕತೆ ಮಾಡಬೇಕೆಂದು ಹೇಳಿದೆ. ಕಾಮ್ರೇಡ್ ಶಿವಪಾಲ್‌ಸಿಂಗ್ (ಎಂ.ಎಲ್.ಎ) ಮತ್ತು ಭಂವರ್‌ಲಾಲ್ ಟಾಕ್ಕ ಈ ಅಧ್ಯಯನ ತಂಡದ ಸದಸ್ಯರು.

ಬಿಹಾರ ವಿದ್ಯುತ್ ಕಾರ್ಮಿಕರ ಮತಪ್ರದರ್ಶನ

ಏಪ್ರಿಲ್ 6 ರಂದು ಬಿಹಾರದ ಎಲ್ಲೆಡೆಯಿಂದ ಸಾವಿರಾರು ಕಾರ್ಮಿಕರು ಪಾಟ್ನಾಕ್ಕೆ ಬಂದು ಒಂದು ದೊಡ್ಡ ಮೆರವಣಿಗೆ ನಡೆಸಿ ವಿದ್ಯುತ್ ಭವನದ ಎದುರು ಬೃಹತ್ ರ‍್ಯಾಲಿ ನಡೆಸಿದರು. ಸಿ.ಐ.ಟಿ.ಯು. ಗೆ ಸೇರಿದ ಬಿಹಾರ ರಾಜ್ಯ ವಿದ್ಯುತ್ ಪರಿಷದ್ ಫೀಲ್ಡ್ ಕಾಮಗಾರಿ ಯುನಿಯನ್ ಈ ರ‍್ಯಾಲಿಯನ್ನು ಸಂಘಟಿಸಿತ್ತು. ಎಲ್ಲಾ ಕಾಂಟ್ರಾಕ್ಟ್ ಕಾರ್ಮಿಕರನ್ನು ನಿಯಮಿತಗೊಳಿಸುವುದು, ವಿದ್ಯುತ್ ಮಂಡಳಿಯಲ್ಲಿ ಕಾಂಟ್ರಾಕ್ಟ್ ಪದ್ಧತಿ ಕೊನೆಗೊಳಿಸುವುದು, [illegible] [illegible] ನೀತಿ ಈ ಬೇಡಿಕೆಗಳ [illegible] ಕಾರ್ಮಿಕರು ಒತ್ತಾಯಿಸಿದರು.

ಸಭೆಯಲ್ಲಿ ಒಂದು ನಿರ್ಣಯ ವನ್ನು ಅಂಗೀಕರಿಸಿ ಮೇ 24-26 ರವರೆಗೆ [illegible] [illegible] [illegible] [illegible] [illegible] [illegible] [illegible] [illegible]

KRNW/BGS-312 MAG(2) PRB DECR 319-78/79

ಈ ವಾರ೦೦೦

ಚುನಾವಣಾ ತಂತ್ರ

ಲೋಕಸಭೆಯಲ್ಲಿ ಪ್ರಧಾನಿಯವರು ಅತ್ಯಂತ ತರಾತುರಿಯಲ್ಲಿ ಪಂಚಾಯತ್‌ರಾಜ್ ಸಂಬಂಧಿಸಿದಂತೆ ಮಂಡಿಸಿರುವ ಸಂವಿಧಾನ ತಿದ್ದುಪಡಿ ಮಸೂದೆಯು ಸುಧಾರಣೆಗೆ ಮಾಡಿರುವ ಪ್ರಾಮಾಣಿಕ ಪ್ರಯತ್ನಕ್ಕಿಂತ ಚುನಾವಣಾ ತಂತ್ರ ಎಂಬುದು ಸ್ಪಷ್ಟವಾಗಿ ಗೋಚರಿಸಿದೆ.

ಅತ್ಯಂತ ತರಾತುರಿಯಲ್ಲಿ ಮಾಡಲಾಗುತ್ತಿರುವ ಈ ಬದಲಾವಣೆಗಳು. ಕೇಂದ್ರವು ಈ ಮಸೂದೆಯು ಸಂಪೂರ್ಣವಾಗಿ ಆಲೋಚಿಸಿ ಮಾಡಿರುವ ಬದಲಾವಣೆಯಲ್ಲದೆ ಯಾವುದೇ ಮೂಲಭೂತ ಬದಲಾವಣೆ ಮಾಡುವ ಮುನ್ನ ಅದನ್ನು ಚೆನ್ನಾಗಿ ಜರಡಿ ಹಿಡಿದು ವಾಸ್ತವದ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ ಪರೀಕ್ಷಿಸಿದ ನಂತರ ಮಾಡುವ ಬದಲಾವಣೆ ಎಂಬ ಮಾತಿಗೆ ತದ್ವಿರುದ್ಧವಾಗಿದೆ.

ಈ ಬದಲಾವಣೆಯು ಈಗಾಗಲೇ ದುರ್ಬಲವಾಗಿರುವ ಪ್ರಜಾಸತ್ತೆ ರಚನೆಗೆ ಮತ್ತಷ್ಟು ಹಾನಿಯನ್ನುಂಟುಮಾಡಲಿದೆ. ಅಧಿಕಾರ ವಿಕೇಂದ್ರೀಕರಣ ಹಾಗೂ ಜನರಿಗೆ ಅಧಿಕಾರ ನೀಡುವ ಹೆಸರಿನಲ್ಲಿ ಇದು ನಡೆಯುತ್ತಿರುವುದು ಅತಿ ದೊಡ್ಡ ವ್ಯಂಗ್ಯ.

— 'ದಿ ಹಿಂದೂ' ಸಂಪಾದಕೀಯ —

ಜನತಾದಳದ ಜೈಪಾಲ್‌ರೆಡ್ಡಿ ಅವರಿಗಿಂತ ಎ ಐ ಎ ಡಿ ಎಂ ಕೆ ಸದಸ್ಯರ ಮೇಲೆ ಕೇಂದ್ರವು ಅತ್ಯಂತ ಹೆಚ್ಚಾಗಿ ಅವಲಂಬಿಸಿರುವುದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲು ತರಾತುರಿಯಿಂದ ಓಡಾಡುತ್ತಿರುವುದು ಬೋಫೋರ್ಸ್ ಅವ್ಯವಹಾರಗಳು ಚರ್ಚೆಗೆ ಬರುವ ಹಿನ್ನೆಲೆಯಲ್ಲಿ ಕಾಂಗ್ರೆಗೆ ಸೂಕ್ತ ಎನಿಸಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿ ಬೋಫೋರ್ಸ್‌ನ ಹಗರಣಕ್ಕೆ ಸಂಬಂಧಿಸಿ ಕಟುಟೀಕೆ ಮಾಡಿರುವುದು ಸರ್ಕಾರಕ್ಕೆ ಆತಂಕ ತಂದಿದೆ. ಈ ಎಲ್ಲಾ ಸತ್ಯಗಳನ್ನು ತುಳಿದುಹಾಕುವಲ್ಲಿ ಶಂಕರಾನಂದ ಸಮಿತಿ ತಾಳ್ಮೆಯಿಂದ ಕೈಗೊಂಡ ಎಲ್ಲಾ ಪ್ರಯತ್ನಗಳೂ ಎಲ್ಲಿ ವ್ಯರ್ಥವಾಗುವುದೋ ಎಂಬ ಆತಂಕ ಸಹಜವಾದದ್ದೇ.

— ದಿ ಸ್ಟೇಟ್ಸ್‌ಮನ್ ಸಂಪಾದಕೀಯ. —

ಸಫ್ದರ್ ಹಷ್ಮಿ ಬಗ್ಗೆ ತಯಾರಿಸಿರುವ ವಿಡಿಯೋ ಕ್ಯಾಸೆಟ್ ಅತ್ಯಂತ ಮನಕಲಕುವ ರೀತಿಯಲ್ಲಿದೆ. ಸಫ್ದರ್‌ಹಷ್ಮಿಯವರ ಬಾಳಸಂಗಾತಿ ಹಾಗೂ ಅವರ ತಾಯಿಯೊಡನೆ ನಡೆಸಿರುವ ಸಂದರ್ಶನ ಅತ್ಯಂತ ಮನಕಲಕುವ ರೀತಿಯಲ್ಲಿದೆ. ಬೀದಿನಾಟಕ. ಕಾವ್ಯ ಕ್ಷೇತ್ರಕ್ಕೆ ಅಮೋಘ ಕೊಡುಗೆ ನೀಡಿದ ಸಫ್ದರ್ ಹಷ್ಮಿಯವರಿಗೆ ಇದು ಅತ್ಮೀಯ ಕಾಣಿಕೆ. ಮಾನವೀಯ ಹಕ್ಕುಗಳಲ್ಲಿ ನಂಬಿಕೆಯಿಟ್ಟಿರುವ ಎಲ್ಲರೂ ಕೊಂಡುಕೊಳ್ಳಬೇಕಾದ ಕ್ಯಾಸೆಟ್.

— ದಿ ಎಕನಾಮಿಕ್ ಟೈಮ್ಸ್ ವಿಮರ್ಶೆ. —

★ ಪುಟ 1ರಿಂದ

ಇದೊಂದು ಪೂರ್ವಯೋಜಿತ ಹಲ್ಲೆಯೆಂಬುದು ಸ್ಪಷ್ಟವಾಗಿತ್ತು. ಗೂಂಡಾಗಳ ಹಲ್ಲೆ ನಡೆದದ್ದು ಸಾಯಂಕಾಲ ಏಳು ಗಂಟೆಗೆ. ಆದರೆ ಮಧ್ಯಾಹ್ನ ಎರಡು ಗಂಟೆಯಿಂದಲೇ ಪಕ್ಷದ ಕಛೇರಿಯ ಟೆಲಿಫೋನ್ ಸಂಪರ್ಕ ಕತ್ತರಿಸಲಾಗಿತ್ತು. ಆದರೆ ಇದು ಕಲ್ಕತ್ತಾದಲ್ಲಿ ತ್ರಿಪುರಾದ ಒಬ್ಬ ಕಾಂಗ್ರೆ ಮಂತ್ರಿ ಸುಜಿತ್ ದತ್ತಾನ ಸಂಬಂಧಿಕರೊಬ್ಬರ ಮನೆಯ ಮೇಲೆ ನಡೆದ ಹಲ್ಲೆಗೆ ಪ್ರತೀಕಾರವಾಗಿ ನಡೆಯಿತು ಎಂದು ಕಾಂಗ್ರೆ ಮುಖಂಡರು ವಿವರಿಸಲು ಪ್ರಯತ್ನಿಸುತ್ತಿದ್ದಾರೆ. ಸಿ.ಪಿ.ಐ. (ಎಂ) ಕಾರ್ಯಕರ್ತರು ಹಲ್ಲೆ ನಡೆಸಿ ಶ್ರೀಮಾನ್‌ದತ್ತಾರವರ ಹೆಂಡತಿ, ಮಗಳನ್ನು ಥಳಿಸಿದ್ದಾರೆ ಎಂದು ಶ್ರೀಮಾನ್ ದತ್ತಾ ಪತ್ರಿಕಾ ಕಛೇರಿಗಳಿಗೆ ಫೋನ್ ಮಾಡಿ ತಿಳಿಸಿದರು.

ಅಗರ್ತಲಾದಿಂದ ಈ "ಕಾರ್ಯಚರಣೆ" ನಂತರ ರಾಜ್ಯದ ಇತರ ಭಾಗಗಳಿಗೂ ಹರಡಿತು. ಬಿಶಾಲ್‌ಗಡ್‌ನಲ್ಲಿ ಏಳು ಪ್ರಮುಖ ಸ್ಥಳೀಯ ಮುಖಂಡರನ್ನು ಪೋಲೀಸ್ ಲಾಕಪ್ಪಿಗೊಯ್ದು ತೀವ್ರವಾಗಿ ಥಳಿಸಲಾಯಿತು. ಥಳಿಸುವಾಗ "ಇದು ಸುಖಲಾಲ್ ದಾಸ್ ಕೇಸಿನ ಹಗೆ ತೀರಿಸಲು ನಮಗೊಂದು ಅವಕಾಶ" ಎಂದು ಪೋಲೀಸರು ಕೇಕೆಹಾಕುತ್ತಿದ್ದರಂತೆ. ಸುಖಲಾಲ್ ದಾಸ್ ಪಕ್ಷದ ಒಬ್ಬ ಸ್ಥಳೀಯ ಕಾರ್ಯಕರ್ತ. ಅವರು ಒಬ್ಬ ಪೋಲೀಸ್ ಅಧಿಕಾರಿ ವಿರುದ್ಧ ಕಾನೂನು ಹೋರಾಟ ನಡೆಸಿ ಕೊನೆಗೂ ಆ ಅಧಿಕಾರಿಗೂ ಜೈಲು ಶಿಕ್ಷೆಯಾಗಿತ್ತು.

ಖೊವ್ಯಾನಲ್ಲಿಯೂ ಕಾಂಗ್ರೆ ಗೂಂಡಾಗಳು ಸುಜೀತ್ ದತ್ತಾರವರ ಹೆಂಡತಿಯ "ಅಪಹರಣ"ವನ್ನು "ವಿರೋಧಿಸಿ" ಸಿ.ಪಿ.ಐ. (ಎಂ) ಕಛೇರಿಯ ಮೇಲೆ. ಸಿ.ಪಿ.ಐ(ಎಂ) ಬೆಂಬಲಿಗರ ಮೇಲೆ ಹಲ್ಲೆ ನಡೆಸಿದರು.

ಆದರೆ ಅತ್ತ "ಅಪಹರಣಗೊಂಡ" ಮಹಿಳೆ. ಶ್ರೀಮತಿ ನಮಿತಾ ದತ್ತ ಕಲ್ಕತ್ತೆಯಲ್ಲಿ ಬೇರೆಯೇ ಪತ್ರಿಕಾ ಹೇಳಿಕೆ ನೀಡಿದ್ದಾರೆ. ತಾವು ಆ ಸಂಬಂಧಿಕರ ಮನೆಯಲ್ಲಿದ್ದಾಗ ಕೆಲವರು ಆ ಮನೆಯ ಮೇಲೆ ಹಲ್ಲೆ ನಡೆಸಿದರು. ಆದರೆ ಇದು ದರೋಡೆಗಾರರ ಕೃತ್ಯವಿರಬೇಕೆಂದು ತಾವು ಹಾಗೂ ನೆರೆಕೆರೆಯ ಜನಗಳು ನಂಬಿರುವುದಾಗಿ ಶ್ರೀಮತಿ ದತ್ತಾ ತಿಳಿಸಿದರು. ಇದರಲ್ಲಿ ರಾಜಕೀಯ ಶಕ್ತಿಗಳ ಕೈಯಿಲ್ಲ ಎಂದೂ ಅವರು ಹೇಳಿದರು. ಆದರೆ ತ್ರಿಪುರಾದಲ್ಲಿ ಕೆಲವರು ಇದಕ್ಕೆ ರಾಜಕೀಯ ಕೊಡುತ್ತಿದ್ದಾರೆ ಎಂಬುದನ್ನು. ಅವರ ಗಮನಕ್ಕೆ ತಂದಾಗ ಈ "ಅಪಹರಣ ಗೊಂಡ" ಮಹಿಳೆ ತಾನು ಅಂತಹ ಸುದ್ದಿಯನ್ನೇನೂ ತ್ರಿಪುರಾಕ್ಕೆ ಕಳುಹಿಸಿಲ್ಲ ಎಂದರು. ಶ್ರೀಮತಿದತ್ತಾರವರ ಹೇಳಿಕೆ ಬುಡವಿಲ್ಲದ್ದೆಂದು ಸುಜೀತ್ ದತ್ತಾ ಹೇಳುತ್ತಾರೆ!

ಏಕೆ ಈ ಹಲ್ಲೆ?

ಈ ಘಟನೆಯ ಮೊದಲು ಏಪ್ರಿಲ್ 27 ರಂದು ತ್ರಿಪುರಾದ ಆಡಿಶನಲ್ ಮುಖ್ಯ ಹಣಕಾಸು ಕಾರ್ಯದರ್ಶಿ, ಶ್ರೀ ಎಸ್.ವಿ. ಸುಬ್ರಮಣ್ಯಂರವರು ಅಗರ್ತಲಾದ ರಸ್ತೆಯೊಂದರಲ್ಲಿ ಪ್ರಜ್ಞಾಹೀನರಾಗಿ ಬಿದ್ದಿರುವುದು ಕಂಡು ಬಂದಿತ್ತು. ಅವರ ತಲೆಗೆ ತೀವ್ರ ಗಾಯಗಳಾಗಿದ್ದವು. ಶ್ರೀ ಸುಬ್ರಮಣ್ಯಂ ಕಾಂಗ್ರೆ - ಟಿ. ಎನ್. ವಿ. ಸರಕಾರದ ಹಲವಾರು ಕ್ರಮಗಳನ್ನು ವಿರೋಧಿಸಿದ್ದರಿಂದ ಅವರ ಬಗ್ಗೆ ಬಹಳ ಕಹಿ ಭಾವನೆ ಉಂಟಾಗಿದ್ದದ್ದು ಎಲ್ಲರಿಗೂ ಗೊತ್ತಿತ್ತು. ಸರಕಾರದ ಹೇಳಿಕೆ ಪ್ರಕಾರ ಶ್ರೀ ಸುಬ್ರಮಣ್ಯಂ "ಕಾಲು ಜಾರಿ ಬಿದ್ದಿದ್ದರು". ಆದರೆ ಒಂದು ವಾರವೂ ಪ್ರಜ್ಞಾ ಸ್ಥಿತಿಗೆ ಬರದಿದ್ದಾಗ ಅವರನ್ನು ಕಲ್ಕತ್ತೆಗೆ ವರ್ಗಾಯಿಸಲಾಯಿತು. ಅವರನ್ನು ಪರೀಕ್ಷಿಸಿದ ನರತಜ್ಞರು ಕೇವಲ ಕಾಲು ಜಾರಿ ಬಿದ್ದಿದ್ದರೆ ತಲೆಯಲ್ಲೆಲ್ಲಾ ಗಾಯಗಳು, ಒಂದು ಆಳ ಗಾಯ ಹಾಗೂ ಮೂಗು - ಬಾಯಿಗಳಿಂದ ರಕ್ತಸ್ರಾವ. ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಹತಾಶ ಕಾಂಗ್ರೆಸ್ (ಐ) ನ ಹೆಚ್ಚುತ್ತಿರುವ ಸರ್ವಾಧಿಕಾರ ಪ್ರವೃತ್ತಿ

★ ಪುಟ 1ರಿಂದ

ಸಂವಿಧಾನಕ್ಕೆ 59 ನೆಯ ತಿದ್ದುಪಡಿ ಮಾಡಿ ಅಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿ ಪ್ರಜಾಪ್ರಭುತ್ವವನ್ನು ಮಾಟಕುಮಾಡಲು ಕೇಂದ್ರ ಕಾಂಗ್ರೆಸ್ (ಐ) ಸರ್ಕಾರವು ಅಧಿಕಾರವನ್ನು ಪಡೆದುಕೊಂಡಿತು.

ಬೋ ಫೋರ್ಸ್ ಮೊದಲಾದ ಭ್ರಷ್ಟ ಪ್ರಕರಣಗಳ ಸುದ್ದಿಗಳನ್ನು ಪ್ರಕಟಿಸಲಾಗದಂತೆ ವೃತ್ತಪತ್ರಿಕೆಗಳ ಕುತ್ತಿಗೆ ಹಿಚುಕಲು ಮಾನನಷ್ಟ ಮಸೂದೆಯನ್ನು ರಾಜೀವ್ ಸರ್ಕಾರವು ಸಂಸತ್ತಿನಲ್ಲಿ ತಂದಿದ್ದಿತು.

ಗೋಸುಂಬೆತನದ ಮಾತುಗಳು

ಕಾಂಗ್ರೆಸ್ (ಐ) ಆಡಳಿತದಲ್ಲಿರುವ ರಾಜ್ಯಗಳಲ್ಲಿ ಹರಿಜನರ ಮೇಲೆ ದಬ್ಬಾಳಿಕೆ. ಮಹಿಳೆಯರ ಮಾನಭಂಗದ ಪ್ರಕರಣಗಳು ದಿನನಿತ್ಯ ನಡೆಯುತ್ತಿರುವುದು ವರದಿಯಾಗುತ್ತಿದೆ.

ದೇವರಾಲ ಸತಿ ಪ್ರಕರಣದ ಬಗ್ಗೆ ಮೌನದಿಂದಿದ್ದ ಕಾಂಗ್ರೆಸ್ (ಐ) ಲಕ್ಷಾಂತರ ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ನಿರಾಕರಿಸಲು ಷಾಬಾನು ಕೇಸಿನಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಬದಲಿಸಿದ ಕಾಂಗ್ರೆ ಮಹಿಳೆಯ ಏಳಿಗೆಯ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗಿದೆ.

ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದವನ್ನು ಇತ್ಯರ್ಥ ಮಾಡದೆ ಕೋಮು ಕಲಹವು ಬೆಳೆಯಲು ಬಿಟ್ಟಿರುವ ಕಾಂಗ್ರೆಸ್ (ಐ) ಕೋಮುವಾದಿ ಮತ್ತು ಜಾತೀಯವಾದಿ ಪಕ್ಷಗಳೊಂದಿಗೆ ಕೇರಳದಲ್ಲಿ ಸಂಯುಕ್ತ ರಂಗದಲ್ಲಿರುವ ಕಾಂಗ್ರೆ ಕೋಮು ಸೌಹಾರ್ದತೆಯ ಬಗ್ಗೆ ಮಾತನಾಡುವುದು, ಪ್ರತ್ಯೇಕತಾವಾದಿ, ಟಿ. ಯು. ಜೆ. ಎಸ್‌ನೊಂದಿಗೆ ಸೇರಿ ಆಡಳಿತ ನಡೆಸುತ್ತಿರುವ ಕಾಂಗ್ರೆ ದೇಶದ ಐಕ್ಯತೆ ಸಮಗ್ರತೆಗಳ ಕುರಿತು ಮಾತನಾಡುವುದು ಹಾಸ್ಯಾಸ್ಪದವಾಗಿದೆ.

ಕಾಂಗ್ರೆಗೆ ಸ್ಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ, ಆಯಾ ರಾಜ್ಯದ ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸದೆ. ಕಾಂಗ್ರೆಸ್ (ಐ) ಮುಖಂಡರನ್ನು ಸಿ.ಬಿ.ಐ. ಅಧಿಕಾರಿಯಾಗಿದ್ದವರನ್ನು ರಾಜ್ಯಪಾಲರನ್ನಾಗಿ ನೇಮಿಸಿ ಉಪದ್ರವ ಕೊಡುವುದು ಆ ರಾಜ್ಯಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಹಣವನ್ನು ಕೊಡದಿರುವುದು, ಸರಬರಾಜು ಮಾಡುವ ಅಹಾರ ಧಾನ್ಯಗಳ ಪ್ರಮಾಣವನ್ನು ಕಡಿತ ಮಾಡುವುದರಲ್ಲಿ ವಿಳಂಬ ಮಾಡುವುದು. ಆ ರಾಜ್ಯಗಳಲ್ಲಿರುವ ಕಾಂಗ್ರೆಸ್ (ಐ) ಪಕ್ಷಗಳು ಅಸ್ಥಿರತೆಯನ್ನುಂಟು ಮಾಡುವ ಕೃತ್ಯಗಳನ್ನು ಎಸಗುತ್ತಿರುವುದು ನಡೆಯುತ್ತಿವೆ. ಪ್ರಧಾನ ಮಂತ್ರಿಯವರು ನೇರವಾಗಿ ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸುವುದು ರಾಜ್ಯ ಸರ್ಕಾರಗಳನ್ನು ಬದಿಗಿರಿಸಿ ಕೇಂದ್ರವು ಜಿಲ್ಲಾ ಪರಿಷತ್ ಮಂಡಲ ಪಂಚಾಯತ್‌ಗಳನ್ನು ನೇರವಾಗಿ ಕೇಂದ್ರದ ನಿಯಂತ್ರಣ ಪಡಿಸುವ ವಿಚಾರ ಅಧಿಕಾರಶಾಹಿ ಕ್ರಮಗಳಾಗಿವೆ.

ದೇಶದಲ್ಲಿ ಹತ್ತು ಕೋಟಿಗಿಂತಲೂ ಹೆಚ್ಚು ನಿರುದ್ಯೋಗಿಗಳಿರುವಾಗ ಸ್ವಯಂಚಾಲೀಕರಣ, ಗಣಕೀರಣಗಳ ಮೂಲಕ ನಿರುದ್ಯೋಗವನ್ನು ಹೆಚ್ಚಲು ಕಾರಣವಾಗಿರುವ ಕಾಂಗ್ರೆಸ್ (ಐ) ಕೇಂದ್ರ ಸರ್ಕಾರವು ಎನ್. ಆರ್. ಇ. ಪಿ., ಆರ್. ಎಲ್. ಇ. ಜಿ. ಪಿ. ಗಳಂತಹ ಯೋಜನೆಗಳನ್ನು ತೆಗೆದು ಜವಾಹರ್ ರೋಜ್ಗಾರ್ ಎಂಬ ಯೋಜನೆಯ ಬಗ್ಗೆ ವಿಪರೀತವಾದ ಪ್ರಚಾರ ಮಾಡುವ ಮೂಲಕ ಗ್ರಾಮೀಣ ನಿರ್ಮೂಲವನ್ನು ಕಡಿಮೆ ಮಾಡುವ ಭ್ರಮೆಯನ್ನು ಹುಟ್ಟಿಸುತ್ತಿದೆ.

ಲೋಕ ಸಭಾ ಚುನಾವಣೆ ನಡೆಯಬೇಕಾಗಿರುವ ವರ್ಷದಲ್ಲಿ ಕರ್ನಾಟಕದಲ್ಲಿ ಜನತಾದಳದಲ್ಲಿದ್ದ ಗುಂಪುಗಾರಿಕೆಯನ್ನು ಕೆಲವರಲ್ಲಿದ್ದ ಅತೃಪ್ತಿಯನ್ನು ಉಪಯೋಗಿಸಿಕೊಂಡು ಜನತಾದಳ ಸರ್ಕಾರವನ್ನು ವಜಾ ಮಾಡಿ ವಿಧಾನ ಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಡಳಿತವನ್ನು ಹೇರಿದ ಕಾಂಗ್ರೆಸ್ (ಐ) ಸರ್ಕಾರವು ಇತರ ಕಾಂಗ್ರೆಸ್ಸೇತರ ಸರ್ಕಾರಗಳ ಮೇಲೆ ಎರಗುವ ಸೂಚನೆಗಳಿವೆ.

ಮಹತ್ವದ ಚುನಾವಣೆ:-

ಮುಂಬರುವ ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಅಖಿಲ ಭಾರತ ಮಹತ್ವವಿದೆ. ಈ ಚುನಾವಣೆಯ ನಂತರ ಲೋಕಸಭಾ ಚುನಾವಣೆ, ಬೇರೆ ರಾಜ್ಯಗಳ ವಿಧಾನ ಸಭಾ ಚುನಾವಣೆಗಳು ನಡೆಯಬೇಕಾಗಿರುವುದರಿಂದ, ಕರ್ನಾಟಕ ವಿಧಾನ ಸಭಾ ಚುನಾವಣೆಯ ಫಲಿತಾಂಶವು, ಅನಂತರ ನಡೆಯುವ ಚುನಾವಣೆಗಳ ಮೇಲೆ, ದೇಶದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ, ದೇಶದ ಐಕ್ಯತೆ, ಸಮಗ್ರತೆಗಳ ರಕ್ಷಣೆಯ ಮೇಲೆ ಪ್ರಭಾವ ಬೀರಲಿದೆ.

ಜನರ ಸಂಕಷ್ಟಗಳನ್ನು ಹೆಚ್ಚಿಸಿ, ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸಿ, ತನ್ನ ಪಕ್ಷದ ಒಳಗೆ ಅನೇಕ ವರ್ಷಗಳಿಂದ ಚುನಾವಣೆ ನಡೆಸದೆ, ದೇಶದ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ ಬೋಫೋರ್ಸ್, ಪಶ್ಚಿಮ ಜರ್ಮನಿಯಿಂದ ಜಲಾಂತರ್ಗಾಮಿ ವ್ಯವಹಾರಗಳಲ್ಲೇ ಭ್ರಷ್ಟಾಚಾರವೆಸಗಿರುವ ಕೆಟ್ಟ ದಾಖಲೆಯುಳ್ಳ ಕಾಂಗ್ರೆಸ್ (ಐ) ಪಕ್ಷವು ಮುಂದಿನ ಚುನಾವಣೆಯಲ್ಲಿ ಗೆದ್ದು ಕರ್ನಾಟಕದ ಜನತೆಗೆ ಒಳ್ಳೆಯ ಆಡಳಿತವನ್ನು ಒದಗಿಸುವ ಭ್ರಮೆಯನ್ನುಂಟು ಮಾಡುವ ಕಪಟ ಮಾತುಗಳನ್ನಾಡುತ್ತಿದೆ.

ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕರಾಳ ದಾಖಲೆಯಿರುವ ಕುಖ್ಯಾತ, ಪ್ರಜಾಪ್ರಭುತ್ವ ವಿರೋಧಿ, ಅಧಿಕಾರಶಾಹಿ ಕಾಂಗ್ರೆಸ್ (ಐ) ಪಕ್ಷವನ್ನು ಸೋಲಿಸಬೇಕೆಂದು ಕರ್ನಾಟಕದ ಜನತೆಗೆ ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಮನವಿ ಮಾಡಿಕೊಂಡು, ಇದಕ್ಕಾಗಿ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು ಒಂದಾಗಿ ಹೋರಾಡಬೇಕೆಂದು ಮನವಿ ಮಾಡಿಕೊಳ್ಳುತ್ತದೆ.

ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಜನರಿಗೆ ವಿವರಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ತಿಂಗಳ 10 ರಿಂದ ಜೂನ್ 1 ರ ವರೆಗೆ ಬಹಿರಂಗ ಸಭೆಗಳನ್ನು ನಡೆಸಲು ರಾಜ್ಯ ಸಮಿತಿಯು ಕೆಳ ಸಮಿತಿಗಳಿಗೆ ನಿರ್ದೇಶನ ಕೊಡುತ್ತದೆ.

★ ★ ★

ಮೇ 9 ರಂದು ದೇಶಾದ್ಯಂತ ಪ್ರತಿಭಟನೆ

ಈ ಘಟನೆ ತ್ರಿಪುರಾ ಸರಕಾರದ ಮೇಲೆ ಕರಿ ನೆರಳು ಹಾಸಿತ್ತು. ಇದರಿಂದ ತಪ್ಪಿಸಿಕೊಳ್ಳಲು ಕಾಂಗ್ರೆ ಸಿ.ಪಿ.ಐ. (ಎಂ) ಮೇಲೆ ಈ ಹಲ್ಲೆಗಳನ್ನು ಯೋಜಿಸಿತ್ತು ಎಂಬುದು ಈಗ ಸ್ಪಷ್ಟವಾಗಿದೆ.

ಮೇ 9 ರಂದು ಪಕ್ಷದ ಕರೆಯ ಮೇರೆಗೆ ತ್ರಿಪುರಾದ್ಯಂತ ಭಾರೀ ಪ್ರತಿಭಟನೆಗಳು ನಡೆದವು. ಅಗರ್ತಲಾದಲ್ಲಿ ಕಾಂಗ್ರೆಗಳ ಬೆದರಿಕೆಗಳನ್ನೂ ಲೆಕ್ಕಿಸದೆ ಸಾವಿರಾರು ಜನ ಶಿಶು ಉದ್ಯಾನದಲ್ಲಿ ಸೇರಿದರು. ರಾಜ್ಯ ಸೆಕ್ರೆಟಾರಿಯೆಟ್ ಸದ್ಯಸರಾದ ದಶರಥ್‌ದೇಬ್, ಬೈದ್ಯನಾಥ್ ಮಜುಂದಾರ್ ಮತ್ತು ದಿನೇಶ್‌ದೇಬ್ ಬರ್ಮಾ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾಂ. ದಶರಥ್‌ದೇಬ್ ಭಯೋತ್ಪಾದಕತೆಯಿಂದ ಕಮ್ಯುನಿಸ್ಟರನ್ನು ನಾಶಗೊಳಿಸಲು ಸಾಧ್ಯವಿಲ್ಲ. ಹಿಟ್ಲರ್ ಮುಸೊಲಿನಿಗಳಿಗೂ ಸಾಧ್ಯವಾಗಲಿಲ್ಲ ಎಂದು ಎಚ್ಚರಿಸಿದರು. ಈ ಹಲ್ಲೆ ಕಮ್ಯುನಿಸ್ಟರ ಮೇಲಷ್ಟೇ ಸೀಮಿತಗೊಳ್ಳುವುದಿಲ್ಲ. ಆದ್ದರಿಂದ ದೇಶಾದ್ಯಂತ ಇದರ ವಿರುದ್ಧ ಪ್ರತಿರೋಧ ಕಟ್ಟಬೇಕೆಂದು ಅವರು ಕರೆ ನೀಡಿದರು.

ಬೆಂಗಳೂರಿನಲ್ಲಿ ಪ್ರತಿಭಟನೆ

ಬೆಂಗಳೂರಿನಲ್ಲಿಯೂ ಈ ಹಲ್ಲೆಯ ವಿರುದ್ಧ ಪಕ್ಷದ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು. ರಾಜ್ಯಪಾಲರಿಗೆ ಪ್ರಜಾಸತ್ತೆಯ ಮೇಲೆ ಈ ಸರ್ವಾಧಿಕಾರೀ ಹಲ್ಲೆಯನ್ನು ಪ್ರತಿಭಟಿಸುವ ಮನವಿ ಪತ್ರ ಸಲ್ಲಿಸಲಾಯಿತು. ಈ ಪ್ರತಿಭಟನೆಯ ವೇಳೆಯಲ್ಲೂ ಕೇಂದ್ರದ ಆಳುವ ಪಕ್ಷದ ಏಜೆಂಟರಂತೆ ವರ್ತಿಸಲು ರಾಜ್ಯದ ರಾಜ್ಯಪಾಲ ಆಳ್ವಿಕೆ ಆಗಲೇ ಆರಂಭಿಸಿರುವುದು ಕಂಡು ಬಂತು.

ಪಾಲಿಟ್‌ಬ್ಯೂರೋ ಖಂಡನೆ

ತ್ರಿಪುರಾದಲ್ಲಿನ ಈ ಹಲ್ಲೆಗಳನ್ನು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ. ಜನಸಾಮಾನ್ಯರಿಂದ ದೂರ ಸರಿಯುತ್ತಾ ಹೋದಂತೆ ಕಾಂಗ್ರೆಸ್ (ಐ) ಸಾರ್ವಜನಿಕ ಅಭಿಪ್ರಾಯವನ್ನು ಬಗ್ಗುಬಡಿಯಲು ಇಂತಹ ಗೂಂಡಾಗಿರಿಗೆ ಹೆಚ್ಚೆಚ್ಚು ಶರಣಾಗುತ್ತದೆ ಎಂದಿರುವ ಪಾಲಿಟ್ ಬ್ಯೂರೋ ದೇಶದ ಪ್ರಜಾಪ್ರಭುತ್ವ ಶಕ್ತಿಗಳು ತ್ರಿಪುರಾದ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲಕ್ಕೆ ನಿಲ್ಲಬೇಕೆಂದು ಕರೆ ನೀಡಿದೆ.

ಕಲ್ಕತ್ತೆಯಲ್ಲಿ ಈಗ ಚಿಕಿತ್ಸೆ ಪಡೆಯುತ್ತಿರುವ ತ್ರಿಪುರಾ ಸರಕಾರದ ಆಡಿಶನಲ್ ಮುಖ್ಯ ಕಾರ್ಯದರ್ಶಿ ಮತ್ತು ಹಣಕಾಸು ಇಲಾಖೆಯ ಕಾರ್ಯದರ್ಶಿ ಶ್ರೀಯುತ ಸುಬ್ರಮಣ್ಯಂರವರಿಗೆ ಈಗ ಪ್ರಜ್ಞೆ ಮರಳಿದೆಯೆಂದು ತಿಳಿದು ಬಂದಿದೆ. ಅವರ ಮೇಲೆ ಈ ರಾಜಕೀಯ, ಹಲ್ಲೆ ತಮ್ಮ ಕಾನೂನು ಬಾಹಿರ ಹಾಗೂ ಭ್ರಷ್ಟ ನಡವಳಿಕೆಗಳಿಗೆ ಉನ್ನತ ಅಧಿಕಾರಿಗಳ ಸಮ್ಮತಿ ನೀಡುವಂತೆ ಅವರನ್ನು ಧೃತಿಗೆಡಿಸುವುದಕ್ಕಾಗಿಯೇ ಮಾಡಲಾಗಿದೆ. ಈ ಬಗ್ಗೆ ಸಿ.ಬಿ.ಐ. ತನಿಖೆ ನಡೆಸಬೇಕೆಂದು ಪಕ್ಷ ಒತ್ತಾಯಿಸಿದೆ.

★ ★ ★ ★ ★

Printed and published by P.RAMACHANDRA RAO on behalf of communist party of India (Marxist), Karnataka State committee L-56, K.V. Temple Street, Sulthanpet, Bangalore-560 053. Phone.No. 75331. Editor. P.RAMACHANDRA RAO. Managing ... Prakashana, Shobha Lodge Complex, 5th main Road, Gandhinagar ...